ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 16 ಮಂಗಳವಾರ 2025

ಮೈಸೂರು ಮಿತ್ರ 46 ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 150 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಮರದ ಅಂಬಾರಿ ಹೊತ್ತು ನಿರಾಳವಾಗಿ ಬನ್ನಿಮಂಟಪ ತಲುಪಿದ ಕ್ಯಾಪ್ಟನ್ ಅಭಿಮನ್ಯು

- ಮಿನಿ ಜಂಬೂಸವಾರಿಯಂತೆ ಕಂಗೊಳಿಸಿದ ಅಂಬಾರಿ ತಾಲೀಮು
- ಮಾರ್ಗದುದ್ದಕ್ಕೂ ಸಾಲುಗಟ್ಟಿ ನಿಂತು ಫೋಟೋ ಕ್ಲಿಕ್ಕಿಸಿಕೊಂಡ ಜನ

ಮೈಸೂರು, ಸೆ.15(ಎಸ್‌ಬಿಡಿ)– ದಸರಾ ಗಜಪಡೆಗೆ 'ಮರದ ಅಂಬಾರಿ' ಹೊರುವ ತಾಲೀಮು ಸೋಮವಾರ ಆರಂಭಗೊಂಡಿದ್ದು, ಮೊದಲ ದಿನವೇ ಕ್ಯಾಪ್ಟನ್ 'ಅಭಿಮನ್ಯು' ಅರಮನೆ ಅಂಗಳದಿಂದ ಸಾಗಿ ಬನ್ನಿಮಂಟಪ ಗುರಿ ತಲುಪಿದ.

ಮರದ ಅಂಬಾರಿ ಸೇರಿ 750 ಕೆಜಿ ಭಾರ ಹೊತ್ತಿದ್ದ ಅಭಿಮನ್ಯು ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಹೇಮಾವತಿ ಜೊತೆ ಗಾಂಭೀರ್ಯದಿಂದ ಹೆಜ್ಜೆ ಹಾಕಿದರೆ, ಮಹೇಂದ್ರ, ಸುಗ್ರೀವ, ಗೋಪಿ, ಭೀಮ, ಶ್ರೀಕಂಠ, ರೂಪ, ಧನಂಜಯ, ಲಕ್ಷ್ಮೀ, ಪ್ರಶಾಂತ, ಕಂಜನ್ ಹಾಗೂ ಏಕಲವ್ಯ ಶಿಸ್ತಿನಿಂದ ಹಿಂಬಾಲಿಸಿದರು. ಮಾವುತ ವಸಂತನ ಆಜ್ಞೆಯಂತೆ ಸಾಗಿದ ಅಭಿಮನ್ಯು, ನಿರಾಯಾಸವಾಗಿ ತಾಲೀಮು ಪೂರ್ಣಗೊಳಿಸುವಲ್ಲಿ ಯಶಸ್ವಿಯಾದನು. ಈ ಹಿಂದೆ ಪೂರ್ಣ ತಾಲೀಮು ಸಂದರ್ಭದಲ್ಲಿ ಗಜಪಡೆ ಬೆಂಗಾವಲಾಗಿ ಕೊನೆಯಲ್ಲಿ ಬರುತ್ತಿದ್ದ ಅರ್ಜುನನ ಜವಾಬ್ದಾರಿಯನ್ನು ಇಂದು ಏಕಲವ್ಯ ವಹಿಸಿದ್ದ.

ಮಿನಿ ದಸರಾದಂತಿತ್ತು 'ಮರದ ಅಂಬಾರಿ' ಹೊರುವ ತಾಲೀಮು ಮಿನಿ ದಸರಾ ಮೆರವಣಿಗೆಯಂತೆ ಕಂಗೊಳಿಸಿತು. ಅರಮನೆ ವೀಕ್ಷಣೆಗೆ ■ 6ನೇ ಪುಟಕ್ಕೆ



ಮೈಸೂರು ದಸರಾ ಮಹೋತ್ಸವದ ಅತ್ಯಾಕರ್ಷಕ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಗಜಪಡೆಯ ಅಂತಿಮ ಹಂತದ ತಾಲೀಮು ಆರಂಭಗೊಂಡಿದ್ದು, ಮೊದಲ ದಿನವಾದ ಸೋಮವಾರ ಕ್ಯಾಪ್ಟನ್ ಅಭಿಮನ್ಯು 'ಮರದ ಅಂಬಾರಿ' ಹೊತ್ತು ಪೂರ್ಣ ತಾಲೀಮನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ.

ಇಂದು 'ಸಿಂಹಾಸನ' ಜೋಡಣೆ

ಅರಮನೆಗೆ ಅರ್ಧ ದಿನ ಪ್ರವಾಸಿಗರ ಪ್ರವೇಶ ನಿರ್ಬಂಧ

ಮೈಸೂರು, ಸೆ.15(ಎಂಟಿವೈ)– ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯ ಖಾಸಗಿ ದರ್ಬಾರ್‌ಗಾಗಿ ನಾಳೆ(ಸೆ.16) ಅರಮನೆಯಲ್ಲಿನ ಸ್ಟ್ರಾಂಗ್ ರೂಮ್ ನಿಂದ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಮಾಡಲಿದ್ದು, ಅದಕ್ಕಾಗಿ ಮಧ್ಯಾಹ್ನ 1 ಗಂಟೆವರೆಗೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ಬಿಗಿ ಭದ್ರತೆಯೊಂದಿಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರ ಸಮ್ಮುಖದಲ್ಲಿ ನಾಳೆ ಸಿಂಹಾಸನ ಹಾಗೂ ಬೆಳ್ಳಿಯ ಭದ್ರಾಸನ ಜೋಡಣಾ ಕಾರ್ಯ ನಡೆಯಲಿದೆ. ಇದರಿಂದ ಬೆಳಗ್ಗೆ 8.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ. ಅರಮನೆಯಲ್ಲಿರುವ ಸ್ಟ್ರಾಂಗ್ ರೂಂನಿಂದ ಚಿನ್ನದ ಸಿಂಹಾಸನದ ಬಿಡಿಭಾಗ ಹಾಗೂ ಬೆಳ್ಳಿಯ ಭದ್ರಾಸನದ ಬಿಡಿ ಭಾಗಗಳನ್ನು ಶಸ್ತ್ರಸಜ್ಜಿತ ಪೊಲೀಸರ ಭದ್ರತೆಯಲ್ಲಿ ಅರಮನೆ ಸಿಬ್ಬಂದಿ ದರ್ಬಾರ್ ಹಾಲ್‌ಗೆ ತಂದು ಜೋಡಣೆ ಮಾಡಲಿದ್ದಾರೆ. ಬೆಳ್ಳಿ ಭದ್ರಾಸನವನ್ನು 'ಕನ್ನಡಿ ತೊಟ್ಟಿ'ಯಲ್ಲಿ ಜೋಡಣೆ ಮಾಡಲಾಗುತ್ತದೆ. ಸಿಂಹಾಸನ ಜೋಡಣಾ ಕಾರ್ಯದಿಂದಾಗಿ ಅರಮನೆಯ ಸ್ಟ್ರಾಂಗ್ ರೂಮ್‌ನಿಂದ ದರ್ಬಾರ್ ಹಾಲ್‌ವರೆಗಿನ ವಿವಿಧೆಡೆ ಅಳವಡಿಸಿರುವ ■ 6ನೇ ಪುಟಕ್ಕೆ



ಕುರುಬ ಸಮುದಾಯ ಎಸ್‌ಟಿಗೆ ಸೇರ್ಪಡೆ ಸಿದ್ಧತೆ

- ಇಂದು ವಿವಿಧ ಇಲಾಖೆಗಳ ಅಧಿಕಾರಿಗಳ ಮಹತ್ವದ ಸಭೆ
- ಈಗಾಗಲೇ ಕಾಡು ಕುರುಬ, ಜೇನು ಕುರುಬ ಸೇರಿ ಹಲವು ಉಪ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ

ಬೆಂಗಳೂರು, ಸೆ.15(ಕೆಎಂಶಿ)– ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸಲು ರಾಜ್ಯ ಸರ್ಕಾರ ಕಸರತ್ತು ಆರಂಭಿಸಿದೆ.

ಈ ಸಮುದಾಯಕ್ಕೆ ಸೇರಿದ ಕಾಡು ಕುರುಬ, ಜೇನು ಕುರುಬ ಸೇರಿದಂತೆ ಕೆಲವು ಉಪಪಂಗಡಗಳನ್ನು ಈಗಾಗಲೇ ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ.

ಇದೀಗ ಇಡೀ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸರ್ಕಾರದ ಮೇಲೆ ಒತ್ತಡ ಬಂದಿರುವ ಹಿನ್ನೆಲೆಯಲ್ಲಿ ನಾಳೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಹತ್ವದ ಸಭೆ ನಡೆಸಲಿದ್ದಾರೆ. ಸರ್ಕಾರದ ಆದೇಶದ ಮೇರೆಗೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ಸಭೆ ಕರೆದಿದ್ದು, ಈ ಸಭೆಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮತ್ತು ಸಂಶೋಧನಾ ಸಂಸ್ಥೆ ಅಧಿಕಾರಿಗಳಿಗೂ ಆಹ್ವಾನ ನೀಡಲಾಗಿದೆ.

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಸಂಬಂಧ ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನೀಡಿರುವ ವರದಿ ಮತ್ತು ಶಿಫಾರಸಿನ ಮೇರೆಗೆ ಸರ್ಕಾರ ಮಹತ್ವದ ತೀರ್ಮಾನ ಕೈಗೊಳ್ಳಲು ಮುಂದಾಗಿದೆ.

ಸಮಾಜದಲ್ಲಿ ಕುರುಬ ಸಮುದಾಯ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಭಾರಿ ಹಿಂದುಳಿದಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಆ ಸಮಾಜದ ಮುಖಂಡರು ಹಾಗೂ ತಜ್ಞರು ಅಂಕಿ–ಅಂಶಗಳ ಸಮೇತ ಈ ಹಿಂದೆಯೂ ಸರ್ಕಾರವನ್ನು ಒತ್ತಾಯಿಸಿದ್ದರು. ಇದರ ಜೊತೆಗೆ ಬುಡಕಟ್ಟು ಸಂಸ್ಥೆ ನೀಡಿರುವ ವರದಿ ಆಧಾರದ ಮೇಲೆ ಪರಿಶಿಷ್ಟ ಪಂಗಡಗಳ ಇಲಾಖೆ ಈ ಬಗ್ಗೆ ತೀರ್ಮಾನಿಸಲು ಸೆಪ್ಟೆಂಬರ್ 16 ರಂದು ಸಭೆ ಕರೆದಿದೆ. ■ 6ನೇ ಪುಟಕ್ಕೆ

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಿದ

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳೆಲ್ಲಾ ವಜಾ

- ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಮೂವರು ಹೈಕೋರ್ಟ್‌ನಲ್ಲಿ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು
- ಶಿಷ್ಟಾಚಾರ ಬಿಡಿ; ನಿಮಗಿರುವ ಸಾಂವಿಧಾನಿಕ, ಕಾನೂನಾತ್ಮಕ ಹಕ್ಕೇನು!?; ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಒಳಗೊಂಡ ಪೀಠದ ಪ್ರಶ್ನೆ

ಬೆಂಗಳೂರು, ಸೆ.15(ಕೆಎಂಶಿ)–ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್‌ರನ್ನು ಆಹ್ವಾನಿಸಿರುವ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಕರ್ನಾಟಕ ಹೈಕೋರ್ಟ್ ಇಂದು ವಜಾಗೊಳಿಸಿದೆ. ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಅರ್ಜಿ ಸಲ್ಲಿಸಿ, ಪ್ರಸ್ತುತ ವರ್ಷದ ದಸರಾ ಮಹೋತ್ಸವ ಉದ್ಘಾಟನೆಗೆ ಬಾನು ಮುಷ್ತಾಕ್‌ಗೆ ನೀಡಿರುವ ಆಹ್ವಾನ ಹಿಂಪಡೆಯಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದ್ದರು.



ಬಾನು ಮುಷ್ತಾಕ್

ಮಾಜಿ ಸಂಸದ ಪ್ರತಾಪ್ ಸಿಂಹ ಜೊತೆ ಬೆಂಗಳೂರಿನ ಉದ್ಯಮಿ ಟಿ.ಗಿರೀಶ್‌ಕುಮಾರ್, ಅಭಿನವ ಭಾರತ್ ಪಾರ್ಟಿ ರಾಷ್ಟ್ರೀಯ ಉಪಾಧ್ಯಕ್ಷೆ ಆರ್.ಸೌಮ್ಯಾ ಅವರುಗಳು ಮೂರು ಪ್ರತ್ಯೇಕ ಅರ್ಜಿ ಗಳನ್ನು ಸಲ್ಲಿಸಿದ್ದರು. ■ 6ನೇ ಪುಟಕ್ಕೆ

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಮಾಡಬಾರದು ಅನ್ನೋ ಪ್ರತಾಪ್ ಸಿಂಹ ಮೂರ್ಖರಲ್ಲವೇ!

ಬೆಂಗಳೂರು, ಸೆ.15– ಬಾನು ಮುಷ್ತಾಕ್ ದಸರಾ ಉದ್ಘಾಟನೆ ಮಾಡಬಾರದು ಎಂಬ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ನಾಯಕರ ವಿರುದ್ಧ ಸಿಎಂ ಸಿದ್ದರಾಮಯ್ಯ ಆಕ್ರೋಶ ಹೊರಹಾಕಿದ್ದಾರೆ.



ಸಿದ್ದರಾಮಯ್ಯ

ವಿಧಾನಸೌಧದಲ್ಲಿ ಮಾತನಾಡಿದ ಅವರು, ಪ್ರತಾಪ್ ಸಿಂಹ ಹೆಸರು ಹೇಳದೆ ವಾಗ್ದಾಳಿ ನಡೆಸಿದರು. ಬಾನು ಮುಷ್ತಾಕ್ ಅವರನ್ನು ಚಾಮುಂಡಿ ಬೆಟ್ಟ ಹತ್ತಬಾರದು ಅಂತಾರೆ. ಪೂಜೆ ಮಾಡಬಾರದು ಅಂತಾರೆ. ನನಗೆ ಅರ್ಥ ಆಗಲ್ಲ. ನಾವು ಜಾತ್ಯಾತೀತ ■ 6ನೇ ಪುಟಕ್ಕೆ



ತರಾತುರಿಯಲ್ಲಿ ಅಗ್ರಹಾರದ ಗಾಡಿಚೌಕದಲ್ಲಿ ದರ್ಗಾ ನಿರ್ಮಾಣಕ್ಕೆ ಸಿದ್ಧತೆ: ಶಾಸಕ ಶ್ರೀವತ್ಸ ಆಕ್ಷೇಪ

ಮೈಸೂರು, ಸೆ.15(ಎಂಕೆ)–ದಸರಾ ಉದ್ಘಾಟಕರ ಆಯ್ಕೆಯಲ್ಲಾಗಿರುವ ಪರ–ವಿರೋಧ, ಮದ್ದೂರು ಗಲಾಟೆ ನಡುವೆ ಅಕ್ರಮವಾಗಿ ತರಾತುರಿಯಲ್ಲಿ ಅಗ್ರಹಾರ ಗಾಡಿಚೌಕದಲ್ಲಿ ದರ್ಗಾ ನಿರ್ಮಾಣ ಸಂಬಂಧ ಮೈಸೂರು ನಗರಪಾಲಿಕೆ ಆಯುಕ್ತರು ನೋಟಿಫಿಕೇಶನ್ ಹೊರಡಿಸಿದ್ದಾರೆ ಎಂದು ಕೆ.ಆರ್. ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಅಗ್ರಹಾರ 101 ಗಣಪತಿ ದೇವಸ್ಥಾನ ಸಮೀಪದ ಮಧ್ವಾಚಾರ್ ರಸ್ತೆಯಲ್ಲಿರುವ ಗಾಡಿ ಚೌಕ(ಖಾಲಿ ಜಾಗದಲ್ಲಿ)ಕ್ಕೆ ಪಾಲಿಕೆ ಅಧಿಕಾರಿಗಳೊಂದಿಗೆ ಸೋಮವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿದ ಬಳಿಕ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ಸುಮಾರು 60 ವರ್ಷಗಳಿಂದ ಪಾಳು ಬಿದ್ದಿದ್ದ ಜಾಗದಲ್ಲಿ ಅಕ್ರಮವಾಗಿ ದರ್ಗಾ ಕಟ್ಟಲು ತರಾತುರಿಯಲ್ಲಿ ಖಾತಾ ಮಾಡಿಕೊಟ್ಟಿರುವುದಲ್ಲದೆ, ಆಕ್ಷೇಪಣೆ ಸಲ್ಲಿಸಲು ಈಗ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ ಎಂದು ದೂರಿದರು.

ಸೆ.10ರಂದು ಸ್ಥಳೀಯ ಪತ್ರಿಕೆಯೊಂದರಲ್ಲಿ ಸರ್ಕಾರಿ ಸುತ್ತೋಲೆ ಹೆಸರಿನಲ್ಲಿ ನೋಟಿಫಿಕೇಷನ್ ಹೊರಡಿಸಿರುವ ಪಾಲಿಕೆ ಆಯುಕ್ತರು, ದಸರಾ ಸಂದರ್ಭದಲ್ಲಿ ಯಾರಿಗೂ ಕಾಣದಂತೆ ಚಿಕ್ಕದಾಗಿ ನೋಟಿಫಿಕೇಶನ್ ಜಾಹೀರಾತು ನೀಡಿದ್ದಾರೆ. ಅಲ್ಲದೆ ನೋಟಿಫಿಕೇಶನ್ ಅನ್ವಯ ಜಾಗದಲ್ಲಿ ಸಾರ್ವಜನಿಕರಿಗೆ ತಿಳಿಯುವಂತೆ ನಾಮ ಫಲಕ ಅಳವಡಿಸಬೇಕಿತ್ತು. ಆದರೆ, ಅದನ್ನು ಮಾಡಿಲ್ಲ. ಯಾವುದಾದರೂ ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯ ಶಾಸಕರು ಮತ್ತು ಜನಪ್ರತಿನಿಧಿಗಳಿಂದ ಅನುಮತಿ ಪಡೆಯುವುದು ಕಡ್ಡಾಯ. ಆದರೆ ಯಾರ ಅನುಮತಿಯೂ ಇಲ್ಲದೆ ಅಕ್ರಮವಾಗಿ ದರ್ಗಾ ಕಟ್ಟಲು ಮುಂದಾಗಿದ್ದಾರೆ ಎಂದು ಶ್ರೀವತ್ಸ ಆಕ್ಷೇಪಿಸಿದರು.

ಸುಮಾರು ಒಂದೂವರೆ ಎಕರೆ ಜಾಗವು (ಸುಮಾರು 4500 ಅಡಿ ಸುತ್ತಳತೆ) ವಕ್ಫ್ ಆಸ್ತಿ ಎಂದು 1965ರಲ್ಲಿ ಗೆಜೆಟ್ ಆಗಿದ್ದು, ವಕ್ಫ್‌ಗೆ ಯಾರು ದಾನ ಮಾಡಿದ್ದಾರೆಂಬುದರ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಅಲ್ಲದೆ ಗೆಜೆಟ್‌ನಲ್ಲಿ ಮಹಮ್ಮದ್ ಗೌಸ್–ಮಹಮದ್ ವಾಡಿ ರಸ್ತೆ ಕೆ.ಆರ್.ಮೊಹಲ್ಲಾ ಎಂದಿದ್ದು, ಎಲ್ಲಿಯೂ ಮಾನಂದವಾಡಿ ರಸ್ತೆ ಅಥವಾ ಮಧ್ವಾಚಾರ್ ರಸ್ತೆ ಎಂದು ಉಲ್ಲೇಖವಾಗಿಲ್ಲ. ಆದ್ದರಿಂದ ಗೆಜೆಟ್‌ನಲ್ಲಿಯೂ ತಪ್ಪುಗಳಾಗಿರುವುದು ಕಂಡುಬಂದಿದೆ ಎಂದು ಹೇಳಿದರು.

60 ವರ್ಷದ ನಂತರ ಖಾತೆ!: ಸುಮಾರು 60 ವರ್ಷದ ನಂತರ ಅಂದರೆ 2025ರಲ್ಲಿ ಜಾಗದ ಖಾತೆ ಕೇಳಿದ್ದಾರೆ. ಅಲ್ಲದೆ ಇದುವರೆಗೆ ಈ ಜಾಗಕ್ಕೆ ಯಾವುದೇ ಖಾತೆ ನೀಡಿ, ಕಂದಾಯ ಫಿಕ್ಸ್ ಮಾಡಿರಲಿಲ್ಲ. ನಾನು ಮಾ.15 ರಂದು ಈ ಜಾಗದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದು ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ತರಾತುರಿಯಲ್ಲಿ ಖಾತೆ ಮಾಡಿಕೊಡುವ ಕೆಲಸಗಳಾಗಿವೆ. ಅಲ್ಲದೆ ಕಟ್ಟಡ ನಿರ್ಮಾಣಕ್ಕೂ ಪಾಲಿಕೆಯಿಂದ ಅನುಮತಿ ಪಡೆದಿಲ್ಲ ಎಂದು ತಿಳಿಸಿದರು.

ಖಾತೆಯಲ್ಲೂ ಅಕ್ರಮ ಅನುಮಾನ: ಸುಮಾರು 4500 ಅಡಿ ಸುತ್ತಳತೆ ಜಾಗಕ್ಕೆ ನೋಟಿಫಿಕೇಶನ್ ಹೊರಡಿಸಿದ್ದರೆ, ಖಾತೆಯಲ್ಲಿ 700 ಅಡಿ ಸುತ್ತಳತೆಗೆ ಮಾತ್ರ ಕಂದಾಯ ಫಿಕ್ಸ್ ಮಾಡಿರುವುದರಲ್ಲಿಯೂ ಅಕ್ರಮ ನಡೆದಿರುವ ಅನುಮಾನ ಕಂಡುಬಂದಿದೆ ಎಂದು ಹೇಳಿದರು.

ಹಳೇ ಕೇಸ್‌ಗಳೇ ಮುಗಿದಿಲ್ಲ: 2002ರಲ್ಲಿ ಈ ಜಾಗ ನಮಗೆ ಸೇರಿದ್ದು ಎಂದು ಮುಸ್ಲಿಂ ಕುಟುಂಬವೊಂದು ಕಾನೂನು ಹೋರಾಟ ನಡೆಸಿದ್ದು, ಮೈಸೂರು ಕೋರ್ಟ್‌ನಲ್ಲಿ ಗೆಜೆಟ್ ಆಧಾರದ ಮೇಲೆ ಈ ಆಸ್ತಿ ನಿಮ್ಮದಲ್ಲ ಎಂದು ಆದೇಶ ನೀಡಲಾಗಿತ್ತು. ನಂತರ ಆ ಕುಟುಂಬ ಹೈಕೋರ್ಟ್‌ಗೆ ಹೋಗಿದ್ದು, ಅಲ್ಲಿಯೂ ಮೈಸೂರು ಕೋರ್ಟ್ ನೀಡಿದ ತೀರ್ಪನ್ನೇ ಎತ್ತಿ ಹಿಡಿಯಲಾಗಿತ್ತು. ಟೈಟಲ್ ಸೂಟ್ ಹಾಕಿದ್ದರಿಂದ ಆ ಪ್ರಕರಣ ಇನ್ನೂ ಇತ್ಯರ್ಥವಾಗಿಲ್ಲ. ಜೊತೆಗೆ ಆ ಕೇಸ್ ದ್ವಿಸದಸ್ಯ ಪೀಠಕ್ಕೆ ಹೋಗಿದೆಯೋ ಅಥವಾ ಸುಪ್ರೀಂ ಕೋರ್ಟ್‌ಗೆ ಹೋಗಿದೆಯೋ ಗೊತ್ತಿಲ್ಲ. ಕಳೆದ ಏಪ್ರಿಲ್ ತಿಂಗಳಿನಲ್ಲಿ ಆ ಜಾಗದಲ್ಲಿ ದರ್ಗಾ ನಿರ್ಮಿಸುತ್ತಿರುವ ಸಂಸ್ಥೆಯ ಕಾರ್ಯದರ್ಶಿ ಪಾಲಿಕೆ ಅಧಿಕಾರಿಗಳು ನಮ್ಮ ಜಾಗಕ್ಕೆ ಬಂದು ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಮೈಸೂರು ಕೋರ್ಟ್‌ನಲ್ಲಿ ಕೇಸ್ ದಾಖಲಿಸಿದ್ದು, ಅದರ ವಿಚಾರಣೆ ಸೆ.20 ರಂದು ನಡೆಯಲಿದೆ. ಇದೆಲ್ಲದರ ನಡುವೆ ಪಾಲಿಕೆ ಆಯುಕ್ತರು ತರಾತುರಿಯಲ್ಲಿ ದರ್ಗಾ ನಿರ್ಮಾಣ ಕುರಿತು ಸಾರ್ವಜನಿಕ ಆಕ್ಷೇಪಣೆ ನೋಟಿಫಿಕೇಶನ್ ಹೊರಡಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ವಿವರಿಸಿದರು.

ಈ ವೇಳೆ ಬಿಜೆಪಿ ನಗರಾಧ್ಯಕ್ಷ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಮೈಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಎ.ಯು. ಸುಬ್ಬಯ್ಯ, ಸೌಮ್ಯ ಉಮೇಶ್, ಕೆ.ಆರ್. ಕ್ಷೇತ್ರದ ಅಧ್ಯಕ್ಷ ಗೋಪಾಲ್, ಬಿಜೆಪಿ ಮುಖಂಡ ಗಿರಿಧರ್, ಯುವಮೋರ್ಚಾ ನಗರಾಧ್ಯಕ್ಷ ರಾಕೇಶ್ ಮತ್ತಿತರರಿದ್ದರು.

ಮೈಸೂರು ನಗರಪಾಲಿಕೆ ನಡೆಯ ಬಗ್ಗೆ ಹತ್ತು ಹಲವು ಅನುಮಾನ!



ಮೈಸೂರಿನ ಅಗ್ರಹಾರ ಗಾಡಿಚೌಕದಲ್ಲಿ ದರ್ಗಾ ನಿರ್ಮಾಣ ಜಾಗಕ್ಕೆ ನಗರಪಾಲಿಕೆ ಅಧಿಕಾರಿಗಳು, ಸ್ಥಳೀಯ ಮುಖಂಡರೊಂದಿಗೆ ಸೋಮವಾರ ಭೇಟಿ ನೀಡಿದ ಕೆ.ಆರ್.ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸ್ಥಳ ಪರಿಶೀಲನೆ ನಡೆಸಿದರು. ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್ ಮತ್ತಿತರರಿದ್ದರು.

ಕೂಡಲೇ ನೋಟಿಫಿಕೇಷನ್ ಹಿಂಪಡೆಯಬೇಕು...

"60 ವರ್ಷಗಳಿಂದ ಯಾವ ಪಾಲಿಕೆ ಆಯುಕ್ತರು ಮಾಡಿರದ ಕೆಲಸವನ್ನು ಈಗಿನ ಕಮಿಷನರ್ ಮಾಡಿದ್ದಾರೆ. ಆ ಭಾಗದಲ್ಲಿ ಹಿಂದೂ–ಮುಸ್ಲಿಂ ಎನ್ನುವುದು ಯಾವಾಗಲೂ ಇರಲಿಲ್ಲ. ಈಗ ಕೋಮು ಸೌಹಾರ್ದತೆಗೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ತಕ್ಷಣವೇ ಬ್ರೇಕ್ ಹಾಕಬೇಕು. ಮದ್ದೂರಿನಲ್ಲಿ 6 ತಿಂಗಳ ಹಿಂದೆ ಆ ಜಾಗದಲ್ಲಿ ಮಸೀದಿ ಬಂದ ಮೇಲೆ ಗಲಾಟೆ ನಡೆದು, ಕೋಮು ಗಲಭೆ ಸೃಷ್ಟಿಯಾಗಿದೆ. ಹಾಗಾಗಿ ಅನೇಕ ನ್ಯೂನತೆಗಳು ಕಂಡುಬಂದಿದೆ. ಕೂಡಲೇ ನೋಟಿಫಿಕೇಷನ್ ಹಿಂಪಡೆಯಬೇಕು. ಇಲ್ಲವಾದಲ್ಲಿ ಕ್ಷೇತ್ರದಾದ್ಯಂತ ವ್ಯಾಪಕ ಹೋರಾಟ ನಡೆಸಲಾಗುವುದು. **–ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್.ಕ್ಷೇತ್ರ**

ಹೋಟೆಲ್ ಉದ್ಯಮಿಗಳಿಗೆ ಸಹಕಾರ ಮಿತ್ರ ಪ್ರಶಸ್ತಿ



ಬಿ.ವಿಜಯಲಕ್ಷ್ಮಿ



ಚಂದ್ರಶೇಖರ್ ಶೆಟ್ಟಿ



ಬಾಲಕೃಷ್ಣಭಟ್


ಮೈಸೂರು, ಸೆ.15(ಎಂಕೆ)– ಮೈಸೂರಿನ ಹಿರಿಯ ಹೋಟೆಲ್ ಉದ್ಯಮಿಗಳಾದ ಬಿ.ವಿಜಯಲಕ್ಷ್ಮಿ ಹಯವದನ ಆಚಾರ್, ಡಿ.ಚಂದ್ರಶೇಖರ್ ಶೆಟ್ಟಿ ಹಾಗೂ ಬಿ.ಬಾಲಕೃಷ್ಣಭಟ್ ಅವರಿಗೆ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದಿಂದ ನೀಡುವ 'ಸಹಕಾರ ಮಿತ್ರ ಪ್ರಶಸ್ತಿ' ಲಭಿಸಿದೆ. ಮೈಸೂರಿನ ಹೋಟೆಲ್ ಪೈ ವಿಸ್ತಾದಲ್ಲಿ ಸೆ.16ರಂದು ಬೆಳಗ್ಗೆ 11.30ಕ್ಕೆ ನಡೆಯುವ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ 30ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದು, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಖೋ ಖೋ ಪಂದ್ಯಾವಳಿಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ



ಮೈಸೂರು ತಾಲೂಕು ಕಾಳಿಸಿದ್ದನಹುಂಡಿ ಶಾಲೆಯಲ್ಲಿ ನಡೆದ ತಾಲೂಕು ಮಟ್ಟದ 14 ವರ್ಷದೊಳಗಿನ ಖೋ ಖೋ ಪಂದ್ಯಾವಳಿಯಲ್ಲಿ ಕೂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಂಡ ಜಯಗಳಿಸಿ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದೆ.

ಪಿ.ಬಿ.ಶ್ರೀನಿವಾಸ್ ಮಧುರ ಗೀತೆಗಳ ರಸಸಂಜೆ



ಮೈಸೂರು,ಸೆ.15–ಮೈಸೂರಿನ ಹವ್ಯಾಸಿ ಗಾಯಕರು "ಗಾನ ಗಾರುಡಿಗ ಡಾ. ಪಿ.ಬಿ. ಶ್ರೀನಿವಾಸ್ ನೆನಪಿನ ನಾದಸಂಗಮ" ಶೀರ್ಷಿಕೆಯಡಿ ಡಾ.ಪಿ.ಬಿ. ಶ್ರೀನಿವಾಸ್ ಅವರ 95ನೇ ಹುಟ್ಟುಹಬ್ಬದ ಸವಿನೆನಪಿಗಾಗಿ ಅವರು ಹಾಡಿರುವ ಮಧುರ ಚಿತ್ರಗೀತೆಗಳ ಸಂಗೀತ ಸುಧಾ ಕಾರ್ಯಕ್ರಮವನ್ನು ಸೆ.19ರಂದು ಮೈಸೂರಿನ ನಾದ ಬ್ರಹ್ಮ ಸಂಗೀತಸಭಾದಲ್ಲಿ ಸಂಜೆ 4ರಿಂದ ರಾತ್ರಿ 10ರವರೆಗೆ ತಡೆರಹಿತವಾಗಿ ಹಾಡಿ ಪ್ರೇಕ್ಷಕರ ಮನರಂಜಿಸಲಿದ್ದಾರೆ.

ಇಂದಿನ ಡಿಸ್ಕೋ, ಡ್ರಮ್ಸ್, ಹಾಡುಗಳ ಅಬ್ಬರದಿಂದ ಬೇಸತ್ತ ಕನ್ನಡ ರಸಿಕರಿಗೆ ಅಪೂರ್ವ ಸಾಹಿತ್ಯ, ಹಿತವಾದ ಸಂಗೀತವುಳ್ಳ ಮಧುರ ಗೀತೆಗಳ ಸಿಂಚನ ಮೈಸೂರಿನ ಪ್ರೇಕ್ಷಕರಿಗೆ ಒದಗಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಸಂಗೀತ ಸಂಜೆಯಲ್ಲಿ ಹಾಡುತ್ತಿರುವ ಗಾಯಕ ಗಾಯಕಿಯರಲ್ಲಿ ಬಹುತೇಕರು, ವೃತ್ತಿಯಲ್ಲಿ ವೈದ್ಯರು, ಇಂಜಿನಿಯರ್, ವಕೀಲರು, ಶಿಕ್ಷಕರು, ಬ್ಯಾಂಕ್ ಮತ್ತು ಇತರೇ ಇಲಾಖೆಗಳಲ್ಲಿ ಹಿರಿಯ ಅಧಿಕಾರಿಗಳಾಗಿದ್ದರೂ ಹವ್ಯಾಸಿ ಗಾಯನ ಮೈಗೂಡಿಸಿಕೊಂಡವರಾಗಿದ್ದರೆ, ಇನ್ನೂ ಹಲವರು ಗೃಹವೃತ್ತಿಯಲ್ಲಿ ನಿರತರಾಗಿ ಗಾಯನವನ್ನು ಪ್ರವೃತ್ತಿಯಾಗಿ ತೆಗೆದುಕೊಂಡವರೂ ಇದ್ದಾರೆ. ಇಷ್ಟೇ ಅಲ್ಲದೇ ಚಿತ್ರರಂಗದಲ್ಲಿ ಹಿನ್ನೆಲೆ ಗಾಯನ ಮಾಡಿದ ಕಲಾವಿದರು, ಆಕಾಶವಾಣಿ ಕಲಾವಿದರು ಸಹ ಈ ತಂಡದಲ್ಲಿ ಇರುವುದು ವಿಶೇಷ. ಪ್ರೇಕ್ಷಕರಿಗೆ ಪ್ರವೇಶ ಉಚಿತವಾಗಿದೆ.

ಕಾರ್ಯಕ್ರಮದಲ್ಲಿ ಡಾ.ಪಿ.ಬಿ. ಶ್ರೀನಿವಾಸ್ ಹಾಡಿರುವ ಹಳೆಯ ಮಧುರ ಚಿತ್ರಗೀತೆಗಳನ್ನು ಮಾತ್ರ ಹಾಡಲಾಗುತ್ತದೆ ಎಂದು ಕಾರ್ಯಕ್ರಮದ ಆಯೋಜಕರಾದ ಕೆ.ಎನ್.ನಟರಾಜ್ ಸುದರ್ಶನ್, ಅಶ್ವಥ ನಾರಾಯಣ್ ಮತ್ತು ಶಾಂತಕುಮಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.22ರಿಂದ ಜಾತಿಗಣತಿಗೆ ಸಿದ್ಧತೆ

● 16 ದಿನಗಳ ಕಾಲ ವೈಜ್ಞಾನಿಕ ಸಮೀಕ್ಷೆ ● 1.75 ಲಕ್ಷ ಗಣತಿದಾರರು; ಡಿಸೆಂಬರ್ ವೇಳೆಗೆ ವರದಿ

ಬೆಂಗಳೂರು, ಸೆ.15(ಕೆಎಂಶಿ)–ರಾಜ್ಯದ ಸುಮಾರು 7 ಕೋಟಿ ಜನಸಂಖ್ಯೆ ಒಳಗೊಂಡ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ(ಜಾತಿ ಗಣತಿ)ಯನ್ನು ಈ ತಿಂಗಳ 22ರಿಂದ 16 ದಿನಗಳ ಕಾಲ ವೈಜ್ಞಾನಿಕವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಈ ಬಾರಿ ಕ್ಷಿಪ್ರವಾಗಿ ಜಾತಿ ಗಣತಿ ನಡೆಸಲು ತಂತ್ರಜ್ಞಾನ ಬಳಕೆ ಮಾಡಲಾಗಿದ್ದು, 1.75 ಲಕ್ಷ ಗಣತಿದಾರರ ಮೂಲಕ, ಕರಾರುವಾಕ್ ಹಾಗೂ ಜಾಗ್ರತೆಯಿಂದ ಸಮೀಕ್ಷೆ ಮಾಡಲು ಸಿದ್ಧತೆ ನಡೆದಿದೆ.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ರಾಜ್ಯಾದ್ಯಂತ ಜಾತಿ ಗಣತಿ ಪೂರ್ಣಗೊಳಿಸಿ, ಡಿಸೆಂಬರ್ ವೇಳೆಗೆ ಸರ್ಕಾರಕ್ಕೆ ವರದಿ ನೀಡಲಾಗುತ್ತದೆ.

ಗಣತಿದಾರರು 60 ಪ್ರಶ್ನೆಗಳ ಮೂಲಕ ಸಮೀಕ್ಷೆ ನಡೆಸಲಿದ್ದಾರೆ, ಮೊಬೈಲ್ ಆಪ್ ಬಳಸಿ, ಗಣತಿದಾರರು ಮಾಹಿತಿ ದಾಖಲಿಸಲಿದ್ದಾರೆ, ಮನೆ, ಮನೆಗಳ ಸಮೀಕ್ಷೆ ಮೂಲಕ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಯ ಸಮಗ್ರ ಮಾಹಿತಿ ಕಲೆಹಾಕಲಾಗುತ್ತದೆ.

ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಮನೆಗಳಿಗೆ ಒದಗಿಸಿರುವ ವಿದ್ಯುತ್ ಸಂಪರ್ಕದ ಆರ್.ಆರ್.ಮೀಟರ್ ಆಧಾರದ ಮೇಲೆ ಸಮೀಕ್ಷಾ ಬ್ಲಾಕ್ ವ್ಯಾಪ್ತಿ ನಿರ್ಧರಿಸಲಾಗುತ್ತದೆ.

ಸಮೀಕ್ಷೆ ಸಮಯದಲ್ಲಿ ಎಲ್ಲಾ ಮನೆಗಳು, ಕುಟುಂಬಗಳು ಮತ್ತು ವ್ಯಕ್ತಿಗಳನ್ನು ಒಳಪಡಿಸಲು ಬ್ಲಾಕ್‌ನಲ್ಲಿನ ಪ್ರತಿಯೊಂದು ಮನೆ ಗುರುತಿಸುವುದರ ಜೊತೆಗೆ, ವಸತಿ ರಹಿತ ಕುಟುಂಬಗಳು, ವ್ಯಕ್ತಿಗಳು ವಾಸಿಸುತ್ತಿರುವ ಸ್ಥಳ, ಪ್ರದೇಶಗಳನ್ನೂ ಗುರುತಿಸುವುದು ಅಗತ್ಯವಾಗಿದೆ.

ಒಬ್ಬ ಮೀಟರ್ ರೀಡರ್ ಕಾರ್ಯಕ್ಷೇತ್ರದಲ್ಲಿ ಸುಮಾರು 3 ಸಾವಿರ ವಿದ್ಯುತ್ ಸಂಪರ್ಕ ಮೀಟರ್ ಒಳಪಡುತ್ತವೆ, ಒಬ್ಬ ಸಮೀಕ್ಷಾದಾರ ಸುಮಾರು 150 ಮನೆಗಳ ಸಮೀಕ್ಷೆ ನಡೆಸಲಿದ್ದಾರೆ.

ಪ್ರತಿ ಮನೆಯನ್ನು 'ಜಿಯೋಟ್ಯಾಗ್' ಮಾಡಿ ವಿಶಿಷ್ಟ ಸಂಖ್ಯೆ ಯುಹೆಚ್‌ಐಡಿಯನ್ನು ಒದಗಿಸಲಾಗುತ್ತಿದೆ.

ಸಮೀಕ್ಷಕರು ಮನೆಗೆ ಅಂಟಿಸಲಾದ 'ಸ್ಟಿಕ್ಕರ್' ಪರಿಶೀಲಿಸಿ ಅದರ ಯುಹೆಚ್ ಐಡಿ ಸಂಖ್ಯೆ ಗಮನಿಸಿ ಸ್ಥಾನಿಕವಾಗಿ ಜಿಯೋ ಕೋ ಅರ್ಡಿನೇಟ್ಸ್ ಆಧಾರದ ಮೇಲೆ ಪರಿಶೀಲಿಸಿ ದೃಢಪಡಿಸಿಕೊಳ್ಳಬೇಕು.

ಗುಡ್ಡಗಾಡು, ಅರಣ್ಯ ಹಾಗೂ ಕೆಲವು ದುರ್ಗಮ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಮನೆಗಳಿದ್ದು, ಅಂತಹ ಪ್ರಕರಣಗಳಲ್ಲಿ ಸಮೀಕ್ಷೆಯಲ್ಲಿ ಒಳಪಡಿಸುವ ಅವಕಾಶವನ್ನು ಆಪ್ ಮೂಲಕ ಕಲ್ಪಿಸಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ 2024-29

ಮೈಸೂರು ಜಿಲ್ಲೆಯ ವಿವಿಧ ಪ್ರವಾಸಿ ತಾಣ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಿದ್ಧತೆ

ಮೈಸೂರು,ಸೆ.15(ಪಿಎಂ)– ಕರ್ನಾಟಕ ಪ್ರವಾಸೋದ್ಯಮ ನೀತಿ 2024–29ರಡಿಯಲ್ಲಿ ಮೈಸೂರು ಜಿಲ್ಲೆಯ 13 ಪ್ರವಾಸಿ ತಾಣಗಳು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಒಟ್ಟು 1,275 ಪ್ರವಾಸಿ ತಾಣಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಿದ್ಧತೆ ಮಾಡಿದೆ.

ಸದರಿ 1,275 ಪ್ರವಾಸಿ ತಾಣಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಲಭ್ಯತೆಯಂತೆ ಕ್ರಿಯಾಯೋಜನೆ ರೂಪಿಸಿ, ಅಂದಾಜು ಪಟ್ಟಿ ಹಾಗೂ ನಕ್ಷೆಗಳನ್ನು ಸಿದ್ಧಪಡಿಸಿಕೊಂಡು ತಾಂತ್ರಿಕ ಪರಿಶೀಲನೆಗೊಳಪಡಿಸಿ ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಳ್ಳಬಹುದು ಎಂದು ಸರ್ಕಾರ ಆದೇಶ ಹೊರಡಿಸಿದೆ.

ಅದರಂತೆ ಮೈಸೂರು ನಗರದ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶುಕವನ, ರೈಲ್ವೆ ಮ್ಯೂಸಿಯಂ, ಸೇಂಟ್ ಜೋಸೆಫ್ ಕ್ಯಾಥೆಡ್ರಲ್ (ಸೇಂಟ್ ಫಿಲೋಮಿನಾ ಶ್ರೈನ್), ಆರ್.ಕೆ.ನಾರಾಯಣ್ ನಿವಾಸ, ಪ್ರಾಚ್ಯವಸ್ತು ಸಂಗ್ರಹಾಲಯ (ಓಆರ್‌ಐ), ಮೈಸೂರು ಸಿಲ್ಕ್ ವೇವಿಂಗ್ ಕಾರ್ಖಾನೆ, ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಾಲಯಗಳ ಅಭಿವೃದ್ಧಿಗೆ ಸರ್ಕಾರ ಅನುಮೋದನೆ ನೀಡಿದೆ.

ಜೊತೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಶ್ರೀ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯ, ತಿ.ನರಸೀಪುರದ ಶ್ರೀ ಮಹಾಲಕ್ಷ್ಮೀ ಸಮೇತ ಗುಂಜಾನರಸಿಂಹಸ್ವಾಮಿ ದೇವಸ್ಥಾನ, ಕೆಆರ್ ನಗರದ ಶ್ರೀಅರ್ಕೇಶ್ವರಸ್ವಾಮಿ ದೇವಾಲಯ, ಸರಗೂರು ಬೇಲದಕುಪ್ಪೆ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಹೆಚ್‌ಡಿ ಕೋಟೆಯ ಭೀಮನಕೊಲ್ಲಿ ಶ್ರೀ ಮಹದೇಶ್ವರಸ್ವಾಮಿ ದೇವಾಲಯ, ನಂಜನಗೂಡಿನ ಶ್ರೀ ಸುತ್ತೂರು ಕ್ಷೇತ್ರಗಳ ಅಭಿವೃದ್ಧಿಗೂ ಅವಕಾಶ ದೊರೆತಿದೆ.


ಅ.6ರಿಂದ ಉಚಿತ ಯೋಗ ಶಿಬಿರ

ಮೈಸೂರು,ಸೆ.15–ಮೈಸೂರು ಯೋಗೀಸ್ ಟ್ರಸ್ಟ್ ಮತ್ತು ಸ್ವಾಸ್ಥ್ಯ ಯೋಗ ಕೇಂದ್ರದಿಂದ ಮೈಸೂರು ಯೋಗೀಸ್ ಸಭಾಂಗಣ, ಶ್ರೀಮತಿ ಅಕ್ಕಮ್ಮಣ್ಣಿ ಉದ್ಯಾನವನ, ರಾಮಾನುಜ ರಸ್ತೆ ಇಲ್ಲಿ 6 ವರ್ಷ ಮೇಲ್ಪಟ್ಟ ಶಾಲಾ ಮಕ್ಕಳಿಗೆ ಉಚಿತ ಯೋಗ ತರಬೇತಿ ಶಿಬಿರವನ್ನು ಅಕ್ಟೋಬರ್ 6ರಿಂದ 31ರವರೆಗೆ ಪ್ರತಿ ಸೋಮವಾರ, ಗುರುವಾರ ಸಂಜೆ 5 ಗಂಟೆಯಿಂದ 5.45ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.7259027880 ಸಂಪರ್ಕಿಸಬಹುದು.

ವಾರ್ಷಿಕ ಮಹಾಸಭೆ

ಮೈಸೂರು, ಸೆ.15–ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಸೆ.24 ರಂದು ಬೆಳಗ್ಗೆ 11 ಗಂಟೆಗೆ ಗೋವಿಂದ ರಾವ್ ಮೆಮೋರಿಯಲ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ



ರತ್ನಮ್ಮ

ಮೈಸೂರು, ಸೆ. 15– ಮೈಸೂರಿನ ಜೆ.ಪಿ.ಪಾಳ್ಯದ ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಣದ ಶಿಕ್ಷಕ ಗಂಗಾಧರಸ್ವಾಮಿಯವರ ತಾಯಿ, ಶಿವಲಿಂಗ ದೇವರು ಅವರ ಪತ್ನಿ ಶ್ರೀಮತಿ ರತ್ನಮ್ಮ (70) ನಿಧನರಾದರು. ಮೃತರು ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು, ಸೊಸೆಯಿಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯು ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯ ಸ್ವಗ್ರಾಮ ಹೊರೆಯಾಲದಲ್ಲಿ ನಡೆಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಜವರಯ್ಯ



ಮೈಸೂರು, ಸೆ.15– ಮೈಸೂರಿನ ಮೇಟಗಳ್ಳಿ ನಿವಾಸಿಯಾಗಿದ್ದ ಜವರಯ್ಯ(75) ಅವರು ಸೆ.13ರಂದು ನಿಧನರಾದರು.


ಇವರು ಪತ್ನಿ ಸಿದ್ದಮ್ಮ, ಪುತ್ರರಾದ ಪ್ರಕಾಶ್ ಹಾಗೂ ಸಂತೋಷ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೇಟಗಳ್ಳಿ ರುದ್ರಭೂಮಿಯಲ್ಲಿ ನಡೆಸಲಾದ ಅಂತ್ಯಕ್ರಿಯೆಯಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಸೇರಿದಂತೆ ಹಲವು ಮುಖಂಡರು ಭಾಗವಹಿಸಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ವಟೆರಿರ ಸಿ. ಪೆಮ್ಮಯ್ಯ

ಮೈಸೂರು, ಸೆ.15– ಕೊಡಗಿನ ನಲವತ್ತೊಕ್ಲು ನಿವಾಸಿ ವಟೆರಿರ ಸಿ. ಪೆಮ್ಮಯ್ಯ (ಅಪ್ಪು) ಅವರು ಭಾನುವಾರ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ವಟೆರಿರ ಕುಟುಂಬದ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.09.2025 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ) ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಅಂಗವಾಗಿ ನಗರ ಅಂತರ ಕಾಲೇಜು ಮಹಿಳಾ ಥ್ರೋಬಾಲ್ ಪಂದ್ಯಾವಳಿ, ಉದ್ಘಾಟನೆ : ದೈಹಿಕ ಶಿಕ್ಷಣ ನಿವೃತ್ತ ನಿರ್ದೇಶಕ ಎನ್.ಎಸ್. ಸುಬ್ರಮಣ್ಯ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ರೇಚಣ್ಣ, ಮುಖ್ಯ ಅತಿಥಿಗಳು : ಪ್ರಿನ್ಸಿಪಾಲ್ ಶ್ರೀಮತಿ ಎಂ.ಪಿ. ರಾಜೇಶ್ವರಿ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ಬಂಜೆತನ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಯೂನಿವರ್ಸಿಟಿ :** ಫ್ರೆಶರ್ಸ್ ಡೇ, ಮುಖ್ಯ ಅತಿಥಿಗಳು : ಡಿಐಜಿಪಿ ಸದರನ್ ರೇಂಜ್ ಡಾ. ಎಂ.ಬಿ. ಬೋರಲಿಂಗಯ್ಯ, ಗೌರವ ಅತಿಥಿಗಳು : ಶಶಿಭೂಷಣ್, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಬಿ. ಸುರೇಶ್, ಅಧ್ಯಕ್ಷತೆ : ಕುಲಪತಿ ಪ್ರೊ.ಎ.ಎನ್. ಸಂತೋಷ್ ಕುಮಾರ್, ಉಪಸ್ಥಿತರು : ಪ್ರಿನ್ಸಿಪಾಲ್ ಪ್ರೊ.ಸಿ. ನಟರಾಜು, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಎಸ್‌ಜೆಸಿಇ ಕ್ವಾಡ್ರಾಂಗಲ್, ಬೆಳಗ್ಗೆ 11ಕ್ಕೆ.

■ **ಸುಯೋಗ್ ಗ್ರೂಪ್ ಆಫ್ ಮೆಡಿಕಲ್ ಇನ್ಸ್‌ಟಿಟ್ಯೂಷನ್ಸ್ :** ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಗೌರವ ಅತಿಥಿಗಳು: ವಿದ್ಯಾವಿಕಾಸ ಕಾಲೇಜ್ ಆಫ್ ನರ್ಸಿಂಗ್ ಪ್ರಿನ್ಸಿಪಾಲ್ ಪ್ರೊ. ವಿನೋಲಿಯಾ ರಾಜ್, ಸಿಗ್ಮಾ ನರ್ಸಿಂಗ್ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಮಂಜುನಾಥ್, ಡಾ. ಕೆ.ಎಸ್. ಶುಭಾ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಉಪಾಧ್ಯಕ್ಷರಾದ ಡಾ. ಸೀಮಾ ಯೋಗಣ್ಣ, ಸ್ಥಳ: ಸುಯೋಗ್ ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ವಿಶೇಷ ಆಹ್ವಾನಿತರು: ಇಸ್ರೋ ಮಹನ್ನೋತಿ ವಿಜ್ಞಾನಿ ಡಾ.ಎಸ್.ವಿ.ಶರ್ಮ, ತ್ರಿಸ್ಕಂದ ಜ್ಯೋತಿರ್ ವಿದ್ವಾನ್ ಸಿದ್ಧಾಂತಿ ಡಾ.ಕೆ.ಜಿ. ಪುಟ್ಟಹೊನ್ನಯ್ಯ, ಡಾ.ಭಾನುಪ್ರಕಾಶ್ ಶರ್ಮ, ಬಿ.ಎನ್.ಅನಂತ ರಾಘವನ್, ಪ್ರೊ. ಎಂ. ರಾಮನಾಥಂ ನಾಯುಡು, ಕುಲಸಚಿವ ಪ್ರೊ.ನವೀನ್‌ಕುಮಾರ್ ಎಸ್.ಕೆ., ಡಾ.ಸಿ.ಎಸ್.ಆನಂದಕುಮಾರ್, ಪ್ರೊ.ನಿರಂಜನ ರಾಜ್ ಎಸ್., ಡಾ.ಎನ್.ಆರ್.ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ. ಪುಟ್ಟಿ, ಹಂಸಿನಿ. ಎಸ್. ಕುಮಾರ್ ಹಾಗೂ ಎ. ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ–ಆಕಾಶವಾಣಿ 90–ನೆನಪುಗಳ ಹೊತ್ತು ಸಂಗೀತ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಡಾ.ಆರ್. ವಿಶ್ವೇಶ್ವರನ್ ಅವರೊಂದಿಗೆ ಸಂವಾದ. ಪ್ರಸ್ತುತಿ–ಟಿ.ವಿ. ವಿದ್ಯಾಶಂಕರ್ ಹಾಗೂ ತುಮಕೂರು ಬಿ. ರವಿಶಂಕರ್, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಕ್ಷ್ಮೀ ನಟರಾಜ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ– ಪು.ತಿ.ನ. ಅವರ ಕವಿತೆಗಳಲ್ಲಿ ಪ್ರಕೃತಿ ದರ್ಶನ ಈ ಕುರಿತು ಮಾತನಾಡುತ್ತಾರೆ, ಸಹಾಯಕ ಪ್ರಾಧ್ಯಾಪಕಿ ಡಾ. ವಿನೋದಾ, 1.00 ಪ್ರಗತಿಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರಮಾ ರಾಮಕೃಷ್ಣ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎನ್. ಭಾರತಿ ವೀಣಾವಾದನ, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಕೆರೆ ಮತ್ತು ಜಲಾಶಯಗಳಲ್ಲಿ ವೈಜ್ಞಾನಿಕ ಮೀನುಗಾರಿಕೆ ಕುರಿತು ಮಂಡ್ಯ ಜಿಲ್ಲೆ ಕೃಷ್ಣರಾಜಸಾಗರದ ಮೀನುಗಾರಿಕೆ ತರಬೇತಿ ಕೇಂದ್ರದ ಉಪ ನಿರ್ದೇಶಕರಾದ ಎಂ. ಪ್ರಿಯಾಗಣಪತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪ್ರವೀಣ್ ಗೋಡ್ಖಿಂಡಿ–ವೇಣುವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಕೆ. ಶಂಕರನ್ ನಂಬೂದರಿ–ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಕೂಲ್ ಆಫ್ ಲೈಫ್ ಸೈನ್ಸಸ್ ವಿಭಾಗ :** ಪಿಜಿ ವಿದ್ಯಾರ್ಥಿಗಳ ಸೇರ್ಪಡೆ ಸಮಾರಂಭ, ಅಧ್ಯಕ್ಷತೆ : ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು : ಕುಲಸಚಿವ ಡಾ.ಬಿ. ಮಂಜುನಾಥ, ಡೀನ್ ಡಾ. ಕೆ.ಎ. ರವೀಶ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 11ಕ್ಕೆ.

■ **ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ :** 30ನೇ ವಾರ್ಷಿಕೋತ್ಸವದ ಪ್ರಯುಕ್ತ ಹಿರಿಯ ಹೋಟೆಲ್ ಉದ್ಯಮಿಗಳಿಗೆ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಸ್ಥಳ: ಹೋಟೆಲ್ ಪೈ ವಿಸ್ತಾ, ಬಿ.ಎನ್. ರಸ್ತೆ, ಬೆಳಗ್ಗೆ 11.30ಕ್ಕೆ.

■ **ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗ:** ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜನ್ಮ ದಿನಾಚರಣೆ, ಅಖಿಲ ಭಾರತ ವಿಮಾ ನೌಕರರ ಸಂಘದ ಅಮೃತ ಮಹೋತ್ಸವ ವರ್ಷಾಚರಣೆ ಅಂಗವಾಗಿ ವಿಚಾರ ಸಂಕಿರಣ, ಪ್ರಸ್ತಾವನೆ: ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ನಾಗೇಶ್, ಪ್ರಮುಖ ಭಾಷಣ: ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ಕೆ.ರಾಮು, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

ಸಿಬಿಐ, ಇಡಿ, ಆದಾಯ ತೆರಿಗೆ ಅಧಿಕಾರಿಗಳೆಂದು ಬೆದರಿಸಿ

ಮುಡಾ ನಿವೃತ್ತ ಇಂಜಿನಿಯರ್‌ಗೆ 1.20 ಕೋಟಿ 'ಆನ್‌ಲೈನ್' ವಂಚನೆ

ಮೈಸೂರು, ಸೆ.15(ಬಿಎಲ್‌ಯು)– ಮುಡಾದ ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ವೊಬ್ಬರು ಸೈಬರ್ ವಂಚನೆ ಜಾಲಕ್ಕೆ ಸಿಲುಕಿ 1.20 ಕೋಟಿ ರೂಪಾಯಿ ಕಳೆದುಕೊಂಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ತಾನು ಸಿಬಿಐ ಅಧಿಕಾರಿಯೆಂದು ವಿಡಿಯೋ ಕಾಲ್ ಮಾಡಿದ ಸೈಬರ್ ಅಪರಾಧಿಯೋರ್ವ ನರೇಶ್ ಗೋಯಲ್ ಎಂಬಾತನನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ. ಅವರು, ನಿಮ್ಮ ಜೊತೆ 20 ಲಕ್ಷ ರೂಪಾಯಿವರೆಗೆ ವ್ಯವಹಾರ ಮಾಡಿರುವುದಾಗಿ ಹೇಳಿಕೆ ನೀಡಿದ್ದಾನೆ ಎಂದು ಹಿಂದಿಯಲ್ಲಿ ಪ್ರಶ್ನಿಸಿದ್ದಾರೆ.

ನಿವೃತ್ತ ಇಂಜಿನಿಯರ್ ಕನ್ನಡ ಮತ್ತು ತೆಲುಗು ಬಲ್ಲವರು ಎಂದು ವಂಚಕರಿಗೆ ಮನದಟ್ಟಾಗಿದೆ. ತರುವಾಯ ತಾನು ಸಿಬಿಐ ಅಧಿಕಾರಿಯೆಂದು ಹಲವರು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಮಾತನಾಡಲು ಆರಂಭಿಸಿದ್ದಾರೆ.

ನಂತರ ಮುಂಬೈ ಕ್ರೈಂ ಪೊಲೀಸರೆಂದು, ಇಡಿ ಅಧಿಕಾರಿಗಳೆಂದು, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳೆಂದು ಸರದಿಯಂತೆ ಒಬ್ಬೊಬ್ಬರಾಗಿ ವಿಡಿಯೋ ಕಾಲ್ ಮಾಡಿ ಮಾತನಾಡಿದ್ದಾರೆ. ನೀವು ನರೇಶ್ ಗೋಯಲ್ ಜೊತೆ ವ್ಯವಹಾರ ಮಾಡಿರುವ ಪ್ರಕರಣದಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎಂದು ಅವರ ಫೋಟೋಗಳನ್ನು ವಾಟ್ಸಾಪ್‌ನಲ್ಲಿ ಕಳುಹಿಸಿದ್ದಾರೆ.

ನಾಲ್ಕು ದಿನದ ಕಾರ್ಯಾಚರಣೆ: ಮೊದಲ ದಿನದ ವಿಡಿಯೋ ಕಾಲ್‌ನಲ್ಲಿ ಬರೀ ಹೆದರಿಕೆ ಹುಟ್ಟಿಸಿದ್ದಾರೆ. ಈ ಬೆಳವಣಿಗೆಯಿಂದ ಸಹಜವಾಗಿಯೇ ನಿವೃತ್ತ ಇಂಜಿನಿಯರ್ ಆತಂಕಗೊಂಡಿದ್ದಾರೆ.

ಈ ವಿಚಾರವನ್ನು ನೀವು ನಿಮ್ಮ ಕುಟುಂಬಸ್ಥರಿಗೆ, ಸಂಬಂಧಿಗಳಿಗೆ, ಮಕ್ಕಳೊಂದಿಗೆ ಹಂಚಿಕೊಳ್ಳಬಾರದು. ನಮ್ಮ ಸಿಬಿಐ ಟೀಂ ನಿಮ್ಮ ಮನೆ ಬಳಿ ವಾಚ್ ಮಾಡುತ್ತಿದೆ. ನಿಮ್ಮ ಚಲನವಲನಗಳ ಬಗ್ಗೆ ಹದ್ದಿನಕಣ್ಣಿಟ್ಟಿದ್ದಾರೆ ಎಂದು ಬೆದರಿಕೆ ಹಾಕಿದ್ದಾರೆ.

ಹಣಕ್ಕೆ ಸ್ಕೆಚ್: ಮಾರನೇ ದಿನ ವಿಡಿಯೋ ಕಾಲ್‌ನಲ್ಲೇ ಮಾತನಾಡುವಾಗ ನಿಮ್ಮ ಬ್ಯಾಂಕ್‌ನಲ್ಲಿರುವ ಹಣವೆಷ್ಟು ಎಂದು ಕೇಳಿದ್ದಾರೆ. ಗಾಬರಿಯಲ್ಲಿದ್ದ ನಿವೃತ್ತ ಇಂಜಿನಿಯರ್, ನನ್ನ ಬ್ಯಾಂಕ್‌ನಲ್ಲಿ 1.20 ಕೋಟಿ ಇದೆ ಎಂದು ಸತ್ಯ ಸಂಗತಿಯನ್ನು ಬಿಚ್ಚಿಟ್ಟಿದ್ದಾರೆ. ಲಡ್ಡು ಬಂದು ಬಾಯಿಗೆ ಬಿತ್ತು ಎಂಬಂತೆ ಆ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳಲು ಆ ಕ್ಷಣದಲ್ಲೇ ಸೈಬರ್ ಅಪರಾಧಿಗಳು ಸ್ಕೆಚ್ ಹಾಕಿದ್ದಾರೆ.



- **ಹಣ ಸುಲಿಗೆಗೆ ಸೈಬರ್ ವಂಚಕರ ನಾನಾ ವೇಷ**
- **ಕಂತೆ ಕಂತೆ ಹಣ, ಡೆಬಿಟ್ ಕಾರ್ಡ್ ಫೋಟೋ ರವಾನೆ**
- **ಸಿಬಿಐ, ಇಡಿ, ಆದಾಯ ತೆರಿಗೆ ಇಲಾಖೆ ನಕಲಿ ಲೆಟರ್‌ಹೆಡ್, ಸೀಲ್ ಬಳಕೆ**
- **ಸೈಬರ್ ಕ್ರೈಂನಿಂದ ಪಾರಾಗಲು ಜಾಗೃತಿಯೇ ಮೂಲ ಅಸ್ತ್ರ**

ತಕ್ಷಣ ಹಣ ವರ್ಗಾವಣೆ ಪ್ರಸ್ತಾಪವಿಡದೇ ನೀವು ಅಪರಾಧಿ ಸ್ಥಾನದಲ್ಲಿದ್ದೀರಾ ಎಂದು ಹೆದರಿಸಿದ್ದಾರೆ. ಸೈಬರ್ ವಂಚಕರು ಸುಮಾರು ನಾಲ್ಕು ದಿನ ಸತತವಾಗಿ ಬೆನ್ನಿಗೆ ಬಿದ್ದು ಅವರಲ್ಲಿ ಆತಂಕ ಹುಟ್ಟಿಸಿದ್ದಾರೆ.

ನಿಮ್ಮ ಅಕೌಂಟ್‌ನಲ್ಲಿರುವ ಹಣದ ಮೂಲ ತಿಳಿಯಬೇಕಿದೆ. ಈಗ ನಿಮ್ಮ ಬ್ಯಾಂಕ್‌ನಲ್ಲಿರುವ ಹಣವನ್ನು ನಾವು ನೀಡಿರುವ ಅಕೌಂಟ್ ನಂಬರ್‌ಗೆ ಕಳುಹಿಸಿ. ಇದರ ಬಗ್ಗೆ ಪರಿಶೀಲನೆ ಮಾಡಿ ಯಾವುದೇ ತಪ್ಪಿಲ್ಲ ಎಂದು ಖಾತರಿಯಾದರೆ ನಿಮ್ಮ ಅಕೌಂಟ್‌ಗೆ ವಾಪಸು ಕಳುಹಿಸುತ್ತೇವೆ ಎಂದು ನಂಬಿಸಿದ್ದಾರೆ.

ನಾನು ಮನೆ ಮಾರಾಟ ಮಾಡಿ ಬ್ಯಾಂಕ್‌ನಲ್ಲಿ ಇಟ್ಟಿರುವ ಹಣವಿದು. ಯಾವುದೇ ಅವ್ಯವಹಾರದಿಂದ ಬಂದ ಹಣವಲ್ಲ ಎಂದು ನಿವೃತ್ತ ಇಂಜಿನಿಯರ್ ಸಮಜಾಯಿಷಿ ನೀಡಿದ್ದಾರೆ. ಈಗ ನೀವು ಹಣ ಕಳುಹಿಸದಿದ್ದರೆ ನಾವೇ ನಿಮ್ಮ ಮನೆಗೆ ಬಂದು ಅರೆಸ್ಟ್ ಮಾಡುತ್ತೇವೆ ಎಂದು ಹೆದರಿಸಿದ್ದಾರೆ.

ಅವರು ಕಳುಹಿಸಿರುವ ಅಕೌಂಟ್ ನಂಬರ್‌ಗೆ ಹಣ ಕಳುಹಿಸಲು ಇನ್ನೂ ಅನುಮಾನಗೊಂಡಿದ್ದಾರೆ. ಈ ಸಂದರ್ಭದಲ್ಲಿ ಸಿಬಿಐ, ಇಡಿ, ಆದಾಯ ತೆರಿಗೆ ಇಲಾಖೆಯ ಲೆಟರ್‌ಹೆಡ್‌ನಲ್ಲಿರುವ ನೋಟಿಸ್‌ಗಳನ್ನು ನಿವೃತ್ತ ಇಂಜಿನಿಯರ್‌ಗೆ ಕಳುಹಿಸಿ ಮತ್ತಷ್ಟು ಹೆದರಿಸಿದ್ದಾರೆ. ನಕಲಿ ನೋಟಿಸ್‌ಗೆ ನಿವೃತ್ತ ಇಂಜಿನಿಯರ್ ಮತ್ತಷ್ಟು ಬೆಚ್ಚಿ ಬಿದ್ದಿದ್ದಾರೆ.

ಅಲ್ಲದೆ ಕಂತೆ ಕಂತೆ ಹಣ, ಡೆಬಿಟ್ ಕಾರ್ಡ್, ಇದರ ಹಿಂದೆ ಕುಳಿತಿರುವ ಪೊಲೀಸ್ ಅಧಿಕಾರಿಯ ಫೋಟೋಗಳನ್ನು ವಾಟ್ಸಾಪ್‌ನಲ್ಲಿ ಕಳುಹಿಸಿ ಮತ್ತಷ್ಟು ಬೆದರಿಸಿದ್ದಾರೆ. ಇದರಿಂದ ತೀವ್ರ ಆತಂಕಕ್ಕೊಳಗಾದ ನಿವೃತ್ತ ಇಂಜಿನಿಯರ್ ಸೈಬರ್ ಅಪರಾಧಿಗಳು ಕಳುಹಿಸಿದ್ದ ಬ್ಯಾಂಕ್ ಅಕೌಂಟ್ ನಂಬರ್‌ಗೆ ಹಣ ಕಳುಹಿಸಲು ನಿರ್ಧರಿಸಿದ್ದಾರೆ.

ಮಹಾರಾಷ್ಟ್ರದ ಭಾಗ್ಯವತಿ ಎಂಟರ್‌ಪ್ರೈಸಸ್ ಹೆಸರಿನ ಈ ಅಕೌಂಟ್ ನಂಬರ್‌ಗೆ 70 ಲಕ್ಷ ಹಾಗೂ ಕೇರಳದ ಕಣ್ಣಾನೂರಿನ ಆರ್‌ಜಿಎಸ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ 50 ಲಕ್ಷ ಸೇರಿದಂತೆ 1.20 ಕೋಟಿ ರೂಪಾಯಿಗಳನ್ನು ಬ್ಯಾಂಕ್ ಮೂಲಕ ಕಳುಹಿಸಿದ್ದಾರೆ.

ಕೋಟ್ಯಾಂತರ ರೂಪಾಯಿ ಹಣ ಕೈ ಸೇರಿದರೂ ಸೈಬರ್ ವಂಚಕರು ಮತ್ತೆ ಮತ್ತೆ ಫೋನ್ ಮಾಡಿ ಮತ್ತಷ್ಟು ಹಣ ವರ್ಗಾವಣೆ ಮಾಡುವಂತೆ ಪೀಡಿಸಲು ಆರಂಭಿಸಿದ್ದಾರೆ.

ವಂಚನೆ ಬೆಳಕಿಗೆ: ಈ ವೇಳೆ ತಮ್ಮ ಆಪ್ತ ಸ್ನೇಹಿತರೊಬ್ಬರಿಗೆ ಈ ವಿಚಾರ ತಿಳಿಸಿದ ನಿವೃತ್ತ ಇಂಜಿನಿಯರ್, ಮೈಸೂರಿನ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆಗ ತಾನು ವಂಚನೆಗೆ ಒಳಗಾಗಿರುವುದು ನಿವೃತ್ತ ಇಂಜಿನಿಯರ್‌ಗೆ ಖಾತ್ರಿಯಾಗಿದೆ.

ಸೈಬರ್ ಕ್ರೈಂ ಪೊಲೀಸರು ತನಿಖೆ ಆರಂಭಿಸಿದ್ದಾರೆ. ನಿವೃತ್ತ ಇಂಜಿನಿಯರ್ ಕಳುಹಿಸಿರುವ ಅಕೌಂಟ್‌ನಿಂದ ಹಲವು ಕಂತುಗಳಲ್ಲಿ 529 ಅಕೌಂಟ್‌ಗೆ ಹಣ ವರ್ಗಾವಣೆ ಆಗಿರುವುದು ದೃಢಪಟ್ಟಿದೆ.

ನಿವೃತ್ತ ಇಂಜಿನಿಯರ್ ಬಳಿ ಕೋಟ್ಯಾಂತರ ರೂಪಾಯಿ ಹಣ ಇರುವ ಮಾಹಿತಿ ಸೈಬರ್ ವಂಚಕರಿಗೆ ಹೇಗೆ ತಿಳಿಯಿತು? ಎಂಬ ರಹಸ್ಯ ಕುತೂಹಲ ಮೂಡಿಸಿದೆ.

ಸಿಬಿಐ, ಇಡಿ, ಆದಾಯ ತೆರಿಗೆ ಇಲಾಖೆ ನಕಲಿ ಲೆಟರ್‌ಹೆಡ್ ಹಾಗೂ ನಕಲಿ ಸೀಲ್ ಬಳಸಿಕೊಂಡು ಸೈಬರ್ ವಂಚಕರರು ಅಮಾಯಕರನ್ನು ಹೆದರಿಸಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡುತ್ತಿದ್ದಾರೆ.

ಸೈಬರ್ ಅಪರಾಧಿಗಳು ಭಾರತದಲ್ಲೇ ಇದ್ದರೆ ಸುಲಭವಾಗಿ ಅವರನ್ನು ಬಂಧಿಸಿ ಇಡೀ ಜಾಲ ಭೇದಿಸಬಹುದು. ಆದರೆ ಸೈಬರ್ ವಂಚಕರು ಪಾಕಿಸ್ತಾನ ಮತ್ತು ಬಾಂಗ್ಲಾ ದೇಶದಲ್ಲಿ ಕುಳಿತು ತಮ್ಮ ಕರಾಮತ್ತು ತೋರಿ, ಕೋಟ್ಯಾಂತರ ರೂಪಾಯಿ ವಂಚಿಸುತ್ತಿದ್ದಾರೆ.

ಅ.17ಕ್ಕೆ ತಲಕಾವೇರಿ ತೀರ್ಥೋದ್ಭವ



ಮಡಿಕೇರಿ, ಸೆ.15–ಪೌರಾಣಿಕ ಹಿನ್ನೆಲೆ ಹೊಂದಿರುವ ತಲಕಾವೇರಿ ಕ್ಷೇತ್ರದ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವಕ್ಕೆ ಮುಹೂರ್ತ ನಿಗಧಿಯಾಗಿದೆ. ಅ.17ರಂದು ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಸಲ್ಲುವ ಮಕರ ಲಗ್ನದಲ್ಲಿ ಮಾತೆ ಕಾವೇರಿ ತೀರ್ಥ ಸ್ವರೂಪಿಣಿಯಾಗಿ ದರ್ಶನ ನೀಡಲಿದ್ದಾಳೆ.

ತೀರ್ಥೋದ್ಭವ ಹಿನ್ನೆಲೆಯಲ್ಲಿ ಸೆ.26ರ ಶುಕ್ರವಾರ ಬೆಳಿಗ್ಗೆ 9.31 ನಿಮಿಷಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಪತ್ತಾಯಕ್ಕೆ ಅಕ್ಕಿ ಹಾಕುವುದು, ಅ. 4ರಂದು ಬೆಳಿಗ್ಗೆ 8.33 ನಿಮಿಷಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಆಜ್ಞಾ ಮುಹೂರ್ತ, ಅ.14ರಂದು ಪೂರ್ವಾಹ್ನ 11.45 ನಿಮಿಷಕ್ಕೆ ಸಲ್ಲುವ ಧನು ಲಗ್ನದಲ್ಲಿ ಅಕ್ಷಯ ಪಾತ್ರೆ ಇರಿಸುವುದು ಅಂದು ಸಂಜೆ 4.45 ನಿಮಿಷಕ್ಕೆ ಸಲ್ಲುವ ಮೀನ ಲಗ್ನದಲ್ಲಿ ಕಾಣಿಕೆ ಡಬ್ಬಿ ಇಡುವ ಸಾಂಪ್ರದಾಯಿಕ ಪೂಜಾ ವಿಧಿಗಳು ನೆರವೇರಲಿವೆ ಎಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷೀದಾರರಾದ ಶ್ರೀ ಆರ್. ವಿ. ಹರ್ಷ ಬಿನ್ ಶ್ರೀ ಆರ್. ವಿ. ವೆಂಕಟರಾಮಯ್ಯ, ಮನೆ ನಂಬರ್ 466, 10ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಕೆ.ಸಿ.ಲೇಔಟ್, ಮೈಸೂರು ರವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಕೆಳಕಂಡ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷೀದಾರರಿಗೆ ದಿನಾಂಕ 28/06/2007 ರಂದು ನೋಂದಣಿ ಸಂಖ್ಯೆ 05980/2007–08 ರ ಪ್ರಕಾರ ಶ್ರೀ ಪಿ. ಪ್ರಶಾಂತ್ ರವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಬಂದ ಸ್ವತ್ತಾಗಿರುತ್ತದೆ ಮತ್ತು ಸದರಿ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ನಮ್ಮ ಕಕ್ಷೀದಾರರು ಶ್ರೀ ಸುರೇಶ್ ಕುಮಾರ್, ಶ್ರೀ ಮಹದೇವ ಮತ್ತು ಶ್ರೀ ಪ್ರಶಾಂತ್ ಎನ್ನುವವರ ವಿರುದ್ಧ **ಮೈಸೂರಿನ ಮಾನ್ಯ 3ನೇ ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್. ನಂಬರ್ 1412/2025 ಎಂಬ ದಾವೆಯನ್ನು ಸಲ್ಲಿಸಿರುತ್ತಾರೆ ಮತ್ತು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ನಮ್ಮ ಕಕ್ಷೀದಾರರು ಕರ್ನಾಟಕದ ಮಾನ್ಯ ಹೈಕೋರ್ಟಿನಲ್ಲಿ ಆರ್. ಎಸ್. ಎ. ನಂಬರ್ 1340/2025 ಎಂಬ ಅಪೀಲನ್ನು ಸಲ್ಲಿಸಿರುತ್ತಾರೆ** ಮತ್ತು ಮೇಲ್ಕಂಡ ದಾವೆ ಮತ್ತು ಅಪೀಲು ಪೆಂಡಿಂಗ್ ಇರುತ್ತದೆ, ವಸ್ತುಸ್ಥಿತಿ ಹೀಗಿರುವಾಗ ಮೇಲ್ಕಂಡ ಶ್ರೀ ಸುರೇಶ್ ಕುಮಾರ್ ರವರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಬೇರೆಯವರಿಗೆ ಕ್ರಯದ ಕರಾರು, ಕ್ರಯ, ಅಭಿವೃದ್ಧಿ ಕರಾರು ಅಥವಾ ಜೆ.ವಿ ಇತರೆ ವ್ಯವಹಾರಗಳನ್ನು ಮಾಡಲು ಪ್ರಯತ್ನ ಮಾಡುತ್ತಿರುವುದು ನಮ್ಮ ಕಕ್ಷೀದಾರರ ಗಮನಕ್ಕೆ ಬಂದಿರುತ್ತದೆ ಆದರೆ ಮೇಲ್ಕಂಡ ರೀತಿಯಲ್ಲಿ ಮಾನ್ಯ ಹೈಕೋರ್ಟಿನಲ್ಲಿ ಅಪೀಲು ಪೆಂಡಿಂಗ್ ಇರುವುದರಿಂದ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ಕ್ರಯದ ಕರಾರು, ಕ್ರಯ ಪತ್ರ, ಅಭಿವೃದ್ಧಿ ಕರಾರು ಇತರೆ ವ್ಯವಹಾರಗಳನ್ನು ಮಾಡಬಾರದು ಎಂದು ಈ ಮೂಲಕ ಗಮನಕ್ಕೆ ತರುತ್ತಿದ್ದೇವೆ ಇದರ ಹೊರತಾಗಿಯೂ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ವ್ಯವಹರಿಸಿದಲ್ಲಿ ಸದರಿಯವರ ವಿರುದ್ಧವೂ ಸಹ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಆ ವ್ಯವಹಾರಕ್ಕೆ ನನ್ನ ಕಕ್ಷೀದಾರರು ಬದ್ಧರಿರುವುದಿಲ್ಲ ಎಂದು ಈ ಮೂಲಕ ತಿಳಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮಾದಾಪುರ ಗ್ರಾಮದ ಸರ್ವೆ ನಂಬರ್ 53 ರಲ್ಲಿ ಒಟ್ಟು ವಿಸ್ತೀರ್ಣ 04 ಎಕರೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡು ಸಂಪೂರ್ಣ ಲೇಔಟ್ ಆಗಿ ಅಭಿವೃದ್ಧಿ ಪಡಿಸಿರುವ ಜಮೀನು ಷೆಡ್ಯೂಲ್ ಸ್ವತ್ತಾಗಿರುತ್ತದೆ ಮತ್ತು ಇದಕ್ಕೆ ಚೆಕ್ಕುಬಂದಿ :– ಪೂರ್ವಕ್ಕೆ : ಆರಗೌಡನಹಳ್ಳಿ ಗಡಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೆ ನಂಬರ್ 51 ಮತ್ತು 52 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂಬರ್ 53 ರ ಉಳಿಕೆ ಜಮೀನು.

ಸಹಿ/– ಶ್ರೀ ಸೋಮಶೇಖರ, ವಕೀಲರು,
ಮನೆ ನಂಬರ್ 1497, 15ನೇ ಕ್ರಾಸ್,
ಕೆ. ಎಂ. ಹಳ್ಳಿ, ಮೈಸೂರು – 570 019
ಮೊಬೈಲ್ : 93791 68635

ಸ್ಥಳ : ಮೈಸೂರು
ದಿನಾಂಕ : 16/09/2025

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಮೂನೆ ಸಂಖ್ಯೆ INC – 26

[ಕಂಪನಿಗಳ (ನಿಗಮೀಕರಣ) ನಿಯಮಗಳು 2014 ನಿಯಮ 30 ರ ಅನುಸಾರವಾಗಿ]

ಕೇಂದ್ರ ಸರ್ಕಾರ (ಪ್ರಾದೇಶಿಕ) ಆಗ್ನೇಯ ಪ್ರದೇಶದ ಮುಂದೆ ಇನ್ ಕಂಪನಿಗಳ ಕಾಯಿದೆ, 2013 ರ ವಿಭಾಗ 13ರ ಉಪ–ವಿಭಾಗ (4) ಮತ್ತು ಕಂಪನಿಗಳ (ನಿಗಮೀಕರಣ) ನಿಯಮಗಳು, 2014 ರ ನಿಯಮ 30 ರ ಉಪ–ನಿಯಮ (5) ರ ಷರತ್ತು (ಎ) ಯ ವಿಷಯದಲ್ಲಿ

ಮತ್ತು

ಎಂಎಜಿ–ಎಎಲ್ ಎಲೆಕ್ಟ್ರೋಮಿನರಲ್ಸ್ ಪ್ರೈವೇಟ್ ಲಿಮಿಟೆಡ್ (CIN: U43121KA2023PTC178237) ಯ ವಿಷಯದಲ್ಲಿ, ಇದರ ನೊಂದಾಯಿತ ಕಚೇರಿ 1134/E ಕಂಟೂರ್ ರೋಡ್, ಗೋಕುಲಂ, 3ನೇ ಹಂತ, ಮೈಸೂರು, ಕರ್ನಾಟಕ, ಭಾರತ, 570002 ನಲ್ಲಿದೆ.

.... ಅರ್ಜಿದಾರ

ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗುತ್ತದೆ, ಬುಧವಾರ, ಸೆಪ್ಟೆಂಬರ್ 03, 2025 ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯದ ಅನುಸಾರ ಕಂಪನಿಯೂ ತನ್ನ ನೊಂದಾಯಿತ ಕಚೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಗುಜರಾತ್ ರಾಜ್ಯ" ಕ್ಕೆ ಬದಲಿಸಲು ಅನುವು ಮಾಡಿಕೊಡುವಂತೆ ಕಂಪನಿಯ ಸ್ಮರಣಾರ್ಥ ದಾಖಲೆಯ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿಗಳ ಕಾಯಿದೆ, 2013 ರ ವಿಭಾಗ 13(4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಪ್ರಸ್ತಾವಿಸುತ್ತದೆ.

ಕಂಪನಿಯ ನೊಂದಾಯಿತ ಕಚೇರಿಯ ಪ್ರಸ್ತಾವಿತ ಬದಲಾವಣೆಯಿಂದ ಆಸಕ್ತಿ ಪ್ರಭಾವಿತವಾಗಬಹುದಾದ ಯಾವುದೇ ವ್ಯಕ್ತಿಯು ತನ್ನ ಆಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳನ್ನು ಸೂಚಿಸುವ ಅಫಿಡವಿಟ್ ನಿಂದ ಬೆಂಬಲಿತವಾದ ತನ್ನ ಆಕ್ಷೇಪಣೆಗಳನ್ನು ಪ್ರಾದೇಶಿಕ ನಿರ್ದೇಶಕ, ಆಗ್ನೇಯ ಪ್ರದೇಶ, 3ನೇ ಮಹಡಿ, ಕಾರ್ಪೋರೇಟ್ ಭವನ, ಬಂಡ್ಲಗೂಡ, ನಾಗೋಲೆ, ತಟ್ಟಿಯನ್ನಾರಾಂ ಗ್ರಾಮ, ಹಾಯತ್‌ನಗರ್ ಮಂಡಲ್, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ – 500068, ತೆಲಂಗಾಣ ಗೆ ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸಬಹುದು ಅಥವಾ ವಿತರಿಸಬಹುದು ಮತ್ತು ಅರ್ಜಿದಾರ ಕಂಪನಿಗೆ ಕೆಳಗೆ ಉಲ್ಲೇಖಿಸಲಾದ ವಿಳಾಸದಲ್ಲಿರುವ ಅದರ ನೊಂದಾಯಿತ ಕಚೇರಿಯಲ್ಲಿ ಪ್ರತಿ ಕಳುಹಿಸಬಹುದು.

ಎಂಎಜಿ–ಎಎಲ್ ಎಲೆಕ್ಟ್ರೋಮಿನರಲ್ಸ್ ಪ್ರೈವೇಟ್ ಲಿಮಿಟೆಡ್
CIN: U43121KA2023PTC178237

ನೊಂದಾಯಿತ ಕಚೇರಿ ವಿಳಾಸ : 1134/– ಕಂಟೂರ್ ರೋಡ್, ಗೋಕುಲಂ, 3ನೇ ಹಂತ, ಮೈಸೂರು – 570002, ಕರ್ನಾಟಕ.

ಅರ್ಜಿದಾರರ ಪರವಾಗಿ ಮತ್ತು ಪರ,
ಎಂಎಜಿ–ಎಎಲ್ ಎಲೆಕ್ಟ್ರೋಮಿನರಲ್ಸ್ ಪ್ರೈವೇಟ್ ಲಿಮಿಟೆಡ್‌ಗೆ
ಸಹಿ/–
ಅಲಯ್ ಹೇಮಾಂಶು ಥಾಂಕಿ
ನಿರ್ದೇಶಕ (**DIN: 10307962**)

ದಿನಾಂಕ : 16/9/025
ಸ್ಥಳ : ಅಹಮದಾಬಾದ್



ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

"ಐಟಂವಾರು ಟೆಂಡರ್ ಪ್ರಕಟಣೆ"

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗ ವ್ಯಾಪ್ತಿಯ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1&2 ಷರತ್ತು ಮತ್ತು ನಿಯಮಗಳನ್ವಯ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರು (viz https://kppp.karnataka.gov.in/) ಸಲ್ಲಿಸಬಹುದಾಗಿರುತ್ತದೆ. ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.47.20 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.5.02 ಲಕ್ಷಗಳಾಗಿದ್ದು ಹಾಗೂ ಗರಿಷ್ಠ ಇ.ಎಂ.ಡಿ ರೂ.0.94 ಲಕ್ಷಗಳು ಮತ್ತು ಕನಿಷ್ಠ ಇ.ಎಂ.ಡಿ ರೂ.0.13 ಲಕ್ಷಗಳಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಗಿನಂತಿವೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ & ಮೀಸಲಾತಿ ವರ್ಗ	ಟೆಂಡರ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಅಲ್ಪಾವಧಿ ಐಟಂವಾರು ಪ್ರಕಟಣೆ ಸಂಖ್ಯೆ:11/2025–26/2ನೇಕರೆ ದಿ: 12.09.2025	ಕ್ರಮ ಸಂಖ್ಯೆ:02, 03, 11, 19–ಪರಿಶಿಷ್ಟ ಜಾತಿ ಕ್ರಮ ಸಂಖ್ಯೆ:22–ಸಾಮಾನ್ಯ	ದಿ:12.09.2025 ರಿಂದ 19.09.2025	20.09.2025 17.00 ಗಂಟೆಯ ನಂತರ
2.	ಐಟಂವಾರು ಟೆಂಡರ್ ಪ್ರಕಟಣೆ ಸಂಖ್ಯೆ:14/2025–26 ದಿ: 12.09.2025	01 ರಿಂದ 03–ಸಾಮಾನ್ಯ	ದಿ:12.09.2025 ರಿಂದ 19.09.2025	29.09.2025 10.30 ಗಂಟೆಯ ನಂತರ

ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DDMYS/961/KSMCA/515/2025-26



ನಕ್ಕರೆ ಅದೇ ಸ್ವರ್ಗ

ಪರೀಕ್ಷೆಯ ಯಾವುದೇ ರಿಸಲ್ಟ್ಸ್ ಎಕ್ಸಿಟ್ ಪೋಲ್ ಬರುವುದಿಲ್ಲ...!!
ಆದರೂ ನಮ್ಮ ಮನೆಯವರು ಫಲಿತಾಂಶ ಬರುವ 3–4
ದಿನಗಳ ಮೊದಲೇ ಹೊಡೆಯಲು ಪ್ರಾರಂಭಿಸುತ್ತಿದ್ದರು...!!

ಮೈಸೂರು ಮಿತ್ರ

ಮಂಗಳವಾರ, 16 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಸ್ವರ್ಗದಲ್ಲಿ ಎಲ್ಲಾ ಇದೆ... ಸಾವಿಲ್ಲವಂತೆ
ಜಗತ್ತಿನಲ್ಲಿ ಎಲ್ಲಾ ಇದೆ... ನೆಮ್ಮದಿಯಿಲ್ಲವಂತೆ...!
ಹಾಗಾದರೆ...
ನೆಮ್ಮದಿಯಿಂದ ಬದುಕುವ ಬಡವನ ಬದುಕು ಸಾವೇ ಇರದ
ಸ್ವರ್ಗಕ್ಕಿಂತ ಸಾವಿರ ಪಾಲು ಮೇಲು... ಅಲ್ವಾ..!!?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರಿಗೆ ಅರಸನಾದರೂ ತಂದೆಗೆ ಮಗ

ನಿಮ್ಮ ಪತ್ರಗಳು

■ ಗಾಡಿಚೌಕವು ಉದ್ಯಾನವಾಗಲಿ!

ಮಾನ್ಯರೆ,

ಮೈಸೂರು ನಗರದ ಕೃಷ್ಣರಾಜ ಮೊಹಲ್ಲಾದಲ್ಲಿರುವ ಕಾಂತರಾಜ ಅರಸ್ ರಸ್ತೆಯು ಮಾದ್ವಾಚಾರ್ ರಸ್ತೆಯನ್ನು ಕೂಡುವ ಜಾಗದಲ್ಲಿ ಸುಮಾರು ಒಂದೂವರೆ ಎಕರೆ ವಿಸ್ತೀರ್ಣವುಳ್ಳ ಜಾಗವನ್ನು ಉದ್ಯಾನವನದ ಪ್ರದೇಶವೆಂದು ಗುರುತಿಸಲಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ರಚಿಸಿರುವ ಸಮಗ್ರ ಅಭಿವೃದ್ಧಿ ನಕ್ಷೆ(ಸಿಡಿಪಿ)ಯ ಪ್ರಕಾರ ದಿನಾಂಕ 16.05.1997ರ ಕರ್ನಾಟಕ ಸರಕಾರದ ಆದೇಶ ಸಂಖ್ಯೆ :ಯು.ಡಿ.ಡಿ 337 ಟಿ.ಡಿ.ಪಿ 96ರ ಪ್ರಕಾರವೂ ಕೂಡಾ 'ಪಾರ್ಕ್ ಮತ್ತು ಓಪನ್ ಸ್ಪೇಸ್' ಎಂದೇ ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಸಮಗ್ರ ಅಭಿವೃದ್ಧಿ ನಕ್ಷೆಯು 2011ನೇ ಇಸವಿಯವರೆಗೆ ಚಾಲ್ತಿಯಲ್ಲಿದ್ದು, ಇದುವರೆವಿಗೂ ಈ ಜಾಗದ ಉಲ್ಲೇಖದ ಬಗ್ಗೆ ಯಾವುದೇ ರೀತಿಯ ತಿದ್ದುಪಡಿಗಳಾಗಿರುವುದಿಲ್ಲ.

ಲಭ್ಯವಾಗಿರುವ ಮಾಹಿತಿಗಳ ಪ್ರಕಾರ ಈಗ್ಗೆ ಸುಮಾರು 30–40 ವರ್ಷಗಳ ಹಿಂದೆ ಈ ಜಾಗದಲ್ಲಿ ಹೆಗ್ಗಡದೇವನ ಕೋಟೆಯ ಕಡೆಯಿಂದ ಎತ್ತಿನ ಗಾಡಿಗಳಲ್ಲಿ ತರುತ್ತಿದ್ದ ಸೌದೆಯ ಕಟ್ಟುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು.ಈ ಕಾರಣದಿಂದಾಗಿ ಈ ಜಾಗವನ್ನು 'ಗಾಡಿ ಚೌಕ'ಎಂದೇ ಕರೆಯಲಾಗುತ್ತಿತ್ತು. ಕಾಲಕ್ರಮೇಣ ಈ ಜಾಗವನ್ನು ಗಾಡಿಚೌಕವನ್ನಾಗಿ ಬಳಸಿಕೊಳ್ಳುವ ಬಗ್ಗೆ ಸಾರ್ವಜನಿಕರು ಹಾಗೂ ಅಜುಬಾಜು ಪ್ರದೇಶದ ನಿವಾಸಿಗಳು ತಕರಾರು ಮಾಡಿದ್ದರಿಂದ ನಗರ ಪಾಲಿಕೆಯ ಅಧಿಕಾರಿಗಳು ಅಲ್ಲಿ ಗಾಡಿಗಳು ನಿಲ್ಲದಂತೆ ಮಾಡಿ,ಸದರಿ ಜಾಗವನ್ನು ಸದರಿ ಕೆಲಸಕ್ಕೆ ಉಪಯೋಗಿಸದಂತೆ ನೋಡಿಕೊಂಡರು. ಕಾಲಕ್ರಮೇಣ ಸದರಿ ಜಾಗವನ್ನು ಅತಿಕ್ರಮಣಕಾರರಿಂದ ರಕ್ಷಿಸುವ ಉದ್ದೇಶದಿಂದ ನಗರಪಾಲಿಕೆಯು ನಾಲ್ಕು ಕಡೆಗೂ ಕಾಂಪೌಂಡ್ ನಿರ್ಮಿಸಿ ಎರಡು ಕಡೆಯಲ್ಲಿ (ಪೂರ್ವ ಹಾಗೂ ಪಶ್ಚಿಮ) ಕಾಂಪೌಂಡಿಗೆ ಗೇಟುಗಳನ್ನು ಅಳವಡಿಸಿ, ಸುತ್ತಮುತ್ತಲಿನ ಬಡಾವಣೆಯ ಮಹಿಳೆಯರು ಮತ್ತು ಮಕ್ಕಳು ಆ ಜಾಗದೊಳಕ್ಕೆ ಪ್ರವೇಶಿಸಲು ಅನುಕೂಲ ಮಾಡಿಕೊಡಲಾಯಿತು. ಹೀಗಿದ್ದರೂ ಸದರಿ ಜಾಗವನ್ನು ಒಂದು ಸುಂದರ ಉದ್ಯಾನವನವನ್ನಾಗಿ ಪರಿವರ್ತಿಸಲು ನಗರಪಾಲಿಕೆಯು ಇಂದಿನವರೆಗೂ ಯಾವುದೇ ಯೋಜನೆಯನ್ನು ಹಾಕಿಕೊಂಡು ಅನುಷ್ಠಾನಗೊಳಿಸಿಲ್ಲ. ಈ ಜಾಗದ ಸುತ್ತಮುತ್ತಲಿನ ಬಡಾವಣೆಗಳು ಜನನಿಬಿಡವಾದ ಪ್ರದೇಶಗಳಾಗಿದ್ದು ಇಂತಹ ಉದ್ಯಾನವನದ ಸವಲತ್ತು ಈ ಜನಗಳಿಗೆ ಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಇಂತಹ ಪ್ರಯತ್ನದಲ್ಲಿ ಈ ಜಾಗದ ಉತ್ತರ ಭಾಗದಲ್ಲಿದ್ದ ಒಂದು ಅಡ್ಡರಸ್ತೆಯನ್ನೂ ಸೇರಿದಂತೆ ಸ್ವಲ್ಪ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಅಲ್ಲಿ ಕಟ್ಟಡವೊಂದನ್ನು ಕಟ್ಟಿಬಿಟ್ಟಿದ್ದಾರೆ. ಆ ಜಾಗದಲ್ಲಿ ಆಟೋ ರಿಕ್ಷಾಗಳನ್ನು ಮತ್ತು ತಳ್ಳು ಗಾಡಿಗಳನ್ನು ನಿಲ್ಲಿಸುವ ನಿಲ್ದಾಣವನ್ನಾಗಿ ಪರಿವರ್ತನೆ ಮಾಡಿ ಅದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ಈ ಸ್ಥಳದಲ್ಲಿ ಖಾಸಗಿ ಸಮಿತಿಯೊಂದರ ಬೋರ್ಡ್ ಅಳವಡಿಸಲಾಗಿದೆ. ಹೀಗಾಗಿ ಈ ಉದ್ಯಾನವನದ ಜಾಗ ಸಂಪೂರ್ಣ ದುರುಪಯೋಗ ಆಗುವುದನ್ನು ತಪ್ಪಿಸಬೇಕಾಗಿದೆ.

ಈ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಿಕೊಂಡು ಸ್ಪ್ರೇ ಪೇಂಟಿಂಗ್ ಮತ್ತು ಟಿಂಕರಿಂಗ್ ಕೆಲಸಗಳನ್ನು ಮಾಡಲಾಗುತ್ತಿದ್ದು, ಒಟ್ಟಾರೆ ಈ ಉದ್ಯಾನವನವನ್ನು ಖಾಸಗಿ ಗುಜರಿ ಹಾಗೂ ವಾಹನ ನಿಲ್ದಾಣವನ್ನಾಗಿ ಪರಿವರ್ತಿಸಲಾಗಿದ್ದು, ಈಗ ಶಾಶ್ವತವಾಗಿ ದರ್ಗಾ ಕಟ್ಟಡ ನಿರ್ಮಿಸಲು ಆರಂಭಿಸಲಾಗಿದೆ ಎಂಬುದು ದುಃಖಕರವಾದ ಸಂಗತಿಯಾಗಿದೆ.

ಈ ಎಲ್ಲಾ ಕಾರಣಗಳಿಂದ ನಗರ ಪಾಲಿಕೆಯು ಕೂಡಲೇ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಉದ್ಯಾನವನದ ಜಾಗದೊಳಗೆ ಆಗುತ್ತಿರುವ ಅತಿಕ್ರಮಣವನ್ನು ತಪ್ಪಿಸಿ ಸದರೀ ಜಾಗವು ಉದ್ಯಾನವನಕ್ಕೇ ಉಳಿಯುವಂತೆ ಮಾಡಬೇಕಿದೆ. ಅಲ್ಲದೆ ಈ ಜಾಗವನ್ನು ವ್ಯವಸ್ಥಿತವಾಗಿ ಒಂದು ಉದ್ಯಾನವನವನ್ನಾಗಿ ರೂಪಿಸಿ ಸುತ್ತಮುತ್ತಲಿನ ಬಡಾವಣೆಯ ಜನರಿಗೆ ಸಿಕ್ಕಲೇಬೇಕಾದ ನಾಗರಿಕ ಸೌಲಭ್ಯವನ್ನು ದೊರಕಿಸಿ ಕೊಡಬೇಕಾಗಿದೆ. ಈ ವಿಚಾರವಾಗಿ ಮೈಸೂರು ಮಹಾನಗರ ಪಾಲಿಕೆಯು ಗಮನಹರಿಸಿ ಶೀಘ್ರವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಹುಲಿ ಸೆರೆ

ಮಾನ್ಯರೆ,

ಗುಂಡ್ಲುಪೇಟೆ ತಾಲೂಕಿನ ಬೊಮ್ಮಲಾಪುರದಲ್ಲಿ ಹುಲಿ ಹಿಡಿಯದ ಸಿಟ್ಟಿಗೆ ರೋಸಿ ಜನರು ಅರಣ್ಯ ಇಲಾಖೆ ಸಿಬ್ಬಂದಿಯನ್ನೇ ಬೋನಿನಲ್ಲಿ ಕೂಡಿ ಹಾಕಿದ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ. ನಂತರ ಹುಲಿ ಕಾರ್ಯಾಚರಣೆಯನ್ನು ಸಾಕಾನೆ ಬಳಸಿ ಕೂಂಬಿಂಗ್ ಮಾಡುವ ಭರವಸೆ ಮೇಲೆ ಸಿಬ್ಬಂದಿಯನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಬಿಡುಗಡೆ ಮಾಡದೆ ಒಂದು ರಾತ್ರಿ ಹಾಗೆ ಬಿಟ್ಟಿದ್ದರೆ, ರಾತ್ರಿ ಬೇಟೆ ಅರಸಿ ಬೋನಿನ ಬಳಿ ಬರುವ ಹುಲಿಯನ್ನು ಸಿಬ್ಬಂದಿ ಅರವಳಿಕೆ ಚುಚ್ಚುಮದ್ದು ನೀಡಿ, ಸುಲಭವಾಗಿ ಹಿಡಿಯಬಹುದಿತ್ತು ಎನ್ನುವುದು ರೈತರಿಂದ ಬಂದ ಸಲಹೆ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಊಟವೇ ಇಲ್ಲದೆ ಮಕ್ಕಳ ಪರದಾಟ

ಮಾನ್ಯರೆ,

ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾದ ಮಕ್ಕಳನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಲು ಆಯೋಜಿಸಿದ್ದ, ನಂಜನಗೂಡು ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ಬಂದಿದ್ದ, ಮಕ್ಕಳಿಗೆ ಕುಡಿಯಲು ನೀರು ಇಲ್ಲದೇ ಹಾಗೂ ಊಟವೂ ಇಲ್ಲದೇ ಹಸಿವಿನಿಂದಲೇ ಆಟವಾಡಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ ಶಿಕ್ಷಣ ಇಲಾಖೆಯದು ನಾಚಿಕೆಗೇಡಿನ ಸಂಗತಿ. ಮುಂದುವರೆದು ಕ್ರೀಡಾಕೂಟದಲ್ಲಿ ಭಾಗವಹಿಸಿದ ಮಕ್ಕಳಿಗೆ ಊಟದ ವ್ಯವಸ್ಥೆ ಇಲ್ಲವಾದರೂ ಅವರನ್ನು ಕರೆದುಕೊಂಡು ಬಂದಿದ್ದ ಶಿಕ್ಷಕರಿಗೆ ಊಟದ ವ್ಯವಸ್ಥೆ ಏರ್ಪಡಿಸಿದ್ದುದ್ದು ಯಾವ ನ್ಯಾಯ. ಸಾವು ಘೋರವಾದದ್ದು ನಂತರದ ಸ್ಥಾನ ಹಸಿವಿಗೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಗೊತ್ತಿದ್ದರೂ, ಅದರಲ್ಲೂ 7 ವರ್ಷದಿಂದ 14 ವರ್ಷದ ವಯಸ್ಸಿನ ಮಕ್ಕಳನ್ನು ಈ ರೀತಿ ಗೋಳಾಡಿಸಿರುವುದು ಅಮಾನವೀಯತೆಯ ಪರಮಾವಧಿ. ಮುಖ್ಯಮಂತ್ರಿ ತವರಲ್ಲೇ ಇಂತಹ ಅಮಾನವೀಯ ಪ್ರಕರಣ. ಇನ್ನೂ ಮುಂದಾದರೂ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗಮನಹರಿಸುವುದು ಅತ್ಯಗತ್ಯ. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಸೌರ ರಕ್ಷಾಕವಚ ಓಜೋನ್ ಪದರ ವಿನಾಶದ ಆತಂಕ





–ಪ್ರಶಾಂತ್‌ಕುಮಾರ್ ಎ.ಪಿ.
ಸಹಾಯಕ ಪ್ರಾಧ್ಯಾಪಕರು,
ಮೊ: 9844859950

ಪ್ರಾಣಿ ಹಾಗೂ ಸಸ್ಯ ಸಂಕುಲಗಳನ್ನು ಸೂರ್ಯನಿಂದ ಬರುವ ಅತಿ ಅಪಾಯಕಾರಿ ನೇರಳಾತೀತ ಕಿರಣಗಳಿಂದ ರಕ್ಷಿಸಿ, ರಕ್ಷಾ ಕವಚವೆಂದೇ ಗುರುತಿಸಲ್ಪಟ್ಟಿರುವ ಭೂಮಿಯ ಮೇಲ್ಮೈಯಲ್ಲಿರುವ ಪದರವೇ ಓಜೋನ್ ಪದರ.

ಪೃಥ್ವಿಯ ಮೇಲಿನ ಭಾಗದಿಂದ ಸುಮಾರು 15–20 ಕಿ.ಮೀ ಎತ್ತರದಲ್ಲಿ ಸ್ವಾಭಾವಿಕವಾಗಿ ರೂಪುಗೊಂಡಿರುವ ಓಜೋನ್ ಪದರವೇ, ಇಂದು ನಾವೆಲ್ಲರೂ ಭೂಮಿಯ ಮೇಲೆ ಜೀವಂತವಾಗಿರಲು ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಒಂದು ವೇಳೆ ಓಜೋನ್ ಪದರ ರಚನೆಯಾಗದಿದ್ದರೆ ಅಥವಾ ಇಲ್ಲದಿದ್ದರೆ, ಭೂಮಿಯ ಮೇಲೆ ಸಸ್ಯ ಮತ್ತು ಪ್ರಾಣಿ ವರ್ಗಗಳು ಜೀವಿಸಲು ಸಾಧ್ಯವಾಗದೆ, ಭೂಮಿಯು ಕೂಡ ಇತರ ಗ್ರಹಗಳಂತೆ ಜೀವರಹಿತವಾಗಿ ಕೇವಲ ಕಲ್ಲು, ಮಣ್ಣುಗಳ ಚೆಂಡಿನಂತೆ ಇರುತಿತ್ತು.

ರಾಸಾಯನಶಾಸ್ತ್ರ ವಿಜ್ಞಾನದ ಅನ್ವಯ ಓಜೋನ್ ಪದರವೆಂದರೆ, ನೀಲಿ ಬಣ್ಣದಲ್ಲಿರುವ ಗಾಳಿ. ಇದು ಜೀವ ಸಂಕುಲವನ್ನು ರಕ್ಷಿಸುವ ಮಹತ್ಕಾರ್ಯದೊಂದಿಗೆ, ಸರೋವರಗಳನ್ನು ಶುದ್ಧಿಕರಿಸಲು ಮತ್ತು ಕ್ರಿಮಿಗಳನ್ನು ತೊಲಗಿಸಲು ಕೂಡ ಉಪಯೋಗಿಸುತ್ತಾರೆ

ಆದರೆ ಇತ್ತೀಚಿನ ದಶಕಗಳಲ್ಲಿ, ಬಹು ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಕೈಗಾರಿಕೆಗಳು, ಅತಿಯಾದ ನಗರೀಕರಣ, ಅರಣ್ಯ ನಾಶ ಹಾಗೂ ಪರಿಸರ ಮಾಲಿನ್ಯದಿಂದ ಓಜೋನ್ ಪದರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಬರುತ್ತಿದೆ.

ಪ್ರಸ್ತುತ ಹೆಚ್ಚಿನ ಜನರು ವಿಲಾಸಿ ಜೀವನಕ್ಕೆ ಮಾರು ಹೋಗಿರುವುದರ ಪರಿಣಾಮ, ಇಂದು ಬಹುತೇಕ ಮನೆಗಳಲ್ಲಿ ಕಾಣಬಹುದಾದ ಫ್ರಿಡ್ಜ್, ಏರ್‌ಕಂಡೀಷನರ್ ಮುಂತಾದ ತಣ್ಣನೆಯ ವಾತಾವರಣದ ಅನುಭವ ನೀಡುವ ಉಪಕರಣಗಳನ್ನು ನೋಡಬಹುದಾಗಿದೆ. ಆದರೆ, ಈ ವಸ್ತುಗಳೇ ನಮ್ಮ ಜೀವವನ್ನು ಕಾಪಾಡುತ್ತಿರುವ ಓಜೋನ್ ಪದರದ ಜೀವವನ್ನೆ ತೆಗೆಯುತ್ತಿವೆ ಎಂಬುದು ಬಹುಪಾಲು ಜನರಿಗೆ ತಿಳಿಯದ ಸಂಗತಿಯಾಗಿರುವುದು ದುರದೃಷ್ಟಕರ.

ಕಾರಣ, ಈ ಉಪಕರಣಗಳಲ್ಲಿ ಬಳಸುವ ಕ್ಲೋರೊ ಪ್ಲೋರೋ ಕಾರ್ಬನ್ ಎಂಬ ರಾಸಾಯನಿಕ ವಸ್ತು ವಾತಾವರಣಕ್ಕೆ ಬಹು ಸುಲಭವಾಗಿ ಸೇರಿ, ಓಜೋನ್ ಪದರದ ಕಣಗಳನ್ನು ವೇಗವಾಗಿ ನಾಶಗೊಳಿಸುತ್ತದೆ.

ಒಂದು ಮಾಹಿತಿಯ ಪ್ರಕಾರ, ಈಗಾಗಲೇ ಭೂಮಿಯ ಧ್ರುವ ಪ್ರವೇಶಗಳಲ್ಲಿ ಸುಮಾರು ಅರ್ಧದಷ್ಟು ಭಾಗ ಓಜೋನ್ ಪದರ ನಾಶವಾಗಿದೆ. ಇದರಿಂದ, ಪರಿಣಾಮಕಾರಿ ನೇರಳಾತೀತ ಕಿರಣಗಳು ನೇರವಾಗಿ ಹಿಮದ ಗೆಡ್ಡೆಗಳನ್ನು ವೇಗವಾಗಿ ಕರಗಿಸುತ್ತಾ, ಸಮುದ್ರದಲ್ಲಿನ ನೀರಿನ ಮಟ್ಟವು ನಿರಂತರವಾಗಿ ಏರಿಕೆಯಾಗಲು ಕಾರಣವಾಗುತ್ತಿದೆ. ಇದರಿಂದಾಗಿಯೇ, ಇತ್ತೀಚಿನ ದಿನಗಳಲ್ಲಿ ಸುನಾಮಿ, ಪ್ರವಾಹ ಹಾಗೂ ಜಲಪ್ರಳಯದಂತಹ ಮಾನವನ ವಿನಾಶಕಾರಿ ದುರ್ಘಟನೆಗಳು ಸಂಭವಿಸುತ್ತಿರುವುದು. ಹೀಗೆಯೇ ಮುಂದುವರಿದಲ್ಲಿ, ಭೂಮಿಯಲ್ಲಿರುವ ಜೀವ ಸಂಕುಲ ಸರ್ವನಾಶವಾಗುವ ಸಮಯ ಬಹಳ ದೂರವೇನಿಲ್ಲ ಎಂಬುದು ನೂರಕ್ಕೆ ನೂರರಷ್ಟು ಸತ್ಯದ ಸಂಗತಿಯಾಗಿದೆ.

ಜೀವರಕ್ಷಕ ಓಜೋನ್ ಪದರ ನಾಶದಿಂದ ನೈಸರ್ಗಿಕ ಸಂಪನ್ಮೂಲಗಳ ಕ್ಷೀಣಿಸುವಿಕೆ, ಅನಾರೋಗ್ಯ, ಪ್ರಕೃತಿ ವಿಕೋಪ ಘಟನೆಗಳು, ಆರ್ಥಿಕ ಪ್ರಗತಿ ಕುಂಠಿತಗೊಳ್ಳುವುದರೊಂದಿಗೆ ಮಾನವನ ಜೀವನಮಟ್ಟ ಅಧಃಪತನದತ್ತ ಸಾಗುತ್ತದೆ. ಅಂತಿಮವಾಗಿ ಭೂಮಿಯ ಮೇಲೆ ಮನುಕುಲದ ಕುರುಹೇ ಇಲ್ಲದಂತಾಗುತ್ತದೆ.

ಇಂತಹ ಅಪಾಯವನ್ನು ಅರಿತ ಪ್ರಪಂಚದ ಹಲವಾರು ರಾಷ್ಟ್ರಗಳು, ಭವಿಷ್ಯದಲ್ಲಿ ಭೀಕರ ದುರ್ಘಟನೆಯನ್ನು ಎದುರಿಸುವ ಮುನ್ನ, ಅಂತಹ ದುಸ್ಥಿತಿಯಿಂದ ಪಾರಾಗಲು ಇರುವ ಏಕೈಕ ಮಾರ್ಗವೆಂದರೆ ಓಜೋನ್ ಪದರವನ್ನು ರಕ್ಷಿಸುವುದು ಎಂದು ಮನಗಂಡು, 1995ರಲ್ಲಿ ವಿಶ್ವಸಂಸ್ಥೆಯ ನೇತೃತ್ವದಲ್ಲಿ ಸಭೆ ಸೇರಿದ್ದರು.

ಆ ಸಭೆಯಲ್ಲಿ ಪ್ರತಿ ವರ್ಷದ ಸೆಪ್ಟೆಂಬರ್ 16 ಅನ್ನು 'ವಿಶ್ವ ಓಜೋನ್ ದಿನ'ವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು. ಇದರೊಂದಿಗೆ, ಓಜೋನ್ ಪದರ ನಾಶಕ್ಕೆ ಕಾರಣವಾಗುತ್ತಿರುವ ಕ್ಲೋರೋ ಫ್ಲೋರೋ ಕಾರ್ಬನ್ ರಾಸಾಯನಿಕಗಳನ್ನು ಯಾವುದೇ ಉಪಕರಣಗಳಲ್ಲಿ ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಎಚ್ಚರಿಸಲಾಯಿತು. ಅಂದಿನಿಂದ, ಭಾರತವೂ ಸೇರಿದಂತೆ ಬಹುತೇಕ ಎಲ್ಲಾ ದೇಶಗಳು ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿದೆ.

ಈಗಾಗಲೇ, ಓಜೋನ್ ಪದರದ ಮಹತ್ವವನ್ನು ತಿಳಿದು ಅದನ್ನು ರಕ್ಷಿಸಲು, 1989ರಲ್ಲಿ ಕೆನಡಾದ ವಿವಿಧ ರಾಷ್ಟ್ರಗಳು ಸಮಾವೇಶಗೊಂಡು ಮಾಂಟ್ರಿಯಲ್ ಒಪ್ಪಂದ ಹಾಗೂ 2005ರಲ್ಲಿ ಕ್ಯೋಟೋ ಪ್ರೋಟೋಕಾಲ್ ಒಪ್ಪಂದ ಜಾರಿಗೆ ಬಂದಿರುತ್ತದೆ.

ಇಷ್ಟೆಲ್ಲಾ ಪ್ರಯತ್ನಗಳ ನಡುವೆಯೂ, ಇಂದಿಗೂ ಓಜೋನ್ ಪದರದ ಅಸ್ತಿತ್ವ ಅವನತಿಯತ್ತ ಸಾಗುತ್ತಿದೆ. ಓಜೋನ್ ಪದರವೇ ಇಲ್ಲದ ಭೂಮಿಯನ್ನು ಒಂದು ಕ್ಷಣವೂ ಭಾವಿಸಿಕೊಳ್ಳುವುದು ಸಾಧ್ಯವೇ ಇಲ್ಲ. ನಾವು ಬಟ್ಟೆ ಇಲ್ಲದೆ ಹೇಗೆ ನಮ್ಮ ದೇಹವನ್ನು ಚಳಿ, ಬಿಸಿಲು, ಗಾಳಿಯಿಂದ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲವೋ, ಹಾಗೆಯೇ ಓಜೋನ್ ಪದರವಿಲ್ಲದೆ ಭೂಮಿಯೂ ಕೂಡ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಇಳೆಗೆ ಓಜೋನ್ ಪದರವೇ ಬಟ್ಟೆ ಇದ್ದ ಹಾಗೆ. ಆತ್ಮೀಯರೇ, ನೆನಪಿರಲಿ ಭೂಮಿಯಿದ್ದರೆ ನಾವು, ಹಾಗೆಯೇ ಓಜೋನ್ ಪದರ ಇದ್ದರೆ ಮಾತ್ರವೇ ಭೂಮಿ. ಓಜೋನ್ ಪದರವನ್ನು ರಕ್ಷಿಸಲು ಸರ್ಕಾರಗಳು ಅಥವಾ ದೊಡ್ಡವರು ತಲೆ ಕೆಡಿಸಿಕೊಳ್ಳಲಿ ಎನ್ನುವ ಬದಲು ನಮ್ಮಗಳ ಅಳಿಲು ಸೇವೆಯನ್ನು ನೀಡಲು ಮನಸ್ಸು ಮಾಡೋಣ. ಹೀಗಾದಲ್ಲಿ, ನಮ್ಮ ಮುಂದಿನ ಜನಾಂಗಗಳು ಕೂಡ ನೆಮ್ಮದಿಯ ಬದುಕನ್ನು ಭೂಮಿಯ ಮೇಲೆ ನಡೆಸುತ್ತಾರೆ, ಜೊತೆಗೆ ನಮ್ಮನ್ನು ಧನ್ಯತೆಯಿಂದ ನೆನೆಯುತ್ತಾರೆ.

ಓಜೋನ್ ನಾಶದಿಂದ ಸಸ್ಯ ಸಂಕುಲದ ಮೇಲಾಗುವ ಪರಿಣಾಮಗಳು

- ಸೂರ್ಯನ ನೇರಳಾತೀತ ಕಿರಣಗಳಿಂದ ಗಿಡ–ಮರಗಳ ಬೆಳವಣಿಗೆಯು ಕುಂಠಿತವಾಗುತ್ತದೆ.
- ಸಸ್ಯಗಳ ಬೆಳವಣಿಗೆ ಮೊಟಕುಗೊಳ್ಳುವುದರಿಂದ, ಕೃಷಿ ಕ್ಷೇತ್ರ ಹಾಗೂ ಆಹಾರ ಉತ್ಪತ್ತಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ.
- ಹುಲ್ಲುಗಾವಲು, ಅರಣ್ಯಗಳಲ್ಲಿ ನೇರಳಾತೀತ ಕಿರಣಗಳ ಸಂಖ್ಯೆ ಹೆಚ್ಚಾದರೆ, ಪರಿಸರದಲ್ಲಿನ ಸಮತೋಲನ ಏರುಪೇರಾಗಿ ಅಸಮತೋಲನ ಕಂಡುಬರುತ್ತದೆ. ಇದು ಪ್ರಾಣವಾಯುಗೆ ಸಂಚಕಾರ ತರುತ್ತದೆ.

ಪ್ರಾಣಿ ಸಂಕುಲದ ಮೇಲಾಗುವ ಪರಿಣಾಮಗಳು

- ನೇರಳಾತೀತ ಕಿರಣಗಳಿಂದ ಕಣ್ಣಿನಲ್ಲಿರುವ ಕಾರ್ನಿಯ ಬಲಹೀನವಾಗುತ್ತದೆ.
- ಚರ್ಮದ ಕ್ಯಾನ್ಸರ್ ಸಾಧ್ಯತೆ ಹೆಚ್ಚು.
- ಸಾಂಕ್ರಾಮಿಕ ರೋಗಗಳ ಭೀತಿ.
- ಕಣ್ಣಿನ ವಿವಿಧ ಸಮಸ್ಯೆಗಳು ಹಾಗೂ ದೃಷ್ಟಿದೋಷದ ತೊಂದರೆ.
- ರೋಗ ನಿರೋಧಕ ಶಕ್ತಿ ಕಡಿಮೆಯಾಗಿ, ರೋಗಗಳು ಆವರಿಸುವ ಭೀಕರತೆ.

ಓಜೋನ್ ಪದರದ ರಕ್ಷಣೆಗೆ ವಿವಿಧ ರಾಷ್ಟ್ರದ ವಿಜ್ಞಾನಿಗಳು ಎರಡು ಬಗೆಯ ಮಾರ್ಗೋಪಾಯಗಳನ್ನು ಕಂಡುಹಿಡಿಯಲು ಮುಂದಾಗಿದ್ದಾರೆ. ಮೊದಲನೆಯದಾಗಿ, ಈಗಾಗಲೇ ಓಜೋನ್ ಪದರದಲ್ಲಿ ಉಂಟಾಗಿರುವ ರಂಧ್ರಗಳನ್ನು ಪುನರ್ ರಚಿಸುವುದರ ಮೂಲಕ ಮುಚ್ಚುವುದು. ಎರಡನೆಯದಾಗಿ, ಓಜೋನ್ ಪದರದ ಹಾನಿಯಿಂದ ಸಂಭವಿಸಬಹುದಾದ ಅಪಾಯಕಾರಿ ಅನಾಹುತಗಳನ್ನು ಸಮರ್ಥವಾಗಿ ನಿಭಾಯಿಸುವುದು.

ಓಜೋನ್ ಪದರ ನಾಶಪಡಿಸುವ ವಸ್ತುಗಳು

- ಕ್ಲೋರೋ ಫ್ಲೋರೊ ಕಾರ್ಬನ್‌ಗಳು: ಇವುಗಳನ್ನು ಸಾಮಾನ್ಯವಾಗಿ ಏರ್ ಕಂಡಿಷನರ್ ರೆಫ್ರಿಜರೇಟರ್‌ಗಳಲ್ಲಿ ಬಳಸುತ್ತಾರೆ. ಇವು ನಿಷ್ಕ್ರಿಯವಾಗಲು ಸುಮಾರು 50ರಿಂದ 1500 ವರ್ಷಗಳನ್ನು ತೆಗೆದುಕೊಳ್ಳುತ್ತವೆ.
- ಕಾರ್ಬನ್ ಟೆಟ್ರಾ ಕ್ಲೋರೈಡ್: ಇವುಗಳನ್ನು ಸಾಮಾನ್ಯವಾಗಿ ಸಾಲ್ವೆಂಟ್ಸ್‌ಗಳಲ್ಲಿ ಉಪಯೋಗಿಸುತ್ತಾರೆ. ಸುಮಾರು 40 ವರ್ಷಗಳಿಗೂ ಮಿಗಿಲಾಗಿ, ಇವು ನಿಷ್ಕ್ರಿಯವಾಗದೇ ಕಾರ್ಯ ನಿರ್ವಹಿಸುತ್ತವೆ.
- ಮಿಥೇಲ್ ಕ್ಲೋರೋಫಾರಂ: ಇದನ್ನು ಕೂಡ ಸಾಲ್ವೆಂಟ್‌ಗಳಲ್ಲಿ ಬಳಸುತ್ತಾರೆ. ಇದನ್ನು ನಿಷ್ಕ್ರಿಯಗೊಳಿಸಬೇಕಾದರೆ 6 ವರ್ಷಗಳು ಬೇಕಾಗುತ್ತವೆ.
- ಮಿಥೇಲ್ ಬ್ರೋಮೈಡ್: ಇದನ್ನು ಕೃಷಿ ಕ್ಷೇತ್ರದಲ್ಲಿ ಅಧಿಕ ಇಳುವರಿಗೆ ಹಾಗೂ ಕೃಷಿ ಉತ್ಪನ್ನಗಳ ದೀರ್ಘ ಸಂಗ್ರಹಣೆಗೆ ಬಳಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ, ಇದನ್ನು ವರ್ಷಕ್ಕೆ 75 ಸಾವಿರ ಟನ್‌ಗಳಷ್ಟು ವಿಶ್ವಾದ್ಯಂತ ಬಳಸುತ್ತಿದ್ದಾರೆ. ಈ ರಾಸಾಯನಿಕ ನಿಷ್ಕ್ರಿಯಗೊಳ್ಳಲು ಸುಮಾರು 1 ವರ್ಷ ಬೇಕಾಗುತ್ತದೆ.

ಓಜೋನ್ ಪದರ ಕಾಪಾಡುವ ಉತ್ಪನ್ನಗಳು

- ರೆಫ್ರಿಜಿರೇಷನ್ ಕ್ಷೇತ್ರ: ಹೊಸದಾಗಿ ತಯಾರಿಸುವ ರೆಫ್ರಿಜರೇಟರ್ ಮತ್ತು ವಾಯು ನಿಯಂತ್ರಕಗಳಲ್ಲಿ ಕ್ಲೋರೋ ಫ್ಲೋರೋ ಕಾರ್ಬನ್‌ಗೆ ಬದಲಾಗಿ ಹೈಡ್ರೋ ಕ್ಲೋರೋ ಫ್ಲೋರೋ ಕಾರ್ಬನ್ ಅನ್ನು ಕಡ್ಡಾಯ ಉಪಯೋಗಿಸುವುದು.
- ಸಾಲ್ವೆಂಟ್ ಕ್ಷೇತ್ರ: ಮಿಥೇಲ್ ಕ್ಲೋರೋ ಫ್ಲೋರೋ ಬದಲಾಗಿ, ಹೈಡ್ರೋ ಕಾರ್ಬನ್ ಅಥವಾ ಕ್ಲೋರಿನೇಟೆಡ್ ಸಾಲ್ವೆಂಟ್ ಅನ್ನು ಬಳಸುವುದು.
- ಅಗ್ನಿ ಶಾಮಕ ಕ್ಷೇತ್ರ: ಅಗ್ನಿ ದುರಂತಗಳ ಸಂದರ್ಭದಲ್ಲಿ, ಬೆಂಕಿಯನ್ನು ನಂದಿಸಲು ಹಾಲೋನ್ಸ್ ರಾಸಾಯನಿಕ ಪದಾರ್ಥದ ಬದಲು, ಕಾರ್ಬನ್ ಡೈ ಆಕ್ಸೈಡ್‌ಗಳನ್ನು ಬಳಸಲು ಪ್ರಯತ್ನಿಸುವುದು.
- ಕೃಷಿ ಕ್ಷೇತ್ರ: ಮಣ್ಣನ್ನು ರಾಸಾಯನಿಕಗಳಿಂದ ಫಲವತ್ತಾಗಿಸುವ ಬದಲು, ಪ್ರಕೃತಿದತ್ತ ಮಣ್ಣಿನ ಫಲವತ್ತತೆಯ ಮೂಲಗಳಾದ ಜಾನುವಾರುಗಳ ಸಗಣಿ, ಎರೆಹುಳುಗಳ ಗೊಬ್ಬರ, ಬಯೋಲಾಜಿಕಲ್ ಕಂಟ್ರೋಲರ್‌ಗಳನ್ನು ಉಪಯೋಗಿಸಲು ಆಸಕ್ತಿ ತೋರಿಸುವುದು.

ಪೌರಕಾರ್ಮಿಕರ ನಾನಾ ಬೇಡಿಕೆಗಳಿಗೆ ಸಿಎಂ ಸಕಾರಾತ್ಮಕ ಸ್ಪಂದನೆ

ಮೈಸೂರು,ಸೆ.15(ಎಂಟಿವೈ)– ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರು ಮುಂದಿಟ್ಟಿರುವ ವಿವಿಧ ಬೇಡಿಕೆಗಳ ಈಡೇರಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ರಾಜ್ಯಾಧ್ಯಕ್ಷ ನಾರಾಯಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಯ ಬಗ್ಗೆ ಚರ್ಚಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಗಳೂರಿನ ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಸಭೆ ಕರೆದಿದ್ದರು. ಈ ವೇಳೆ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಲ್ಲಿ ಕಾಯಂ ಆಗದೇ ಉಳಿದಿರುವ ಪೌರ ಕಾರ್ಮಿಕರ ಕಾಯಂಗೊಳಿಸುವಿಕೆ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಒಳಚರಂಡಿ ಕಾರ್ಮಿಕ ಸಹಾಯಕರನ್ನು ಸಹ ಗುತ್ತಿಗೆ ಪದ್ಧತಿ ರದ್ದುಗೊಳಿಸಿ ಕಾಯಂಗೊಳಿಸಬೇಕೆಂದು ಮನವಿ ಮಾಡಲಾಯಿತು ಎಂದರು.



ಪೌರಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ಕರೆದಿದ್ದರು.

ಸೂಪರ್ ನ್ಯೂಮರ್ ಹುದ್ದೆ ರದ್ದುಗೊಳಿಸಿ ಕಾಯಂಗೊಳಿಸಬೇಕು, ನೇರ ನೇಮಕಾತಿ ಮಾಡಬೇಕು, ಅನುಕಂಪದಡಿ ಕೆಲಸ ನೀಡಬೇಕು, ಐಪಿಡಿ ಸಾಲಪ್ಪ ವರದಿಯಂತೆ ಪ್ರತಿ 500 ಮಂದಿ ನಾಗರಿಕರಿಗೆ ಓರ್ವ ಪೌರಕಾರ್ಮಿಕರ ನೇಮಕ ಮಾಡಿಕೊಳ್ಳಬೇಕು. ಕರ್ತವ್ಯ ವೇಳೆ ಮೃತಪಟ್ಟರೆ 10 ಲಕ್ಷ ಪರಿಹಾರ, ಎಲ್ಲರಿಗೂ ವಸತಿ ಭಾಗ್ಯ ನೀಡಬೇಕು ಮೊದಲಾದ ಬೇಡಿಕೆ ಈಡೇರಿಕೆಗೆ ಮನವಿ ಮಾಡಲಾಯಿತು. ಇದಕ್ಕೆ ಸಿಎಂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಆರ್.ಶಿವ, ಆರ್.ದಾಸ್, ಯತಿರಾಜ್, ಪಳನಿ, ಆರ್ಟಿಸ್ಟ್ ನಾಗರಾಜ್ ಇನ್ನಿತರರು ಇದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.15– ಸೆಪ್ಟೆಂಬರ್ 16 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 2025–26ನೇ ಸಾಲಿನ ತ್ರೈಮಾಸಿಕ ನಿರ್ವಹಣೆ ಹಮ್ಮಿಕೊಳ್ಳಲಾಗಿರುವುದರಿಂದ ಹಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹುಸ್ಕೂರು, ವಳಗೆರೆ, ಹರತಲೆ, ಬೆಳಲೆ, ಹೆಗ್ಗಡಹಳ್ಳಿ, ಗಾಂಧಿಗ್ರಾಮ, ಬ್ಯಾಳಾರು, ಗೌಡರಹುಂಡಿ, ಅಹಲ್ಯ, ಮೊಬಳ್ಳಿ, ಕಾರ್ಯ, ಮಾದಾಪುರ, ಕುರಿಹುಂಡಿ, ದುಗಳ್ಳಿ ಯಾಲೇಹಳ್ಳಿ ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂನ ನಂಜನಗೂಡು ಉಪವಿಭಾಗ–2 ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾನಪದ ಜ್ಞಾನ ಮಾನವೀಯ ಮೌಲ್ಯಗಳನ್ನೊಳಗೊಂಡ ಬದುಕಿನ ಪಾಠ

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ

ಮೈಸೂರು, ಸೆ.15(ಎಂಕೆ)– ಜಾನಪದ ಜ್ಞಾನವು ಕೇವಲ ಮನೋರಂಜನೆಯಲ್ಲ. ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಒಳಗೊಂಡ ಬದುಕಿನ ಪಾಠ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವ (ಆಡಳಿತ)ರಾದ ಎಂ.ಕೆ.ಸವಿತಾ ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಕನ್ನಡ ಜಾನಪದ ಪರಿಷತ್ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಜಾನಪದ ಹಾಗೂ ವಿಶ್ವ ಬುಡಕಟ್ಟು ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದವೆಂದರೆ ಕೇವಲ ಕಥೆಗಳು, ಹಾಡುಗಳು ಅಥವಾ ನೃತ್ಯಗಳ ಸಂಗ್ರಹವಲ್ಲ. ಅದು ಜನರ ಆತ್ಮದ ಪ್ರತಿಬಿಂಬ. ಬದುಕಿನ ಹೋರಾಟ, ಭಾವನೆ, ನಂಬಿಕೆ ಮತ್ತು ಪರಿಸರದೊಂದಿಗಿನ ಸಹಜ ಬಾಂಧವ್ಯದ ಚಿತ್ತಾರ ಎಂದರು.

ಜಾನಪದದಲ್ಲಿ ಅಡಗಿರುವ ಜ್ಞಾನವು ಕೇವಲ ಮನೋರಂಜನೆಗಾಗಿ ಅಲ್ಲ, ಅದು ಬದುಕಿನ ಪಾಠ. ಹಾಗಾಗಿಯೇ ಪ್ರೌಢಶಾಲಾ ಹಂತದಲ್ಲಿಯೇ ಜಾನಪದವನ್ನು ಪಠ್ಯವಾಗಿ ಕಲಿಸಬೇಕು. ಬುಡಕಟ್ಟು ಸಮುದಾಯದ ಹಿರಿಯರ ಜ್ಞಾನವನ್ನು ದಾಖಲಿಸಬೇಕು. ಬುಡಕಟ್ಟು ಜಾನಪದವು ಶತಮಾನಗಳಿಂದ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಬಂದಿರುವ ಜೀವಂತ ಇತಿಹಾಸ. ಜಗತ್ತಿನ ಅನೇಕ ಬುಡಕಟ್ಟು ಸಮುದಾಯಗಳು ಪ್ರಕೃತಿಯೊಂದಿಗೆ ಹೇಗೆ ಸಮತೋಲನದಿಂದ ಬದುಕಬೇಕು ಎಂಬುದನ್ನು ನಮಗೆ ತೋರಿಸಿವೆ ಎಂದರು.



ಮೈಸೂರು ವಿವಿ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಜಾನಪದ ಹಾಗೂ ವಿಶ್ವ ಬುಡಕಟ್ಟು ದಿನಾಚರಣೆಯಲ್ಲಿ ಜಾನಪದ ಮತ್ತು ಬುಡಕಟ್ಟು ವಿಭಾಗದಲ್ಲಿನ ಸಾಧಕರನ್ನು ಸನ್ಮಾನಿಸಲಾಯಿತು.

ಸನ್ಮಾನ: ಇದೇ ವೇಳೆ ಜಾನಪದ ವಿಭಾಗದ ಹಾಡುಗಾರರಾದ ನೀತು ಉಮೇಶ್, ಪಲ್ಲವಿ ಪೈ, ಕಂಸಾಳೆ ಕಲಾವಿದ ಮಾರಶೆಟ್ಟಹಳ್ಳಿ ಮಹೇಶ್, ಬುಡಕಟ್ಟು ವಿಭಾಗದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹೆಚ್.ಡಿ.ಕೋಟೆ ಆದಿವಾಸಿ ಮುಖಂಡ ಸೋಮಣ್ಣ, ಮಾದಲಿ ಮಾದಯ್ಯ, ಹುಣಸೂರು ತಾಲೂಕಿನ ಭರತವಾಡಿಯ ಲಕ್ಷ್ಮೀ ಅವರನ್ನು ಸನ್ಮಾನಿಸಲಾಯಿತು.

ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮೈವಿವಿ ಹಣಕಾಸು ಅಧಿಕಾರಿ ಕೆ.ಎಸ್. ರೇಖಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸಮಾಜ ಸೇವಕಿ ಕಲ್ಲಿನಾಥಪುರದ ಪದ್ಮಾ ಬೆಟ್ಟಯ್ಯ, ಕೆ.ಆರ್. ಅಶೋಕ, ಕರ್ನಾಟಕ ಜಾನಪದ ಪರಿಷತ್ ವಿಭಾಗೀಯ ಕಾರ್ಯದರ್ಶಿ ಡಾ. ಕಾವೇರಿ ಪ್ರಕಾಶ್, ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಎಚ್. ಪ್ರಕಾಶ್, ಕಾರ್ಯದರ್ಶಿ ಬೆಸೂರು ಮೋಹನ ಪಾಳೇಗಾರ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ 165ನೇ ಜಯಂತಿ ಆಚರಣೆ





ಮೈಸೂರಿನ ಸರ್ ಎಂ. ವಿಶ್ವೇಶ್ವರಯ್ಯ ವೃತ್ತ ಹಾಗೂ ಅಗ್ರಹಾರ ವೃತ್ತದಲ್ಲಿ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ 165ನೇ ಜಯಂತಿಯನ್ನು ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ಮೈಸೂರು, ಸೆ.15(ಎಂಕೆ)– ಮೈಸೂರಿನ ವಿವಿಧೆಡೆ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ 165ನೇ ಜಯಂತಿ ಆಚರಿಸಲಾಯಿತು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಎದುರಿನ ವಿಶ್ವೇಶ್ವರಯ್ಯ ವೃತ್ತದಲ್ಲಿ ಕೆಎಂಪಿಕೆ ಟ್ರಸ್ಟ್ ಹಾಗೂ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಸರ್.ಎಂ.ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಜಯಂತಿ ಆಚರಿಸಲಾಯಿತು.

ಈ ವೇಳೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಮೈಸೂರು ವಿಶ್ವಮಟ್ಟದಲ್ಲಿ ಜನಪ್ರಿಯವಾಗಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೊತೆಯಲ್ಲಿ ಶಿಕ್ಷಣ, ಕೃಷಿ, ನೀರಾವರಿ, ಕೈಗಾರಿಕೆ, ತಂತ್ರಜ್ಞಾನ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಅತ್ಯಾಧುನಿಕ ಯೋಜನೆಗಳನ್ನು ಜಾರಿಗೆ ತರಲು ಕಾರಣೀಭೂತರಾದ ದಿವಾನ್ ಸರ್.ಎಂವಿಶ್ವೇಶ್ವರಯ್ಯ ಅವರ ಕೊಡುಗೆ ಸದಾ ಸ್ಮರಣೀಯ ಎಂದರು.

ಎಲ್ಲೆಡೆ ಸರ್‌ಎಂವಿ ಅವರ ಜನ್ಮದಿನೋತ್ಸವವನ್ನು ಆಚರಿಸಲಾಗುತ್ತಿದ್ದು, ಮೈಸೂರಿನ ಜಿಲ್ಲಾಡಳಿತ, ನಗರಪಾಲಿಕೆ ವತಿಯಿಂದ ಆಚರಿಸದಿರುವುದು ದುರದೃಷ್ಟಕರ. ದಸರಾ ಜಂಬೂಸವಾರಿ ಇದೇ ಮಾರ್ಗದಲ್ಲಿ ಸಾಗಲಿದ್ದು, ಸರ್.ಎಂ.ವಿಶ್ವೇಶ್ವರಯ್ಯ ಅವರ ವೃತ್ತಕ್ಕೆ ವಿಶೇಷವಾಗಿ ವಿದ್ಯುತ್ ದೀಪಾಲಂಕಾರ ಮಾಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ. ರಾಮ್ ಪ್ರಸಾದ್, ಅನಂತು, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅರ್ಚಕ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ನಿರೂಪಕ ಅಜಯ್‌ಶಾಸ್ತ್ರಿ, ಕೆ.ಆರ್.ಎಸ್.ವಿಜಯ್‌ಕುಮಾರ್, ಸುಬ್ಬಯ್ಯ, ಸುಚೇಂದ್ರ, ಸೂರಜ್, ಸದಾಶಿವ ಉಪಸ್ಥಿತರಿದ್ದರು.



ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ ಆಚರಿಸಲಾಯಿತು.



ಮೈಸೂರಿನ ವಿದ್ಯಾವರ್ಧಕ ಪಾಲಿಟೆಕ್ನಿಕ್‌ನಲ್ಲಿ 58ನೇ ಅಭಿಯಂತರರ ದಿನಾಚರಣೆ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಅವರ ಜಯಂತಿ ಆಚರಿಸಲಾಯಿತು. ಲೋಕೋಪಯೋಗಿ ಇಲಾಖೆ ನಿವೃತ್ತ ಕಾರ್ಯಪಾಲಕ ಅಭಿಯಂತರ ಎಂ.ಕೆ.ನಂಜಯ್ಯ, ವಿಜ್ಞಾನ ವಿಭಾಗ ಉಪನ್ಯಾಸಕಿ ಅಮೃತವರ್ಷಿಣಿ, ಪ್ರಾಂಶುಪಾಲ ಕೃಷ್ಣ, ಪಿ.ವಿಶ್ವನಾಥ್, ಗುಂಡಪ್ಪಗೌಡ ಇನ್ನಿತರರು ಇದ್ದರು.



ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯನವರ 165ನೇ ಜಯಂತಿ ಅಂಗವಾಗಿ ಮೈಸೂರಲ್ಲಿ ಅವರು ಸೇವೆ ಸಲ್ಲಿಸಿದ ಲೋಕೋಪಯೋಗಿ ಇಲಾಖೆ ಕಚೇರಿ ಹಾಗೂ ವಾಸವಿದ್ದ 'ಶಿಲ್ಪಿನಿವಾಸ'ದ ಆವರಣದಲ್ಲಿರುವ ವಿಶ್ವೇಶ್ವರಯ್ಯರ ಪುತ್ಥಳಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಎಂ.ವಿಶ್ವನಾಥಯ್ಯ ಮಾಲಾರ್ಪಣೆ ಮಾಡಿದರು. ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ವಿಪ್ರ ಮುಖಂಡರಾದ ಎನ್.ಲಕ್ಷ್ಮೀನರಸಿಂಹ, ರಾಜ್ಯ ಸಂಘಟನಾ ಕಾರ್ಯದರ್ಶಿ ಜಿ.ಆರ್.ಮೋಹನ, ಜಂಟಿ ಕಾರ್ಯದರ್ಶಿ ಎಂ.ಆರ್.ಬಾಲಕೃಷ್ಣ, ಕಲ್ಕೆರೆ ನಾಗರಾಜ್, ಶಂಕರನಾರಾಯಣ ಉಪಸ್ಥಿತರಿದ್ದರು.

ಅಗ್ರಹಾರದಲ್ಲಿ ಸರ್‌ಎಂವಿ ಜಯಂತಿ ಆಚರಣೆ: ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರ ಜಯಂತಿ ಆಚರಿಸಲಾಯಿತು. ಸರ್‌ಎಂವಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸರ್ ಎಂ.ವಿಶ್ವೇಶ್ವರಯ್ಯ ಅವರು, ನಮ್ಮ ನಾಡು, ದೇಶ ಕಂಡಂತಹ ಮಹಾನ್ ಇಂಜಿನಿಯರ್, ಸರಳ ವ್ಯಕ್ತಿತ್ವ, ತಮ್ಮ ಬುದ್ಧಿವಂತಿಕೆ ಹಾಗೂ ಕೆಲಸದಿಂದಲೇ ವಿಶ್ವ ವಿಖ್ಯಾತರಾದವರು ಎಂದು ಸ್ಮರಿಸಿದರು.

ದೇಶದ ಪ್ರಬುದ್ಧ ಅಖಂಡ ಜ್ಞಾನಿಗೆ ಗೌರವ ಸಲ್ಲಿಕೆ

ವಿಶೇಷವಾಗಿ ಬ್ರಿಟಿಷರಿಂದ ಸರ್ ಎಂಬ ಬಿರುದನ್ನು ಪಡೆದ ಅವರನ್ನು ಮೈಸೂರಿಗೆ ಕರೆಸಿಕೊಂಡ ನಾಲ್ವಡಿ ಅವರು, ಕನ್ನಂಬಾಡಿ ಅಣೆಕಟ್ಟು ಕಟ್ಟುವ ಉಸ್ತುವಾರಿ ನೀಡಿದರು. ಕೋಟ್ಯಾಂತರ ಇಂಜಿನಿಯರ್‌ಗಳು ದೇಶದಲ್ಲಿದ್ದರೂ ಸರ್.ಎಂ. ವಿಶ್ವೇಶ್ವರಯ್ಯ ಅವರ ಹುಟ್ಟಿದ ದಿನವನ್ನು ಸರ್ಕಾರ ಇಂಜಿನಿಯರ್ ದಿನಾಚರಣೆಯನ್ನಾಗಿ ಆಚರಿಸುವುದರಲ್ಲಿ ಅವರು, ನೀಡಿದ ನಿಸ್ವಾರ್ಥ ಸೇವೆ, ಅವರ ತತ್ವ, ಆದರ್ಶಗಳು ಅಡಗಿವೆ ಎಂದು ತಿಳಿಸಿದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಮಾತನಾಡಿ, ಮೈಸೂರು ಮಹಾರಾಜರ ಸಹಕಾರದಿಂದ ಅನೇಕ ಕೈಗಾರಿಕೆಗಳು, ವಿದ್ಯುಚ್ಛಕ್ತಿ ಸ್ಥಾವರ, ಮೈಸೂರು ಬ್ಯಾಂಕ್ ಸೇರಿದಂತೆ ಹತ್ತಾರು ಕೊಡುಗೆ ನೀಡಿದ ಸರ್‌ಎಂವಿ ಜಯಂತಿಯನ್ನು ಸರ್ಕಾರ ಜಿಲ್ಲಾಡಳಿತದ ವತಿಯಿಂದ ಆಚರಿಸಬೇಕು ಎಂದು ಆಗ್ರಹಿಸಿದರು.

ಎಪಿಎನ್ ಪ್ರಾಪರ್ಟಿಸ್‌ನ ಎ.ಪಿ. ನಾಗೇಶ್ ನೆರೆದಿದ್ದವರಿಗೆ ಸಿಹಿ ವಿತರಿಸಿದರು. ರಾಜ್ಯ ಒಕ್ಕಲಿಗರ ಸಂಘದ ಸಿ.ಜಿ.ಗಂಗಾಧರ್, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಗೋಲ್ಡನ್ ಸುರೇಶ್, ಪ್ರಭುಶಂಕರ್, ಕೃಷ್ಣಪ್ಪ, ಶಿವಲಿಂಗಯ್ಯ, ನೇಹಾ, ಪದ್ಮ, ಪ್ರಜೀಶ್, ಮನುನಾಯಕ್, ವರಕೂಡು ಕೃಷ್ಣೇಗೌಡ, ಹನುಮಂತಯ್ಯ, ಮಂಜುಳ, ಸುಶೀಲ, ತಾಯೂರ್ ಗಣೇಶ್, ಪ್ರಭಾಕರ್, ತ್ಯಾಗರಾಜ್, ರಾಮಕೃಷ್ಣೇಗೌಡ, ಜ್ಯೋತಿ, ಕುಮಾರ್‌ಗೌಡ, ನಂದಕುಮಾರ್, ರಘು ಅರಸ್, ಅಶೋಕ್ ಹನುಮಂತೇಗೌಡ, ಆನಂದ್‌ಗೌಡ, ದರ್ಶನ್‌ಗೌಡ, ಗಣೇಶ್‌ಪ್ರಸಾದ್ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ವಿಶ್ವಕರ್ಮ ಜಯಂತಿ

ಮೈಸೂರು,ಸೆ.15(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಸೆ.17ರಂದು ಮಧ್ಯಾಹ್ನ 12ಕ್ಕೆ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಜಿಲ್ಲಾ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಸಿ.ಹುಚ್ಚಪ್ಪಾಚಾರ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ ಹಾಗೂ ಮೈಸೂರು ಜಿಲ್ಲಾ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ವಿಶ್ವಕರ್ಮ ಜಯಂತಿ ಆಚರಿಸಲಾಗಿದೆ. ಸೆ.17ರಂದು ಬೆಳಗ್ಗೆ 9ಕ್ಕೆ ಇರ್ವಿನ್ ರಸ್ತೆಯ ಕಾಳಿಕಾಂಬ ಕಮಟೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ವಿಶ್ವಕರ್ಮ ಮೂರ್ತಿ ಹೊತ್ತ ಬೆಳ್ಳಿ ರಥದ ಮೆರವಣಿಗೆ ವಿವಿಧ ರಸ್ತೆಗಳ ಮೂಲಕ ಕಲಾಮಂದಿರ ತಲುಪಲಿದೆ. ಅಲ್ಲಿ ಮಧ್ಯಾಹ್ನ 12ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಅನಂತ ವಿಭೂಷಿತ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಒಡೆಯರ್, ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ಟಿ.ಎಸ್. ಶ್ರೀವತ್ಸ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಹುಯಿಲಾಳು ಕುಮಾರ್, ಕೆಂಡಗಣ್ಣ ವಿಶ್ವಕರ್ಮ, ನಿಂಗಣ್ಣಾಚಾರ್, ಚಂದ್ರು ಹೆಬ್ಬಾಳು ಇದ್ದರು.

ಆರ್ಥಿಕ, ಸಾಮಾಜಿಕ ಸಮೀಕ್ಷೆ ವೇಳೆ ಜಾತಿ ಮುಂದಿನ ಕ್ರಿಶ್ಚಿಯನ್ ಪದ ಕೈಬಿಡಲು ಆಗ್ರಹ

ಮೈಸೂರು,ಸೆ.15(ಎಂಟಿವೈ)– ರಾಜ್ಯದಲ್ಲಿ ನಡೆಸಲು ಉದ್ದೇಶಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ವಿವಿಧ ಜಾತಿ ಹೆಸರಿನ ಮುಂದೆ ಸಂವಿಧಾನದಲ್ಲಿಲ್ಲದ ಕ್ರಿಶ್ಚಿಯನ್ ಪದ ಕೈಬಿಡುವಂತೆ ಮಾದಿಗ ವಿವಿಧ ಸಂಘಟನೆಗಳ ಒಕ್ಕೂಟ ಹಾಗೂ ಶಿವಶರಣ ಮಾದಾರ ಚನ್ನಯ್ಯ ಸೇವಾ ಸಮಿತಿ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆದಿ ದ್ರಾವಿಡ ಸಂಘದ ಸಂಚಾಲಕ ಬಿ.ಎಸ್.ಸುಬ್ರಮಣ್ಯ ಮಾತನಾಡಿ, ಸಮೀಕ್ಷೆ ವೇಳೆ ಜಾತಿಗಳನ್ನು ಹಿಂದೂ–ಕ್ರಿಶ್ಚಿಯನ್ ಎಂದು ಗುರುತಿಸುತ್ತಿರುವುದು ಖಂಡನೀಯ. ಜಾತಿಗಳ ಹೆಸರಿನ ಹಿಂದೆ ಅಥವಾ ಮುಂದೆ ಬಳಸಿರುವ ಕ್ರಿಶ್ಚಿಯನ್ ಪದವನ್ನು ತೆಗೆದುಹಾಕಬೇಕು. ಹಿಂದಿನ ಮೂಲ ಜಾತಿಗಳ ಹೆಸರನ್ನೇ ಬಳಸಬೇಕು. ಪ್ರವರ್ಗವಾರು ಜಾತಿಗಳ ಪಟ್ಟಿಯನ್ನು ಕನ್ನಡ ವರ್ಣಮಾಲೆ ಅನುಸಾರ ಪ್ರಕಟಿಸಬೇಕು ಎಂದರು.

ಜಾತಿಗಳೊಡನೆ ಕ್ರಿಶ್ಚಿಯನ್ ಪದ ಸೇರಿಸಿ ಕ್ರಮ ಸಂಖ್ಯೆ ನೀಡಿರುವುದು ಖಂಡನೀಯ. ಇದು ಮತಾಂತರಕ್ಕೆ ಕುಮ್ಮಕ್ಕು ನೀಡುತ್ತದೆ. ಈಗಾಗಲೇ ಹಿಂದುಳಿದ ವರ್ಗಗಳ ಆಯೋಗವು ಹಿಂದೂ ಧರ್ಮದ ಜಾತಿಗಳ ಹೆಸರಿನೊಂದಿಗೆ ಕ್ರಿಶ್ಚಿಯನ್ ಪದ ಸೇರಿಸಿರುವುದು ಮಾದಿಗ ಮತ್ತು ಸಂಬಂಧಿತ ಜಾತಿಗಳನ್ನು ವಂಚಿಸುವ ಹುನ್ನಾರವಾಗಿದೆ. ಸರ್ಕಾರ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮಸ್ಯೆಗೆ ತಕ್ಷಣವೇ ಪರಿಹಾರ ಕ್ರಮ ಕೈಗೊಳ್ಳಲು ಮುಂದಾಗಬೇಕು. ಇದರೊಡನೆ ನಾಗಮೋಹನ್ ದಾಸ್ ಆಯೋಗದ ವರದಿಯ ಅಂಕಿ ಅಂಶವನ್ನು ಪೂರ್ಣವಾಗಿ ನಿರ್ಲಕ್ಷಿಸಿರುವುದು ಖಂಡನೀಯ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎನ್. ಸ್ವಾಮಿ, ಡಾ. ಆನಂದ್‌ಕುಮಾರ್, ರಾಜಣ್ಣ, ಮಹದೇವ್, ವೈ.ವೆಂಕಟೇಶ್, ವೆಂಕಟರಾಮ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಆಚರಣೆ

ಕೇರಳದ ಪ್ರಗತಿಯಲ್ಲಿ ನಾರಾಯಣ ಗುರುಗಳ ಪಾತ್ರ ಸಿಂಹಪಾಲು: ಶಿಕ್ಷಣ ಸಚಿವ ಮಧು ಬಂಗಾರಪ್ಪ ಗುಣಗಾನ

ಮೈಸೂರು,ಸೆ.15(ಎಂಟಿವೈ)– ಬ್ರಹ್ಮಶ್ರೀ ನಾರಾಯಣ ಗುರುಗಳು ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಿ, ಸಾಮಾಜಿಕ ಕಳಕಳಿ ಪ್ರದರ್ಶಿಸಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಜಯಂತ್ಯೋತ್ಸವ ಸಮಿತಿಯ ಸಹಯೋಗದೊಂದಿಗೆ ಸೋಮವಾರ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರು ಅವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬ್ರಹ್ಮಶ್ರೀ ನಾರಾಯಣ ಗುರುಗಳು ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಿದ್ದರಿಂದ ಕೇರಳದಲ್ಲಿ ಸಾಕ್ಷರತೆ ಶೇ.99ರಷ್ಟು ಪ್ರಗತಿ ಸಾಧಿಸಲು ಸಾಧ್ಯವಾಯಿತು. ದೇವಾಲಯಕ್ಕಿಂತ ಹೆಚ್ಚಾಗಿ ಶಾಲೆಗಳನ್ನು ಕಟ್ಟುವಂತೆ ಹೇಳುತ್ತಿದ್ದರು. ನಾವು ರಾಜ್ಯ–ರಾಜ್ಯಗಳ ನಡುವೆ ಗಡಿ ನಿರ್ಮಿಸಿಕೊಳ್ಳುತ್ತೇವೆ. ಆದರೆ, ವಿದ್ಯಾಭ್ಯಾಸಕ್ಕೆ ಯಾವುದೇ ಬೌಂಡರಿ ಇರುವುದಿಲ್ಲ. ಆ ಕಾರಣದಿಂದ ನಾವು ನಾರಾಯಣ ಗುರುಗಳು ನೀಡಿದ ಮಾರ್ಗದರ್ಶನದಂತೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರು ಅವರು ಕೇರಳ ರಾಜ್ಯವನ್ನು ಸವಾಲಾಗಿ ತೆಗೆದುಕೊಂಡು ಉತ್ತಮ ಸಮಾಜವನ್ನು ಕಟ್ಟಿರುವುದು ರೋಮಾಂಚನವನ್ನುಂಟು ಮಾಡುತ್ತದೆ. ಸಮಾಜದಲ್ಲಿನ ತಾರತಮ್ಯವನ್ನು ಕಡಿಮೆ ಮಾಡಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಕರ್ನಾಟಕದಲ್ಲಿ ಕ್ರಾಂತಿಕಾರಿ ಬಸವಣ್ಣನವರು ಹುಟ್ಟಿದ್ದಂತೆ ಕೇರಳದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು ಜನಿಸಿದ್ದಾರೆ. ದೇವರು ಒಬ್ಬನೇ. ಭಕ್ತಿ ಮತ್ತು ಮನುಷ್ಯನ ನಡುವೆ ಯಾವುದೇ ಭೇದ ಇರುವುದಿಲ್ಲ. ಶಿಕ್ಷಣ, ರಾಜಕೀಯ, ಧಾರ್ಮಿಕ ಕ್ಷೇತ್ರ ಸೇರಿದಂತೆ ಯಾವುದೇ ಕ್ಷೇತ್ರದಲ್ಲಾದರೂ ಸರಿ ಕಷ್ಟಪಟ್ಟು ದುಡಿಯಬೇಕು, ಶ್ರಮ ವಹಿಸಬೇಕು ಎಂದು ಹೇಳಿದವರು ಬ್ರಹ್ಮಶ್ರೀ ನಾರಾಯಣ ಗುರುಗಳು ಎಂದು ಸ್ಮರಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತದ ವತಿಯಿಂದ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಬ್ರಹ್ಮಶ್ರೀ ನಾರಾಯಣ ಗುರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರುಗಳು ನಮಗೆ ಸ್ಮರಣೀಯ ಕೊಡುಗೆ ನೀಡಿದ್ದಾರೆ. ಅವರು ನಡೆದುಬಂದ ಹಾದಿಯಲ್ಲಿ ನಾವು ನಡೆಯಬೇಕು. ನಮ್ಮ ಸಮಾಜದಲ್ಲಿ ಒಗ್ಗಟ್ಟು ಎನ್ನುವುದು ಬಹಳ ಮುಖ್ಯ ಆದ್ದರಿಂದ ನಾವೆಲ್ಲರೂ ಒಗ್ಗಟ್ಟಿನಿಂದ ಬದುಕಬೇಕು. ಎಲ್ಲರನ್ನೂ ಸಮಾನತೆಯಿಂದ ಕಾಣಬೇಕು ಎಂದು ಸಲಹೆ ನೀಡಿದರು.

ಬ್ರಹ್ಮಶ್ರೀ ನಾರಾಯಣಗುರು ಮಿಷನ್ ಚಾರಿಟೆಬಲ್ ಟ್ರಸ್ಟ್‌ನ ಕಾರ್ಯದರ್ಶಿ ಮನೋಜ್ ಕುಮಾರ್ ಕೆ. ಜೆ ಅವರು ಮಾತನಾಡಿ ಬ್ರಹ್ಮಶ್ರೀ ನಾರಾಯಣ ಗುರು ಅವರು ಪ್ರಪಂಚದ ಸಾಧಕರ ಸಾಲಿಗೆ ಸೇರುತ್ತಾರೆ. ಜಗತ್ತು ಕಂಡಂತಹ ಮಹಾನ್ ದಾರ್ಶನಿಕರು. ಕೇರಳ ರಾಜ್ಯವನ್ನು ಕೆಲವು ವರ್ಷಗಳಲ್ಲಿ ಧಾರ್ಮಿಕ, ಶೈಕ್ಷಣಿಕ ಹಾಗೂ ವ್ಯವಸಾಯದ ಕ್ಷೇತ್ರವನ್ನಾಗಿ ಮಾಡಿದ ಅಭೂತ ಪೂರ್ವ ಸಮಾಜ ಸುಧಾರಕರು.

ಶೋಷಿತರ, ಹಿಂದುಳಿದ ದೀನ–ದಲಿತರ ಅನೇಕ ಕಟ್ಟು ಪಾಡುಗಳಿಗೆ ಒಳಪಟ್ಟು ಬೀದಿ ಬೀದಿಗಳಿಗೆ ಮುಕ್ತವಾಗಿ ತಿರುಗಾಡಲು, ಕೆರೆ ಬಾವಿಗಳಲ್ಲಿ ನೀರನ್ನು ಸ್ಪರ್ಶಿಸಲು, ತನ್ನ ಇಷ್ಟದ ದೇವರನ್ನು ಆರಾಧಿಸಲು ಅವಕಾಶ ಮಾಡಿಕೊಟ್ಟವರು ಬ್ರಹ್ಮಶ್ರೀ ನಾರಾಯಣ ಗುರುಗಳು ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಸೋಲೂರು ಆರ್ಯ ಈಡಿಗ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವಿಖ್ಯಾತಾನಂದ ಸ್ವಾಮೀಜಿ, ಶಿವಮೊಗ್ಗ ನಾರಾಯಣ ಗುರು ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ರೇಣುಕಾನಂದ ಸ್ವಾಮೀಜಿ ವಹಿಸಿದ್ದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಕೋಟೆ ಆಂಜನೇಯಸ್ವಾಮಿ ದೇವಾಲಯ ಬಳಿಯಿಂದ ಬ್ರಹ್ಮಶ್ರೀ ನಾರಾಯಣ ಗುರು ಅವರ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ ಜೆಎಲ್‌ಬಿ ರಸ್ತೆ ವಿನೋಬಾ ರಸ್ತೆ ಮೂಲಕ ಕಲಾಮಂದಿರಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ.ಕೆ. ಪೋತ ರಾಜ್, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ. ತಿಮ್ಮೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಪಾಲಿಕೆಯ ಮಾಜಿ ಸದಸ್ಯ ಪಿ.ದೇವರಾಜ್, ಮೈಸೂರು ಆರ್ಯ ಈಡಿಗರ ಮಹಿಳಾ ಸಂಘದ ಅಧ್ಯಕ್ಷೆ ಸರೋಜಮ್ಮ ಪಾಪೇಗೌಡ, ಎಸ್.ಎನ್‌ಡಿ.ಪಿ. ಅಧ್ಯಕ್ಷ ರಾಜೇಂದ್ರ, ಹುಣಸೂರು ಆರ್ಯ ಈಡಿಗರ ಸಂಘದ ಅಧ್ಯಕ್ಷ ಹೆಚ್.ಎಂ. ವಿಶ್ವನಾಥ್, ನಂಜನಗೂಡು ಆರ್ಯ ಈಡಿಗರ ಸಂಘದ ಅಧ್ಯಕ್ಷ ಟಿ. ಗಿರೀಶ್, ಚಾಮರಾಜನಗರ ಆರ್ಯ ಈಡಿಗರ ಸಂಘದ ಅಧ್ಯಕ್ಷ ಶ್ರೀನಿವಾಸ್ ಸೇರಿದಂತೆ ಸಮುದಾಯ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಪಾಲಿಕೆ ನೌಕರರ ಸಂಘದ ವಾರ್ಷಿಕ ಸಭೆ



ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಪುರಭವನದಲ್ಲಿ ಆಚರಿಸಲಾಯಿತು. ಈ ವೇಳೆ ನೌಕರರ ಸಂಘದ ಅಧ್ಯಕ್ಷ ಎಸ್.ಯಶೋಧರ, ಉಪಾಧ್ಯಕ್ಷೆ ಕೆ.ಸುಮಂಗಳ, ಖಜಾಂಚಿ ನಸ್ರುಲ್ಲಾ, ನಿರ್ದೇಶಕರಾದ ಎಂ.ಬಸಪ್ಪ, ಎಸ್.ಮೈತ್ರಿ ಬಿ.ಪ್ರಸಾದ್, ಎಚ್.ಎಂ.ಶಿವಪ್ರಸಾದ್, ಡಿ.ಸುರೇಂದ್ರ ಕುಮಾರ್, ಕೆ.ವಿಶ್ವನಾಥ್, ವಿ.ರಾಜೇಶ್ವರಿ ಬಾಯಿ, ಬಿ.ರಾಜು, ಎನ್.ಮಂಜುನಾಥ್, ಕಾರ್ಯದರ್ಶಿ ಎನ್.ಶಿವಕುಮಾರ್, ಎಂ.ಸಿದ್ದಪ್ಪಾಜಿ, ಎಂ.ವಿ.ಮೋಹನ್‌ಕುಮಾರ್, ಎನ್.ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ರಷ್ಯಾದ ತೈಲ ಸಂಸ್ಕರಣಾಗಾರದ ಮೇಲೆ ಉಕ್ರೇನ್‌ನಿಂದ ಡ್ರೋನ್ ದಾಳಿ

ಮಾಸ್ಕೋ: ರಷ್ಯಾದ ತೈಲ ಸಂಸ್ಕರಣಾಗಾರಗಳ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ. ಶನಿವಾರ ಉಕ್ರೇನ್ 361 ಡ್ರೋನ್‌ಗಳೊಂದಿಗೆ ರಷ್ಯಾದ ಮೇಲೆ ಪ್ರಮುಖ ದಾಳಿ ನಡೆಸಿತು. ಈ ದಾಳಿಯಲ್ಲಿ ರಷ್ಯಾದ ವಾಯುವ್ಯದಲ್ಲಿರುವ ಬೃಹತ್ ಕಿರಿಶಿ ತೈಲ ಸಂಸ್ಕರಣಾಗಾರದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಇಂದು ಘಟನೆ ಕುರಿತಂತೆ ಪ್ರತಿಕ್ರಿಯಿಸಿದ ರಷ್ಯಾ ಮತ್ತು ಉಕ್ರೇನಿಯನ್ ಅಧಿಕಾರಿಗಳು, ಯಾವುದೇ ಸಾವು–ನೋವುಗಳು ಸಂಭವಿಸಿಲ್ಲ ಎಂದು ದೃಢಪಡಿಸಿದ್ದಾರೆ. ಕಿರಿಶಿ ವಾರ್ಷಿಕವಾಗಿ ಸುಮಾರು 17.7 ಮಿಲಿಯನ್ ಮೆಟ್ರಿಕ್ ಟನ್ (ದಿನಕ್ಕೆ 355,000 ಬ್ಯಾರೆಲ್) ಕಚ್ಚಾ ತೈಲ ಉತ್ಪಾದಿಸುತ್ತದೆ. ಇದು ದೇಶದ ಒಟ್ಟು ತೈಲದ 6.4% ಆಗಿದೆ. ರಷ್ಯಾದ ವಾಯು ರಕ್ಷಣಾ ವ್ಯವಸ್ಥೆಗಳು ನಾಲ್ಕು ಮಾರ್ಗದರ್ಶಿ ವೈಮಾನಿಕ ಬಾಂಬ್‌ಗಳು ಮತ್ತು ಯುಎಸ್ ನಿರ್ಮಿತ ಹಿಮಾರ್ಸ್ ಕ್ಷಿಪಣಿ ಸೇರಿದಂತೆ ಕನಿಷ್ಠ 361 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.



ಬಟ್ಟೆ ಹಾಕಿದ್ರೆ ನೋ ಎಂಟ್ರಿ, ಭಾರತಕ್ಕೂ ಬಂತು ಬೆತ್ತಲೆ ಪಾರ್ಟಿ!

ರಾಯ್‌ಪುರ: ರಾಯ್‌ಪುರದಲ್ಲಿ ಈ ತಿಂಗಳ ಕೊನೆಯಲ್ಲಿ ಹೆಣ್ಮಕ್ಕಳು ಗಂಡಸರು ಎಂಬ ಭೇದಭಾವವಿಲ್ಲದೆ 'ಬೆತ್ತಲೆ ಪಾರ್ಟಿ' ಆಯೋಜಿಸುವ ಆನ್‌ಲೈನ್ ಆಹ್ವಾನ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದ್ದು, ಇದರ ಬೆನ್ನಲ್ಲೇ ಅಲರ್ಟ್ ಆದ ಛತ್ತೀಸ್‌ಗಢ ರಾಜ್ಯ ಮಹಿಳಾ ಆಯೋಗ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದೆ. ಸೆ.21ರಂದು ರಾಯ್‌ಪುರದಲ್ಲಿ ನಡೆಯಲಿರುವ 'ಬೆತ್ತಲೆ ಪಾರ್ಟಿ' ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಪೋಸ್ಟರ್‌ಗಳಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಅಧಿಕಾರಿಗಳ ಪ್ರಕಾರ ಆಯೋಜಕರು ಸಂಜೆ 4ರಿಂದ ತಡರಾತ್ರಿವರೆಗೆ ಪಾರ್ಟಿ ನಡೆಸಲು ಯೋಜಿಸಿದ್ದರು. ಈ ಪಾರ್ಟಿಗೆ 40,000 ರೂ. ಪ್ರವೇಶ ಶುಲ್ಕ ಇಟ್ಟಿದ್ದರು ಎಂದು ತಿಳಿದುಬಂದಿದೆ. ಭಾನುವಾರ ಸಂಜೆ ಪೊಲೀಸರು ಈ ಪ್ರಕರಣದಲ್ಲಿ ಸಂಘಟಕರು ಸೇರಿದಂತೆ ಏಳು ಜನರನ್ನು ಬಂಧಿಸಿದ್ದಾರೆ. ಆಯೋಜಕರು, ಪ್ರಾಯೋಜಕರು ಮತ್ತು ಆಹ್ವಾನ ಕಳುಹಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಯೋಗದ ಅಧ್ಯಕ್ಷೆ ಕಿರಣ್‌ಮಯಿ ನಾಯಕ್ ರಾಯ್‌ಪುರ ಪೊಲೀಸರಿಗೆ ನಿರ್ದೇಶನ ನೀಡಿದ್ದಾರೆ.



ನೇಪಾಳದ ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಸಂಪುಟಕ್ಕೆ ಮೂವರು ಸಚಿವರ ಸೇರ್ಪಡೆ

ಕಠ್ಮಂಡು: ನೇಪಾಳದ ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಅವರ ಸಂಪುಟಕ್ಕೆ ಸೇರ್ಪಡೆಗೊಂಡ ಮೂವರು ಸಚಿವರಿಗೆ ಅಧ್ಯಕ್ಷ ರಾಮಚಂದ್ರ ಪೌಡೆಲ್ ಸೋಮವಾರ ಪ್ರಮಾಣ ವಚನ ಬೋಧಿಸಿದರು. ನೇಪಾಳದ ಮೊದಲ ಮಹಿಳಾ ಪ್ರಧಾನಿಯಾಗಿ 73 ವರ್ಷದ ಕಾರ್ಕಿ ಅಧಿಕಾರ ವಹಿಸಿಕೊಂಡಿದ್ದಾರೆ. ಕುಲ್ಮನ್ ಘಿಸಿಂಗ್, ರಾಮೇಶ್ವರ್ ಖನಾಲ್ ಮತ್ತು ಓಂ ಪ್ರಕಾಶ್ ಆರ್ಯಲ್ ಅವರನ್ನು ಸಚಿವರನ್ನಾಗಿ ನೇಮಿಸಲಾಗಿದೆ. ಕಠ್ಮಂಡುವಿನ ರಾಷ್ಟ್ರಪತಿ ಕಚೇರಿಯಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಯಿತು. ಮಾಜಿ ಹಣಕಾಸು ಕಾರ್ಯದರ್ಶಿ ಖನಾಲ್ ಹಣಕಾಸು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನೇಪಾಳ ವಿದ್ಯುತ್ ಪ್ರಾಧಿಕಾರದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಘಿಸಿಂಗ್ ಇಂಧನ, ಜಲ ಸಂಪನ್ಮೂಲಗಳು ಮತ್ತು ನೀರಾವರಿ, ಭೌತಿಕ ಮೂಲಸೌಕರ್ಯ ಮತ್ತು ಸಾರಿಗೆ, ನಗರಾಭಿವೃದ್ಧಿ ಮೂರು ಖಾತೆಗಳನ್ನು ವಹಿಸಿಕೊಂಡಿದ್ದಾರೆ. ವಕೀಲರಾಗಿರುವ ಆರ್ಯಲ್, ಗೃಹ ವ್ಯವಹಾರ ಮತ್ತು ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.



ಬೈಕ್‌ಗೆ BMW ಕಾರು ಡಿಕ್ಕಿ: ಕೇಂದ್ರ ಹಣಕಾಸು ಇಲಾಖೆ ಅಧಿಕಾರಿ ಸಾವು

ನವದೆಹಲಿ: ಮಹಿಳೆಯೊಬ್ಬರು ಚಲಾಯಿಸುತ್ತಿದ್ದ ಬಿಎಂಡಬ್ಲ್ಯು ಕಾರೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಬೈಕ್ ಚಲಾಯಿಸುತ್ತಿದ್ದ ಕೇಂದ್ರ ಹಣಕಾಸು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕಾರು ಚಲಾಯಿಸುತ್ತಿದ್ದ ಗಗನಪ್ರೀತ್ ಎಂಬ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೇಂದ್ರ ಹಣಕಾಸು ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಆರ್ಥಿಕ ವ್ಯವಹಾರಗಳ ಇಲಾಖೆ ಉಪಕಾರ್ಯದರ್ಶಿ ನವಜೋತ್ ಸಿಂಗ್ (52) ಮೃತರು. ಹರಿನಗರದ ಸಿಂಗ್ ಅವರು ಪತ್ನಿಯೊಂದಿಗೆ ಸಮೀಪದ ಬಂಗ್ಲಾ ಸಾಹೇಬ್ ಗುರುದ್ವಾರಕ್ಕೆ ತೆರಳಿ ಬೈಕ್‌ನಲ್ಲಿ ವಾಪಸ್ ಬರುವಾಗ ದೆಹಲಿ ಕಂಟೋನ್ಮೆಂಟ್ ಮೆಟ್ರೊ ರೈಲು ನಿಲ್ದಾಣದ ಬಳಿ ಈ ದುರ್ಘಟನೆ ನಡೆದಿದೆ. ಬಿಎಂಡಬ್ಲ್ಯು ಕಾರು ನವಜೋತ್‌ಸಿಂಗ್‌ರ ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದರು.

ಆಂಬುಲೆನ್ಸ್ ಬರುವುದು ತಡವಾಗಿದ್ದರಿಂದ ಅಪಘಾತ ಮಾಡಿದ್ದವರೇ ತಮ್ಮದೇ ಕಾರಿನಲ್ಲಿ ನವಜೋತ್ ಸಿಂಗ್ ಅವರನ್ನು ದೂರದ ನ್ಯೂಲೈಫ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ಅವರು ಮೃತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಕ್ಯಾಲಿಫೋರ್ನಿಯಾದಲ್ಲಿ 33 ವರ್ಷದಿಂದ ನೆಲೆಸಿರುವ ಸಿಖ್ ಮಹಿಳೆ ಬಂಧನ

ಕ್ಯಾಲಿಫೋರ್ನಿಯಾ: ಕಳೆದ 35 ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿರುವ ಸಿಖ್ ಮಹಿಳೆಯನ್ನು ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ಜಾರಿ (ಐಸಿಇ) ಬಂಧಿಸಿದೆ. ಕ್ಯಾಲಿಫೋರ್ನಿಯಾದ 73 ವರ್ಷದ ಸಿಖ್ ಮಹಿಳೆ ಹರ್ಜೀತ್ ಕೌರ್ ಅವರನ್ನು ಕಳೆದ ವಾರ ಯಾವುದೇ ಕಾರಣವಿಲ್ಲದೆ ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ಜಾರಿ (ಐಸಿಇ) ಬಂಧಿಸಿದೆ. ಅವರು ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ. ಅವರ ಬಂಧನವು ಸಿಖ್ ಸಮುದಾಯದಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿದೆ.

ಕೌರ್ 1992 ರಲ್ಲಿ ಇಬ್ಬರು ಮಕ್ಕಳ ಜತೆ ಭಾರತದಿಂದ ಅಮೆರಿಕಕ್ಕೆ ಹೋದರು ಮತ್ತು ಹರ್ಕ್ಯುಲಸ್‌ನಲ್ಲಿ 'ಪಂಜಾಬಿ ದಾದಿ' ಎಂದು ಪ್ರಸಿದ್ಧರಾದರು. ಈಗ ಅವರ ಬಂಧನದ ಬಗ್ಗೆ ಸಿಖ್ ಸಮುದಾಯ ಮತ್ತು ಇತರ ಅನಿವಾಸಿ ಭಾರತೀಯರಲ್ಲಿ ಅಸಮಾಧಾನ ಮೂಡಿಸಿದೆ. ಹರ್ಜೀತ್‌ಕೌರ್‌ರನ್ನು ಸೆ.8 ರಂದು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಬಂಧಿಸಲಾಯಿತು. ಮರುದಿನ ಅವರನ್ನು ಬೇಕರ್ಸ್‌ಫೀಲ್ಡ್‌ನಲ್ಲಿರುವ ಮೆಸಾ ವರ್ಡೆ ಬಂಧನ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಹರ್ಜೀತ್ ಕೌರ್ ಯಾವುದೇ ಹಿಂದಿನ ಕ್ರಿಮಿನಲ್ ದಾಖಲೆಯನ್ನು ಹೊಂದಿರಲಿಲ್ಲ.



ಮೈಸೂರು ಮಿತ್ರ
ಮಂಗಳವಾರ 16 ಸೆಪ್ಟೆಂಬರ್ 2025

ಮುಂದಿನ ಪೀಳಿಗೆಗೆ ಪ್ರಜಾಪ್ರಭುತ್ವ ತಲುಪಿಸಿ

ಶಾಸಕ ರಮೇಶ್‌ಬಾಬು



ಸೈಕಲ್ ಜಾಥಾಕ್ಕೆ ಶಾಸಕ ರಮೇಶ್ ಬಾಬು ಚಾಲನೆ ನೀಡಿದರು.

ಮಂಡ್ಯ, ಸೆ.15– ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಅನುಸರಿಸುವ ಜೊತೆಗೆ ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮ ಜವಾಬ್ದಾರಿ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಸೋಮವಾರ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಮಹತ್ವವನ್ನು ಸಾರುವ ದೃಷ್ಟಿಯಿಂದ ವಿಶ್ವಸಂಸ್ಥೆ ಜಗತ್ತಿನಾದ್ಯಂತ ಇಂದು ಪ್ರಜಾಪ್ರಭುತ್ವ ದಿನ ಆಚರಿಸುತ್ತಿದೆ ಎಂದರು.

ಅನೇಕ ಹಿರಿಯರು ಹೋರಾಟ ಮಾಡಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ನಮಗೆ ನೀಡಿದ್ದಾರೆ. ಜಗತ್ತಿನಲ್ಲಿ ಎಲ್ಲೂ ಇಲ್ಲದ ಪ್ರಜಾಪ್ರಭುತ್ವವನ್ನು ನಾವು ಹೊಂದಿದ್ದೇವೆ. ಶ್ರೀಲಂಕಾ, ಬಾಂಗ್ಲಾದೇಶ, ಆಫ್ಘಾನಿಸ್ತಾನ, ಇತ್ತೀಚೆಗೆ ನೇಪಾಳದಲ್ಲಿ ಉಂಟಾಗಿರುವ ಸಮಸ್ಯೆ ಎಲ್ಲರಿಗೂ ತಿಳಿದಿದೆ. ಇಡೀ ವಿಶ್ವದಲ್ಲಿ ಶಕ್ತಿ ಹಾಗೂ ಸಾಮಾಜಿಕ ಬದ್ಧತೆ ಕೊಟ್ಟಿರುವ ಯಾವುದಾದರೂ ಪ್ರಭುತ್ವ ಇದ್ದರೆ ಅದು ಭಾರತದ ಸಂವಿಧಾನ ಮಾತ್ರ ಎಂದು ಹರ್ಷ ವ್ಯಕ್ತಪಡಿಸಿದರು.

ನೆರೆ ರಾಷ್ಟ್ರಗಳಿಗೆ ಹೋದಾಗ ಮಾತ್ರ ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವ ವ್ಯವಸ್ಥೆ ಕುರಿತು ಅರಿವು ಮೂಡುತ್ತದೆ. ನಿತ್ಯ ಜೀವನದ ಜಂಜಾಟದ ನಡುವೆ ಪ್ರಜಾಪ್ರಭುತ್ವ ಮೇಲೆ ಇರಬೇಕಾದ ಸಾಮಾಜಿಕ ಕಳಕಳಿ ಮರೆಯುತ್ತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಮೇಲು–ಕೀಳು, ಬಡವ–ಶ್ರೀಮಂತ, ಮೇಲ್ಜಾತಿ –ಕೆಳಜಾತಿ ಎಂಬ ಮನೋಭಾವನೆ ಇಲ್ಲ. ಪ್ರಸ್ತುತ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕಡೆಗಣಿಸುವ ನಿಟ್ಟಿನಲ್ಲಿ ಗಲಭೆಗಳು, ರಾಜಕಾರಣ, ದ್ವೇಷ ಭಾಷಣ ಮಾಡಲಾಗುತ್ತಿದೆ. ನಾವು ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ದೃಢಸಂಕಲ್ಪ ಮಾಡಿ ಪ್ರಾಮಾಣಿಕ ಹೋರಾಟ ಮಾಡುವ ಸ್ಥಿತಿ ಎದುರಾಗಿದೆ ಎಂದರು.

ಸಮಾಜದಲ್ಲಿ ಎಲ್ಲರೂ ಸಾಮರಸ್ಯದಿಂದ ಬದುಕಬೇಕು. ಕೆಟ್ಟ ವಾತಾವರಣ ಸೃಷ್ಟಿಸಬಾರದು. ಧರ್ಮದ ಆಧಾರದಲ್ಲಿ ಸಮಾಜದ ಶಾಂತಿ ಹಾಳು ಮಾಡಬೇಡಿ. ನಾವೆಲ್ಲರೂ ಭಾರತಾಂಬೆಯ ಮಕ್ಕಳು. ನೆರೆ ರಾಷ್ಟ್ರಗಳಿಗೆ ಹೋಲಿಸಿದರೆ ನಾವು ಉತ್ತಮವಾಗಿ ಸಮಾಜದಲ್ಲಿ ಬದುಕುತ್ತಿದ್ದೇವೆ. ಸಂವಿಧಾನದ ಕುರಿತು ಮಕ್ಕಳಿಗೆ ಆಶುಭಾಷಣ, ಪ್ರಬಂಧ ಸ್ಪರ್ಧೆಗಳು ಆಯೋಜಿಸಬೇಕು. ನಮ್ಮ ಮಕ್ಕಳಿಗೆ ಸಂವಿಧಾನದ ಮಹತ್ವ ತಿಳಿಸಬೇಕು. ಪ್ರಜಾಪ್ರಭುತ್ವ ಉಳಿಸಿಕೊಳ್ಳವ ನಿಟ್ಟಿನಲ್ಲಿ ನಾವೆಲ್ಲರೂ ಮುಂದೆ ಸಾಗೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶ್ರೀನಿವಾಸ್, ಮುಖಂಡರಾದ ವೆಂಕಟಗಿಯರಿಯ್ಯ, ಸಂದೇಶ್ ಸೇರಿದಂತೆ ಇನ್ನಿತರರಿದ್ದರು.

ಸೈಕಲ್ ಜಾಥಾ: ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಪ್ರಜಾಪ್ರಭುತ್ವ ಮಹತ್ವದ ಕುರಿತು ಅರಿವು ಮೂಡಿಸಲು ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸೈಕಲ್ ಜಾಥಾ ಆಯೋಜಿಸಲಾಗಿತ್ತು. ಜಾಥಾದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು. ಶಾಸಕ ರಮೇಶ್ ಬಂಡಿಸಿದ್ದೇಗೌಡ ಸೈಕಲ್ ಜಾಥಾಕ್ಕೆ ಹಸಿರು ಬಾವುಟ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ




ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಗುದ್ದಲಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಸೆ.15– ತಾಲೂಕಿನ ಹಲವು ಗ್ರಾಮಗಳಲ್ಲಿ ತೀರಾ ಹದಗೆಟ್ಟ ರಸ್ತೆಗಳ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುತ್ತೇನೆ. ಗ್ರಾಮಸ್ಥರು ಗುಣಮಟ್ಟದ ಕಾಮಗಾರಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ವಡ್ಡರಹಳ್ಳಿ, ಕರೋಟಿ, ಕೋಮ್ಮೆನಹಳ್ಳಿ, ಅರೆಬೊಪ್ಪನಹಳ್ಳಿ, ಮಲ್ಕೋನಹಳ್ಳಿ ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ವಡ್ಡರಹಳ್ಳಿ ಕ್ರಾಸ್‌ನಲ್ಲಿ ಲೋಕೋಪಯೋಗಿ ಇಲಾಖೆಯ 1.20 ಕೋಟಿ ರೂ. ವೆಚ್ಚದ ಹರಿಹರಪುರ –ಕೃಷ್ಣಾಪುರ ಸಂಪರ್ಕಿಸುವ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರಾದ್ಯಂತ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ್ದೇನೆ. ಸಾರ್ವಜನಿಕರು ಅಭಿವೃದ್ಧಿ ಕೆಲಸಗಳಿಗೆ ಮುಕ್ತ ಮನಸ್ಸಿನಿಂದ ಸಹಕಾರ ನೀಡಿದರೆ ಮಾತ್ರ ಅಭಿವೃದ್ಧಿ ಕೆಲಸಗಳು ನಡೆಯಲು ಸಾಧ್ಯ. ಗ್ರಾಮೀಣ ಭಾಗದಲ್ಲಿ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿ ಭೂಮಿ ಪೂಜೆ ನೆರವೇರಿಸುತ್ತಿದ್ದೇನೆ. ಎಲ್ಲಾ ಗ್ರಾಮಗಳಿಗೂ ಅನುದಾನ ನೀಡುವ ಮೂಲಕ ತಾಲೂಕಿನ ಜನತೆ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇದಕ್ಕೆ ಗ್ರಾಮಸ್ಥರ ಸಹಕಾರ ಬಹಳ ಮುಖ್ಯ. ಕಾಮಗಾರಿ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಹಾಗಾಗಿ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ಪ್ರತಿಯೊಂದು ಕಾಮಗಾರಿ ಪ್ರಗತಿಯನ್ನು ಖುದ್ದಾಗಿ ಪರೀಕ್ಷಿಸಿ ಬಿಲ್ಲುಗಳ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗುವುದು ಎಂದರು.

ಈ ವೇಳೆ ಲೋಕೋಪಯೋಗಿ ಇಲಾಖೆ ಎಇಇ ಬೋರಯ್ಯ, ಸಹಾಯಕ ಇಂಜಿನಿಯರ್ ಬಸವೇಗೌಡ, ಗೌತಮಿ, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹದೇವೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಮಂಜೇಗೌಡ, ಪಿಡಿಓ ಶೈಲಜಾ, ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್, ಪಿಡಿಓ ಶಿಲ್ಪ, ತಾಲೂಕು ಜೆಡಿಎಸ್ ವಕ್ತಾರ ಅಲೋಕ್, ಗ್ರಾಪಂ ಸದಸ್ಯರಾದ ಮಂಜೇಗೌಡ, ಎಂ.ಟಿ.ಮಂಜೇಗೌಡ, ಸುನಿಲ್ ಸಣ್ಣಯ್ಯ, ಅನಿಲ್, ಜಗದೀಶ್, ಮುಖಂಡರಾದ ಪಟೇಲ್ ತಮ್ಮೇಗೌಡ, ಶಿವರಾಮೇಗೌಡ, ಅಣ್ಣೇಗೌಡ, ರಾಮಚಂದ್ರೇಗೌಡ, ದೇವಾಜೇಗೌಡ, ವಾಸುದೇವ್, ರಾಮೇಗೌಡ, ಯೋಗೇಶ್, ಹರೀಶ್, ನಾಗೇಶ್, ಸುಕಂದರಾಜು, ವಿಜಯ್‌ಕುಮಾರ್, ರೋಬೊ ಮಂಜೇಗೌಡ, ಯುವ ಮುಖಂಡ ಅನಿಲ್, ಚಲುವರಾಜು, ಮಧು, ರಾಹುಲ್, ಶಾಸಕರ ಆಪ್ತ ಸಹಾಯಕ ಪ್ರತಾಪ್ ಸೇರಿದಂತೆ ಗ್ರಾಮಸ್ಥರಿದ್ದರು.

ಕನ್ನಡ ಹಬ್ಬ: ಕವಿಗೋಷ್ಠಿಗೆ ಕವನಗಳು, ವಿವಿಧ ಪ್ರಶಸ್ತಿಗಳಿಗೆ ಆಹ್ವಾನ



ಎಸ್.ಕೃಷ್ಣ ಸ್ವರ್ಣಸಂದ್ರ

ಮಂಡ್ಯ, ಸೆ.15– ಡಾ.ಜೀಶಂಪ ಸಾಹಿತ್ಯ ವೇದಿಕೆ ಹಾಗೂ ಭಾರ್ಗವಿಸ್ ಸ್ಲೇಟು–ಬಳಪ ಫೌಂಡೇಷನ್ ಬೆಂಗಳೂರು ವತಿಯಿಂದ ಕನ್ನಡ ರಾಜ್ಯೋತ್ಸವ, ಕನ್ನಡ ಹಬ್ಬ ಅಂಗವಾಗಿ 14ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನವನ್ನು ನ.2ರಂದು ನಗರದ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದು, ಆಸಕ್ತ ಕವಿಗಳಿಂದ ಕವಿಗೋಷ್ಠಿಗೆ ಕವನಗಳು ಹಾಗೂ ವಿವಿಧ ಸಾಧಕರಿಂದ ಪ್ರಶಸ್ತಿಗೆ ಹೆಸರನ್ನು ಆಹ್ವಾನಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ ತಿಳಿಸಿದ್ದಾರೆ.

ಆಸಕ್ತರು 20 ಸಾಲಿನ 2 ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಸೆ.30 ರೊಳಗೆ ಕಳುಹಿಸಬೇಕು. ವಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯ ಒಳಗೊಂಡಿರಬಹುದು. ಆಯ್ಕೆಯಾದ 50 ಕವಿಗಳಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. 20 ಉತ್ತಮ ಕವನಗಳಿಗೆ 'ಕಾವ್ಯಶ್ರೀ', 20 ಮಂದಿ ಸಾಧಕರಿಗೆ 'ಕನ್ನಡರತ್ನ', ಜೀವಮಾನ ಸಾಧನೆಗಾಗಿ 10 ಮಂದಿಗೆ 'ಕರ್ನಾಟಕ ಸೇವಾರತ್ನ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಅತ್ಯುತ್ತಮ ಸಾಹಿತ್ಯ ಸೇವೆ ಮಾಡಿದ ಸಾಧಕರನ್ನು 15ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು ಎಂದರು.

ಕವನಗಳನ್ನು ವಿಳಾಸ: ಎಸ್.ಕೃಷ್ಣ ಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ಹೆಚ್ಚಿನ ವಿವರ ಹಾಗೂ ವಾಟ್ಸಪ್ ನಂ.9448424380ಗೆ ಕಳುಹಿಸಬೇಕಾಗಿ ತಿಳಿಸಿದ್ದಾರೆ.

ಕಾಟಾಚಾರಕ್ಕೆ ಶ್ರೀರಂಗಪಟ್ಟಣ ದಸರಾ ಪೂರ್ವಭಾವಿ ಸಭೆ

ವಿವಿಧ ಸಂಘಟನೆಗಳ ಪದಾಧಿಕಾರಿಗಳ ಆಕ್ರೋಶ



ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯ ಭಿತ್ತಿಪತ್ರವನ್ನು ಶಾಸಕ ರಮೇಶ್‌ಬಾಬು ಬಿಡುಗಡೆಗೊಳಿಸಿದರು.

ಶ್ರೀರಂಗಪಟ್ಟಣ, ಸೆ.15– ಕಾಟಾಚಾರಕ್ಕೆ ಶ್ರೀರಂಗಪಟ್ಟಣ ದಸರಾ ಪೂರ್ವಭಾವಿ ಸಭೆ ಕರೆಯಲಾಗಿದೆ. ಈ ಬಾರಿಯ ದಸರಾ ಸಾರ್ವಜನಿಕರ ದಸರಾ ಆಗದೆ, ಕೇವಲ ಶಾಸಕರು ಹಾಗೂ ಅಧಿಕಾರಿಗಳ ದಸರಾವಾಗಿದೆ ಎಂದು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ. ಕುಮಾರ್, ಇತರೆ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ದಸರಾ ಪೂರ್ವಭಾವಿ ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ದಸರಾ ಉದ್ಘಾಟಿಸಿದ್ದ ಟಿ.ಎಸ್.ನಾಗಾಭರಣ ಅವರನ್ನೇ ಆಹ್ವಾನಿಸಿದ್ದೀರಿ. ಸ್ಥಳೀಯರ ಸಲಹೆ ಸೂಚನೆ ಪಡೆಯದ ಕಾರಣ ಇಂತಹ ತಪ್ಪು ನಿರ್ಧಾರವಾಗಿದೆ. ಜೊತೆಗೆ ಕಳೆದ ವರ್ಷ ಶ್ರೀನಿಮಿಷಾಂಬ ದೇವಾಲಯದಿಂದ 18 ಲಕ್ಷಕ್ಕೂ ಅಧಿಕ ಹಣ ಪಡೆದಿದ್ದೀರಿ. ಒಂದು ವೇಳೆ ಹೆಚ್ಚಿಗೆ ಹಣ ಬೇಕಾದಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿಸಿಕೊಳ್ಳಬೇಕು. ಪ್ರತಿ ಬಾರಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ದೊಡ್ಡ ದೊಡ್ಡ ಕಲಾವಿದರನ್ನು ಕರೆಯಿಸಿ ದುಪ್ಪಟ್ಟು ಹಣ ನೀಡಿ, ಸ್ಥಳೀಯ ಕಲಾವಿದರನ್ನು ಕಡೆಗಣಿಸುತ್ತಿದ್ದೀರಿ ಎಂದು ರೈತ ಹೋರಾಟಗಾರ ಕಿರಂಗೂರು ಪಾಪು ಆರೋಪಿಸಿದರು.

ಈ ಬಾರಿ ಶ್ರೀರಂಗಪಟ್ಟಣ ದಸರಾದಲ್ಲಿ ಕೇವಲ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರನ್ನು ಮಾತ್ರ ವಲ್ಲದೇ ಶ್ರೀರಂಗನಾಥಸ್ವಾಮಿ ದೇವಾಲಯವನ್ನು ಕಡೆಗಣಿಸಿದ್ದೀರಿ. ಮೈಸೂರು ದಸರಾ ಆಚರಣೆ ವೇಳೆ 15–20 ದಿನಗಳ ಮುಂಚಿತವಾಗಿ ಪಟ್ಟಣ ವನ್ನು ವಿದ್ಯುತ್ ದೀಪಾಲಂಕಾರದಿಂದ ಅಲಂಕಾರ ಮಾಡುತ್ತಾರೆ. ಆದರೆ ರಂಗನಾಥಸ್ವಾಮಿ ದೇವಾಲಯ ಕತ್ತಲಲ್ಲಿದೆ ಎಂದು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ದೇವರಾಜು ಆರೋಪಿಸಿದರು.

ಪ್ರತಿ ಬಾರಿ ಅಧಿಕಾರಿಗಳ ಜೊತೆ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಸಮಿತಿಗೆ ಸೇರಿಸಿಕೊಳ್ಳುತ್ತಿದ್ದೀರಿ. ಆದರೆ ಈ ಬಾರಿ ಕಡೆಗಣಿಸಿದ್ದೀರಿ. ಇದೇ ರೀತಿ ಸಂಘಟನೆಗಳ ಮುಖಂಡರನ್ನು ಕಡೆಗಣಿಸಿ, ಕೇವಲ ಅಧಿಕಾರಿಗಳೇ ಮುಂದಾದರೆ ದಸರಾ ಆಚರಣೆ ವೇಳೆ ಕಪ್ಪು ಬಾವುಟ ಪ್ರದರ್ಶಿಸುವುದಾಗಿ ಕರವೇ ಜಿಲ್ಲಾ ಕಾರ್ಯದರ್ಶಿ ಸ್ವಾಮಿಗೌಡ ಎಚ್ಚರಿಸಿದರು.

ಪ್ರತಿ ಬಾರಿ ಶ್ರೀರಂಗಪಟ್ಟಣ ದಸರಾ ಆಚರಣೆ ಖರ್ಚು ವೆಚ್ಚ ನೀಡುವಂತೆ ಕೇಳುತ್ತಿದ್ದರೂ ನೀಡುತ್ತಿಲ್ಲ. ಕೇವಲ ಕಾಟಾಚಾರಕ್ಕೆ ಅಂತಿಮ ದಿನಗಳಲ್ಲಿ ಪೂರ್ವಭಾವಿ ಸಭೆ ಕರೆಯುತ್ತಿದ್ದೀರಿ. ನಮ್ಮ ಸಲಹೆಗಳು ಈಗ ಕೇಳಿ ಅದನ್ನು ಕಾರ್ಯಗತಕ್ಕೆ ತರಲು ಹೇಗೆ ಸಾಧ್ಯ ಎಂದು ರೈತ ಮುಖಂಡ ನಾಗೇಂದ್ರಸ್ವಾಮಿ ಆರೋಪಿಸಿದರು.

ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ಮಾತನಾಡಿ, ಯಾವುದೇ ಕಾರಣಕ್ಕೂ ಸ್ಥಳೀಯರನ್ನು ಕಡೆಗಣಿಸಿಲ್ಲ. ಬದಲಿಗೆ ಒಂದಿಷ್ಟು ವ್ಯತ್ಯಾಸಗಳಾಗಿವೆ. ಮುಂದಿನ ದಿನಗಳಲ್ಲಿ ಎಲ್ಲವನ್ನೂ ಸರಿಪಡಿಸಿಕೊಳ್ಳಲಾಗುವುದು. ಕಳೆದ ದಸರಾ ಆಚರಣೆಯ ಲೆಕ್ಕ ಪತ್ರ ಕೇಳಿದ್ದೀರಿ. ಆಡಿಟ್ ನಡೆಯುತ್ತಿದ್ದು ಮುಗಿದ ಕೂಡಲೇ ನೀಡುವುದಾಗಿ ಹೇಳಿದರು.

ಶ್ರೀರಂಗಪಟ್ಟಣ ದಸರಾ ಪ್ರಯುಕ್ತ ಸೆ.25 ರಂದು ನಡೆಯುವ ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯ ಭಿತ್ತಿ ಪತ್ರವನ್ನು ಶಾಸಕರು ಹಾಗೂ ಅಧಿಕಾರಿಗಳು ಬಿಡುಗಡೆಗೊಳಿಸಿದರು. ಈ ವೇಳೆ ಎಡಿಸಿ ಶಿವಾನಂದ ಮೂರ್ತಿ, ಸಿಇಒ ನಂದಿನಿ, ಡಿವೈಎಸ್‌ಪಿ ಶಾಂತಮಲ್ಲಪ್ಪ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಮುಖಂಡರು ಸೇರಿದಂತೆ ಸಾರ್ವಜನಿಕರು ಇದ್ದರು.

ಒಂದನೇ ಪುಟದಿಂದ

ಬನ್ನಿಮಂಟಪ ತಲುಪಿದ ಕ್ಯಾಪ್ಟನ್ ಅಭಿಮನ್ಯು



ನಾಡಹಬ್ಬ ದಸರಾದಲ್ಲಿ ಪಾಲ್ಗೊಳ್ಳುವ 14 ಆನೆಗಳಿಗೆ ಲೈನ್ ಹಾಗೂ ಭಾರ ಹೊರುವ ತಾಲೀಮಿನ ನಂತರ ಇಂದು ಅಂತಿಮ ಹಂತವಾಗಿ ಭಾರದ ಜೊತೆಗೆ ಮರದ ಅಂಬಾರಿ ಹೊರುವ ತಾಲೀಮು ಆರಂಭಿಸಲಾಗಿದೆ. ಅಭಿಮನ್ಯುವಿನಿಂದ ಪ್ರಾರಂಭವಾಗಿದ್ದು, ಸುಮಾರು ಐದು ಆನೆಗಳಿಗೆ ಈ ತಾಲೀಮು ನಡೆಸಲಾಗುವುದು. ಹೊಸ ಆನೆಗಳೂ ತುಂಬಾ ಚೆನ್ನಾಗಿ ಒಗ್ಗಿಕೊಂಡಿವೆ. ಉತ್ತಮ ರೀತಿಯಲ್ಲಿ ಸ್ಪಂದನೆ ನೀಡುತ್ತಿದ್ದು, ಎಲ್ಲಾ ತಾಲೀಮುಗಳನ್ನು ಅಚ್ಚುಕಟ್ಟಾಗಿ ನಡೆಸಿವೆ. ಮಾವುತನ ಆಜ್ಞೆಗಳನ್ನೂ ಚಾಚುತಪ್ಪದೆ ಪಾಲನೆ ಮಾಡುತ್ತಿವೆ. ಎಲ್ಲಾ ಆನೆಗಳೂ ಆರೋಗ್ಯವಾಗಿವೆ.
-ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಆಗಮಿಸಿದ್ದ ಸಾವಿರಾರು ಪ್ರವಾಸಿಗರು ಜಂಬೂಸವಾರಿ ತಾಲೀಮು ಕಣ್ತುಂಬಿಕೊಂಡು ಹರ್ಷಿತರಾದರು. ಅಭಿಮನ್ಯು ನೇತೃತ್ವದ ಗಜಪಡೆ ಉತ್ತರ ದ್ವಾರದ ಮೂಲಕ ಅರಮನೆ ಆವರಣದಿಂದ ಹೊರಬರುತ್ತಿದ್ದಂತೆ ಅಲ್ಲಿ ನೆರೆದಿದ್ದ ನೂರಾರು ಮಂದಿಯ ಸಂತಸಕ್ಕೆ ಪಾರವೇ ಇರಲಿಲ್ಲ. ನೈಜ ಅಂಬಾರಿ ಮೆರವಣಿಗೆಯನ್ನೇ ನೋಡಿದಷ್ಟು ಖುಷಿಯಲ್ಲಿ ತೇಲಿದರಲ್ಲದೆ, ಆ ಅಮೋಘ ದೃಶ್ಯವನ್ನು ತಮ್ಮ ಮೊಬೈಲ್ ಹಾಗೂ ಕ್ಯಾಮರಾಗಳಲ್ಲಿ ಸೆರೆ ಹಿಡಿದರು. ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತ, ಹಳೇ ಆರ್‌ಎಂಸಿ ವೃತ್ತ ಬಂಬೂಬಜಾರ್, ಹೈವೇ ವೃತ್ತದ ಮೂಲಕ ಸಾಗಿ ಬನ್ನಿಮಂಟಪ ತಲುಪಿದ ಗಜಪಡೆಯನ್ನು ನೋಡಲೆಂದೇ ಮಾರ್ಗದುದ್ದಕ್ಕೂ ಜನ ಜಮಾಯಿಸಿದ್ದರು. ಹರ್ಷೋದ್ಗಾರದೊಂದಿಗೆ ಅಭಿಮನ್ಯು ಸೇರಿದಂತೆ ತಮ್ಮ ನೆಚ್ಚಿನ ಆನೆಯ ಹೆಸರು ಕೂಗಿ, ಸಂತಸಪಟ್ಟರು. ಸಂತೋಷಪಡುವುದರ ಜೊತೆಗೆ ಗಜಪಡೆಗೆ ಕೈಮುಗಿಯುವ ಮೂಲಕ ಧನ್ಯತಾ ಭಾವ ವ್ಯಕ್ತಪಡಿಸಿದರು.

ಹೆಚ್ಚುತ್ತಿದೆ 'ಭೀಮ'ನ ಕ್ರೇಜ್: ಗಜಪಡೆಯ 'ಭೀಮ'ನ ಕ್ರೇಜ್ ದಿನೇ ದಿನೆ ಹೆಚ್ಚುತ್ತಿದ್ದು, ಇಂದೂ ಕೂಡ ಅರಮನೆ ಆವರಣ ಸೇರಿದಂತೆ ಮಾರ್ಗದುದ್ದಕ್ಕೂ ಆತನ ಹೆಸರು ಮಾರ್ದನಿಸಿತು. ಸಹಜವಾಗಿ ಆನೆಗಳು ತನ್ನ ಮಾವುತನ ಆಜ್ಞೆಯಂತೆ ವರ್ತಿಸುತ್ತವೆ. ಇದನ್ನು ಭೀಮನೂ ಮೀರುವುದಿಲ್ಲ. ಆದರೆ 'ಭೀಮ' ಎಂದು ಕೂಗಿದರೆ ಮಾತ್ರ ತನ್ನಂತಾನೆ ಸೊಂಡಿಲೆತ್ತಿ ಪ್ರತಿಕ್ರಿಯಿಸುತ್ತಾನೆ ಎಂಬುದು ಹಲವರ ಅಭಿಪ್ರಾಯ. ಆದರಿಂದು ಮರದ ಅಂಬಾರಿ ಕಟ್ಟಿದ ನಂತರ ಅರಮನೆ ಮುಂಭಾಗಕ್ಕೆ ಬರುವಾಗ ನೆರೆದಿದ್ದವರು ಎಷ್ಟೇ ಕೂಗಿದರು ಸೊಂಡಿಲೆತ್ತಲಿಲ್ಲ. ಅದೇನೇ ಇರಲಿ ಭೀಮನಿಗೆ ಜೈಕಾರ ಮಾತ್ರ ಜೋರಾಗಿತ್ತು.

ಅಂತಿಮ ಹಂತದ ತಾಲೀಮು: ನಾಡಹಬ್ಬ ದಸರಾ ಮಹೋತ್ಸವದ ಮೆರವಣಿಗಾಗಿ ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ, ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ 14 ಆನೆಗಳಿಗೆ ಮೊದಲನೇ ಹಂತದ ಲೈನ್ ತಾಲೀಮು ಹಾಗೂ ಎರಡನೇ ಹಂತದ ಭಾರ ಹೊರಿಸುವ ತಾಲೀಮು ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಇಂದಿನಿಂದ ಅಂತಿಮ ಹಂತದ 'ಮರದ ಅಂಬಾರಿ' ಹೊರಿಸುವ ತಾಲೀಮು ಆರಂಭಿಸಲಾಗಿದೆ. ಮೊದಲ ದಿನ ಅಭಿಮನ್ಯು ತಾಲೀಮು ಯಶಸ್ವಿಯಾಗಿದ್ದು, ಮಹೇಂದ್ರ, ಭೀಮ ಇನ್ನಿತರ ನಾಲ್ಕೈದು ಆನೆಗಳಿಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲು ಅರಣ್ಯ ಇಲಾಖೆ ತಯಾರಿ ಮಾಡಿಕೊಂಡಿದೆ.

ಸಾಂಪ್ರದಾಯಿಕ ಚಾಲನೆ: ಜಂಬೂ ಸವಾರಿ ದಿನದಂದು ಚಿನ್ನದ ಅಂಬಾರಿ ಮೆರವಣಿಗೆ ನಡೆಸುವ ಮಾದರಿಯಲ್ಲೇ ಎಲ್ಲಾ ವಿಧಾನಗಳನ್ನೂ ಅನುಸರಿಸಲಾಯಿತು. ಸಂಜೆ 4ಕ್ಕೆ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ 'ಅಭಿಮನ್ಯು' ಬೆನ್ನಿಗೆ ಗಾದಿ ಮತ್ತು ನಮ್ದಾ ಬಿಗಿದು, ರಾಜವಂಶಸ್ಥರು ವಾಸಿಸುವ ನಿವಾಸದ ಬಳಿ ಅಂಬಾರಿ ಕಟ್ಟುವ ಜಾಗಕ್ಕೆ ಎಲ್ಲಾ ಆನೆಗಳನ್ನೂ ಕರೆತರಲಾಯಿತು. ಅರ್ಚಕ ಪ್ರಹ್ಲಾದ್ ರಾವ್ ಅವರು ಮರದ ಅಂಬಾರಿ ಹಾಗೂ ಅಭಿಮನ್ಯು ನೇತೃತ್ವದ ಗಜಪಡೆಗೆ ಸಾಂಪ್ರದಾಯಿಕವಾಗಿ ಪೂಜೆ ನೆರವೇರಿಸಿದರು. ಗಣಪತಿ ಹಾಗೂ ದುರ್ಗಾ ಸ್ತೋತ್ರ ಪಠಣೆಯೊಂದಿಗೆ ಆನೆಗಳ ಹಣೆಗೆ ಗಂಧ, ಅರಿಸಿಣ ಹಚ್ಚಿ, ಗರಿಕೆ, ಬೆಲ್ಲ, ಕಬ್ಬು, ಪಂಚ ಕಜ್ಜಾಯ, ಎಲೆ, ಅಡಿಕೆ ಇಟ್ಟು ಪೂಜೆ ಸಲ್ಲಿಸಿದರು. ನಂತರ ಎಲ್ಲಾ 14 ಆನೆಗಳಿಗೂ ಪಂಚಫಲ, ಕಬ್ಬು–ಬೆಲ್ಲವನ್ನು ತಿನ್ನಿಸಲಾಯಿತು. ಇದೇ ವೇಳೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಅವರು ಮರದ ಅಂಬಾರಿ ಹಾಗೂ ಗಜಪಡೆಗೆ ಪೂಜೆ ಸಲ್ಲಿಸಿ, ಸಂಪ್ರದಾಯದಂತೆ ಬೂದುಗುಂಬಳ ಒಡೆದರು.

ನಂತರ ಸಂಜೆ 5 ಗಂಟೆಗೆ ಅಂಬಾರಿ ಕಟ್ಟುವ ಸ್ಟ್ಯಾಂಡ್ ಬಳಿ ಅಭಿಮನ್ಯುವನ್ನು ಕರೆತಂದು, 280 ಕೆ.ಜಿ. ತೂಕದ ಮರದ ಅಂಬಾರಿಯನ್ನು ಸುಮಾರು 20 ನಿಮಿಷಗಳಲ್ಲಿ ಕಟ್ಟಲಾಯಿತು. ಅಂಬಾರಿ ಜೊತೆಗೆ ನಮ್ದಾ ಗಾದಿ, ಮರಳಿನ ಮೂಟೆ ಸೇರಿ ಸುಮಾರು 750 ಕೆ.ಜಿ.ಯಷ್ಟು ಭಾರ ಹೊತ್ತ ಅಭಿಮನ್ಯು ಕುಮ್ಕಿ ಆನೆಗಳೊಂದಿಗೆ ರಾಜ ವಂಶಸ್ಥರ ನಿವಾಸದತ್ತ ಮುಖಮಾಡಿ ನಿಂತು ಸೊಂಡಿಲೆತ್ತಿ ಗೌರವ ಸೂಚಿಸಿದ ನಂತರ ಅಶ್ವರೋಹಿ ಪಡೆಯಿಂದ ಗೌರವ ವಂದನೆ ಸಲ್ಲಿಸಲಾಯಿತು. ಅರಮನೆ ಮುಂಭಾಗದಿಂದ ಪುಷ್ಪಾರ್ಚನೆ ಮಾಡುವ ವೇದಿಕೆ ಮಾರ್ಗವಾಗಿ ಅರಮನೆ ಆವರಣದಿಂದ ಬನ್ನಿಮಂಟಪದತ್ತ ಮರದ ಅಂಬಾರಿ ಮೆರವಣಿಗೆ ಸಾಗಿತು.

ಕುರುಬ ಸಮುದಾಯ ಎಸ್‌ಟಿಗೆ ಸೇರ್ಪಡೆ ಸಿದ್ಧತೆ

ವಿಶೇಷ ಸಭೆಗೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸಭಾ ಸೂಚನಾ ಪತ್ರ ಹೊರಡಿಸಿದ್ದಾರೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಾಳೆ ಮಧ್ಯಾಹ್ನ 3 ಗಂಟೆಗೆ ಬಹುಮಹಡಿಗಳ ಕಟ್ಟಡದ 3ನೇ ಮಹಡಿಯ ಕೊಠಡಿ ಸಂಖ್ಯೆ 331ರಲ್ಲಿ ಸಭೆ ನಡೆಯಲಿದೆ. ಸಭೆಗೆ ಅಗತ್ಯ ಮಾಹಿತಿ ಅಥವಾ ದಾಖಲೆಗಳೊಂದಿಗೆ ಹಾಜರಾಗುವಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ನಿರ್ದೇಶಕರು, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕರು, ಎಸ್‌ಸಿಎಸ್‌ಪಿ/ಟಿಎಸ್‌ಪಿ ನೋಡಲ್ ಏಜೆನ್ಸಿ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಲು 2023ರಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಿತ್ತು, ಮೈಸೂರು, ಚಾಮರಾಜನಗರ ಜಿಲ್ಲೆಯ ಕೆಲವು ಭಾಗಗಳಲ್ಲಿ ವಾಸಿಸುತ್ತಿರುವ ಕಾಡು ಕುರುಬರು, ಜೇನು ಕುರುಬರು ಎಸ್‌ಟಿ ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ. ಉಳಿದ ಕುರುಬ ಸಮುದಾಯ ಪ್ರಸ್ತುತ ರಾಜ್ಯದ 2 'ಎ' ಪಟ್ಟಿಯಲ್ಲಿದ್ದು, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂದು ಶಿಫಾರಸು ಮಾಡಲಾಗಿತ್ತು.

ಪ್ರತಾಪ್ ಸಿಂಹ ಮೂರ್ಖರಲ್ಲವೇ!

ವ್ಯವಸ್ಥೆಯಲ್ಲಿ ಇದ್ದೇವೆ. ಸಂವಿಧಾನ ಸಮಾನತೆ ಎಂದು ಹೇಳುತ್ತದೆ. ಅಂಬೇಡ್ಕರ್ ಇದನ್ನೇ ಹೇಳುತ್ತಾರೆ. ಮಾಜಿ ಲೋಕಸಭೆ ಸದಸ್ಯನಿಗೆ ಸಂವಿಧಾನ ಗೊತ್ತಿಲ್ಲ ಅಂದರೆ ಏನು ಹೇಳಬೇಕು ಅವನನ್ನು, ಮೂರ್ಖ ಅಂತ ಕರೆಯಬೇಕು. ಇಂತಹ ಮೂರ್ಖರು ನಮ್ಮ ದೇಶದಲ್ಲಿ ಇದ್ದಾರೆ. ಇಂತಹ ಮೂರ್ಖರ ಬಗ್ಗೆ ಮಾತನಾಡುವುದು ಬೇಡ ರಾಜಕೀಯ ಬೇರೆ ವಿಷಯದಲ್ಲಿ ಮಾಡಲಿ. ಇಂತಹ ವಿಷಯದಲ್ಲಿ ರಾಜಕೀಯ ಮಾಡಬಾರದು. ಜನರನ್ನು ತಪ್ಪು ದಾರಿಗೆ ಎಳೆಯುವುದು ಖಂಡನೀಯ. ಇತ್ತೀಚಿನ ದಿನಗಳಲ್ಲಿ ಅದು ಜಾಸ್ತಿ ಆಗುತ್ತಿರುವುದು ನೋವಿನ ಸಂಗತಿ, ಇದು ಆಗಬಾರದು ಎಂದು ಪ್ರತಾಪ್ ಸಿಂಹ ವಿರುದ್ಧ ವಾಗ್ದಾಳಿ ನಡೆಸಿದರಲ್ಲದೇ, ಇಂತಹ ಪಟ್ಟಭದ್ರ ಹಿತಾಸಕ್ತಿಗಳನ್ನು ಸಮಾಜ ಖಂಡಿಸಬೇಕು ಎಂದು ಕಿಡಿಕಾರಿದರು.

ಇಂದು 'ಸಿಂಹಾಸನ' ಜೋಡಣೆ

ಸಿಸಿ ಕ್ಯಾಮರಾಗೆ ಪರದೆ ಬಿಡುವಂತೆ ಸೂಚಿಸಲಾಗಿದೆ. ಕೆಲವೇ ಸಿಬ್ಬಂದಿಗಳನ್ನು ಮಾತ್ರ ಸಿಂಹಾಸನ ಮತ್ತು ಭದ್ರಾಸನ ಜೋಡಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಸಿಂಹಾಸನ ಜೋಡಣಾ ಕಾರ್ಯದ ನಿಮಿತ್ತ ಬೆಳಗ್ಗೆಯೇ ದರ್ಬಾರ್ ಹಾಲ್ ನಲ್ಲಿ ಗಣಪತಿ, ಚಾಮುಂಡಿ ಪೂಜೆ, ಕೆಲ ಹೋಮ ಮಾಡಲಾಗುತ್ತದೆ. ಆ ಬಳಿಕವಷ್ಟೇ ಸ್ಟ್ರಾಂಗ್ ರೂಮ್ ತೆರೆದು ಸಿಂಹಾಸನದ ಬಿಡಿಭಾಗವನ್ನು ದರ್ಬಾರ್ ಹಾಲ್‌ಗೆ ತಂದು ಜೋಡಣೆ ಮಾಡಲಾಗುತ್ತದೆ. ನಂತರ ಸಿಂಹಾಸನಕ್ಕೆ ಪರದೆ ಬಿಡಲಾಗುತ್ತದೆ.

ಮಧ್ಯಾಹ್ನ 1 ಗಂಟೆ ನಂತರ ಪ್ರವೇಶ: ಸಿಂಹಾಸನ ಜೋಡಣಾ ಕಾರ್ಯ ಪೂರ್ಣಗೊಂಡ ಬಳಿಕ ಮಧ್ಯಾಹ್ನ 1 ಗಂಟೆ ನಂತರ ಅರಮನೆ ವೀಕ್ಷಣೆಗೆ ಪ್ರವಾಸಿಗರಿಗೆ ಪ್ರವೇಶ ನೀಡಲಾಗುತ್ತದೆ. ಅಲ್ಲಿಯವರೆಗೂ ಪ್ರವಾಸಿಗರು ಹಾಗೂ ಸಾರ್ವಜನಿಕರು ಅರಮನೆ ಪ್ರವೇಶ ನಿರ್ಬಂಧಿಸಲಾಗಿದ್ದು, ಈ ಸಂಬಂಧ ಅರಮನೆಯ ಎಲ್ಲಾ ದ್ವಾರಗಳಲ್ಲೂ ಬ್ಯಾನರ್ ಹಾಕಿ ಮಾಹಿತಿ ನೀಡಲಾಗಿದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳೆಲ್ಲಾ ವಜಾ

ಮುಖ್ಯನ್ಯಾಯಮೂರ್ತಿ ವಿಭು ಬಕ್ರು ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಶಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿ ತೀರ್ಪು ನೀಡಿದೆ. ನ್ಯಾಯಪೀಠ ತನ್ನ ತೀರ್ಪಿನಲ್ಲಿ, ರಾಜ್ಯ ಸರ್ಕಾರ ಆಯೋಜಿಸುವ ಕಾರ್ಯಕ್ರಮದಲ್ಲಿ ಭಿನ್ನ ಧರ್ಮದ ವ್ಯಕ್ತಿ ಭಾಗಿಯಾಗುವುದು ಅರ್ಜಿದಾರರ ಯಾವುದೇ ಕಾನೂನು ಅಥವಾ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ ಹೇಗಾಗುತ್ತದೆ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೌಲ್ಯಗಳಿಗೆ ವಿರುದ್ಧ ಹೇಗಾಗುತ್ತದೆ ಎಂಬುದನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುವುದರಿಂದ ಅರ್ಜಿಗಳನ್ನು ವಜಾಗೊಳಿಸಿದ್ದು, ತೀರ್ಪಿನ ಪೂರ್ಣ ಆದೇಶ ವನ್ನು ನಂತರ ಪ್ರಕಟಿಸಲಾಗುವುದು ಎಂದಿದೆ.

ಶಿಷ್ಟಾಚಾರ ಪಾಲಿಸಲಾಗಿಲ್ಲ: ಪ್ರತಾಪ್ ಸಿಂಹ ಪರ ವಕೀಲ ಎಸ್.ಸುದರ್ಶನ್ ವಾದ ಮಂಡಿಸಿ, ಬಾನು ಮುಷ್ತಾಕ್ ಹಿಂದೂ ಸಂಪ್ರದಾಯ ಮತ್ತು ಕನ್ನಡ ವಿರೋಧಿ ಹೇಳಿಕೆ ನೀಡಿದ್ದು, ದಸರಾ ಉದ್ಘಾಟನೆಗೆ ಆಯ್ಕೆಯಾದವರು ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡುವುದು ಶಿಷ್ಟಾಚಾರ, ಇದನ್ನು ಪಾಲಿಸಲಾಗಿಲ್ಲ. ಬಾನು ಮುಷ್ತಾಕ್ ಅವರಿಗೆ ಅರಿಶಿಣ–ಕುಂಕುಮದ ಮೇಲೆ ನಂಬಿಕೆ ಇಲ್ಲ, ದಸರಾ ಹಿಂದೂ ಹಬ್ಬವಾಗಿದ್ದು, ಜಾತ್ಯತೀತ ಹಬ್ಬವಲ್ಲ ಎಂದರು.

ಇದನ್ನು ಪ್ರಶ್ನಿಸಿದ ಪೀಠ, ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಲು ನಿಮಗಿರುವ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಹಕ್ಕು ತಿಳಿಸಿ, ಶಿಷ್ಟಾಚಾರ ಪಾಲನೆ ಅವರಿಗೆ ಸೇರಿದ ವಿಚಾರ ಎಂದಿತು.

ಹಿಂದೂ ದೇವರ ಶಾಸ್ತ್ರ ಪ್ರಕಾರ ಪೂಜಿಸಬೇಕು: ಇನ್ನೊಬ್ಬ ಅರ್ಜಿದಾರರ ಪರ ವಕೀಲ ರಂಗನಾಥ್ ರೆಡ್ಡಿ ವಾದ ಮಂಡಿಸಿ, ಹಿಂದೂ ದೇವರ ಪೂಜೆಯನ್ನು ಆಗಮ ಶಾಸ್ತ್ರದಿಂದ ಪ್ರತ್ಯೇಕಿಸಲಾಗದು, ಹಿಂದೂಯೇತರ ವ್ಯಕ್ತಿ ದಸರಾ ಉದ್ಘಾಟಿಸಬಹುದೇ ಎಂಬ ಪ್ರಶ್ನೆ ಇಲ್ಲಿದೆ, ಹಿಂದೂ ದೇವರ ಮೇಲೆ ನಂಬಿಕೆ ಇದೆ ಎಂಬುದಾಗಿ ಬಾನು ಮುಷ್ತಾಕ್ ಸ್ಪಷ್ಟಪಡಿಸಿದರೆ ಯಾವುದೇ ಆಕ್ಷೇಪವಿಲ್ಲ ಎಂದರು. ಸರ್ಕಾರದ ಪರ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಅರ್ಜಿದಾರ ಪ್ರತಾಪ್ ಸಿಂಹ ಸಂಸದರಾಗಿದ್ದಾಗ ನಿಸಾರ್ ಅಹ್ಮದ್ ದಸರಾ ಉದ್ಘಾಟಿಸಿದ್ದರು, ಈ ವಿಚಾರವನ್ನು ಅವರು ಬಹಿರಂಗಪಡಿಸಿಲ್ಲ, ಆದ್ದರಿಂದ ಅರ್ಜಿದಾರರಿಗೆ ದಂಡ ವಿಧಿಸಬೇಕು.


ಲೇಖಕ ನಿಸಾರ್ ಅಹ್ಮದ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿದಾಗ ಪ್ರತಾಪ್ ಸಿಂಹ ಆಕ್ಷೇಪಿಸಲಿಲ್ಲ, ಇದು ನಾಡಹಬ್ಬ, ಸರ್ಕಾರದ ನಿರ್ಧಾರ ಸಂವಿಧಾನ 15ನೇ ವಿಧಿಗೆ ಪೂರಕವಾಗಿದೆ.

ಎಲ್ಲಾ ಪಕ್ಷಗಳ ಮುಖಂಡರ ದಸರಾ ಸಮಿತಿ ಸಭೆ, ಅತಿಥಿ ಆಯ್ಕೆಯನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಟ್ಟಿತ್ತು, ಬಾನು ಮುಷ್ತಾಕ್ ಅವರನ್ನು ಮುಖ್ಯಮಂತ್ರಿಯೇ ಆಯ್ಕೆ ಮಾಡಿದ್ದಾರೆ. ಹಿಂದೂ–ಮುಸ್ಲಿಮ್ ಕಂದಕ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮವಾಗಬೇಕು, ಇದನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು, ದಸರಾ ಜಾತ್ಯತೀತ ಹಬ್ಬ, ಆದರೆ, ಧಾರ್ಮಿಕ ಕಾರ್ಯಕ್ರಮವಾಗಿ ಬಿಂಬಿಸಲಾಗುತ್ತಿದೆ ಎಂದರು.

ಇದಕ್ಕೆ ಪ್ರತಾಪ್ ಸಿಂಹ ಪರ ವಕೀಲ ಸುದರ್ಶನ್ ಆಕ್ಷೇಪಿಸಿ, ನಿಸಾರ್ ಅಹ್ಮದ್ ಮುಸ್ಲಿಮ್ ಆಗಿದ್ದರೂ ಕನ್ನಡ ಮಾತೆ ಬಗ್ಗೆ ಪದ್ಯ ಬರೆದಿದ್ದಾರೆ, ಅವರು ಕನ್ನಡ ವಿರೋಧಿ ಹೇಳಿಕೆ ನೀಡಿರಲಿಲ್ಲ ಎಂದರು. ಇದಕ್ಕೆ ನ್ಯಾಯಪೀಠ, ವಿಜಯ ದಶಮಿ ಆಚರಣೆ ಕೆಟ್ಟದರ ವಿರುದ್ಧ ಒಳ್ಳೆಯದರ ವಿಜಯ ಎಂಬುದಾಗಿದೆ, ಹಬ್ಬವನ್ನು ದೇಶಾದ್ಯಂತ ಆಚರಿಸಲಾಗುತ್ತದೆ, ಆದೇಶ ನೀಡಿಯಾಗಿದೆ, ನ್ಯಾಯಾಲಯದಲ್ಲಿ ನೀವು ಹೀಗೆಲ್ಲಾ ಮಾಡಲಾಗದು, ದುಂಡ ವಿಧಿಸಬೇಕೆ ಎಂದು ವಕೀಲರನ್ನು ಎಚ್ಚರಿಸಿತು.

ಮುಡಾದ 14 ಸೈಟ್ ನುಂಗಿದ್ದವರು ನನಗೇನು ಹೇಳುವುದು ಬೇಡ...!

ಸಿಎಂ ಸಿದ್ದರಾಮಯ್ಯಗೆ ಮಾಜಿ ಸಂಸದ ಪ್ರತಾಪ್ ಸಿಂಹ ಎದಿರೇಟು



ಬೆಂಗಳೂರು, ಸೆ.15– 14 ಸೈಟ್ ನುಂಗಿದ ನೀವು ನನಗೆ ಹೇಳಲು ಬರುವುದು ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ತಿರುಗೇಟು ನೀಡಿದ್ದಾರೆ.

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಮಾಡಬಾರದು ಎಂದು ಹೇಳಿದ ಪ್ರತಾಪ್ ಸಿಂಹ ಮೂರ್ಖ ಎಂಬ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಸರ್ ಏನು ಬೇಕಾದರೂ ನನ್ನ ಕರೆಯಲಿ. ಅವರಿಗೂ ಸೋಷಿಯಲ್ ಮೀಡಿಯಾದಲ್ಲಿ ಏನೇನು ಕರೆಯುತ್ತಾರೆ ಎನ್ನುವುದನ್ನು ಮೊದಲು ನೋಡಲಿ. ಅದನ್ನು ನೋಡಿದರೆ ಅವರು ಮುಖ ಮುಚ್ಚಿಕೊಂಡು ಓಡಾಡಬೇಕಾಗುತ್ತದೆ ಎಂದು ಹೇಳಿದರು.

ಹೈಕೋರ್ಟ್‌ನಲ್ಲಿ ತನ್ನ ಅರ್ಜಿ ವಜಾಗೊಂಡಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ನಾನು ನ್ಯಾಯ ಸಿಗುವ ಸಣ್ಣ ಭರವಸೆಯಿಂದ ಹೈಕೋರ್ಟ್‌ಗೆ ಪಿಐಎಲ್ ಹಾಕಿದ್ದೆ. ಹೈಕೋರ್ಟ್ ಬಾನು ಮುಷ್ತಾಕ್ ಅವರಿಗೆ ವಾಕ್ ಸ್ವಾತಂತ್ರ್ಯದ ಹಕ್ಕಿದೆ ಎಂಬ ಸಣ್ಣ ಕಾರಣ ನೀಡಿ ನನ್ನ ಪಿಐಎಲ್ ವಜಾ ಮಾಡಿತು. ಬಾನು ಮುಷ್ತಾಕ್ ಅವರ ಹೇಳಿಕೆಯನ್ನು ಭಾಷಾನುವಾದ ಮಾಡಿ ಕೋರ್ಟ್‌ಗೆ ಸಲ್ಲಿಕೆ ಮಾಡಿದ್ದೆವು. ಇಷ್ಟಾದರೂ ಸೆಕ್ಯುಲರ್ ಅಂತ ಹೇಳಿ ಪಿಐಎಲ್ ವಜಾ ಮಾಡಲಾಯಿತು. ಇಂದಿರಾಗಾಂಧಿ ತಂದ ಸೆಕ್ಯುಲರ್ ಪದದ ಕಾರಣ ಇಟ್ಟುಕೊಂಡು ನನ್ನ ಪಿಐಎಲ್ ವಜಾ ಮಾಡಲಾಯಿತು ಎಂದು ಬೇಸರ ಹೊರಹಾಕಿದರು.

ಅದೇ ವಾಕ್ ಸ್ವಾತಂತ್ರ್ಯ ಬಳಸಿಕೊಂಡು ನಾನು ಮಾತನಾಡುತ್ತಿದ್ದೇನೆ ಅಷ್ಟೇ ಎಂದ ಅವರು, ಅಶೋಕ ಚಕ್ರದ ಕೆಳಗೆ 'ಸತ್ಯಮೇವ ಜಯತೇ' ಎಂದು ಬರೆಯಲಾಗಿದೆ. ನಾಳೆ ಬೆಳಗ್ಗೆ ಆ ಸತ್ಯಮೇವ ಜಯತೇಗೆ ಅವಮಾನ ಮಾಡುವುದು ಸರಿ ಅಂತೀರಾ. ಸತ್ಯಂ ಶಿವಂ ಸುಂದರಂ ಹೇಳಿಕೆಯನ್ನೂ ವಾಕ್ ಸ್ವಾತಂತ್ರ್ಯ, ಸೆಕ್ಯುಲರ್ ಕಾರಣಕ್ಕೆ ತೆಗೀತೀರಾ. ಭಾರತದ ಮೂಲ ಸಂಸ್ಕೃತಿಗೆ ಧಕ್ಕೆ ಬರುವಂತಹ ಹೇಳಿಕೆ ಸೆಕ್ಯುಲರ್, ವಾಕ್ ಸ್ವಾತಂತ್ರ್ಯ ಹಕ್ಕಿನಡಿ ಇದೆ ಅಂದರೆ ನಾನೇನೂ ಹೇಳಲು ಆಗಲ್ಲ. ಬಾನು ಮುಷ್ತಾಕ್ ಭುವನೇಶ್ವರಿ ಬಗ್ಗೆ, ಅರಿಶಿನ ಕುಂಕುಮ ಹೇಳಿಕೆ ಬಗ್ಗೆ ಕನಿಷ್ಟ ಕ್ಷಮೆ ಕೋರಿಲ್ಲ. ಅದಕ್ಕಾಗಿ ನಾನು ಕೋರ್ಟ್‌ಗೆ ಹೋದೆ. ಸೆಕ್ಯುಲರ್ ಚೌಕಟ್ಟಿಗೆ ಅದನ್ನು ತಂದು ಕೋರ್ಟ್ ಅರ್ಜಿ ವಜಾ ಮಾಡಿದೆ.ಭಾರತದ ಮೂಲ ಸಂಸ್ಕೃತಿಗೆ ಇದೇ ರೀತಿ ಅಪಮಾನ, ಧಕ್ಕೆ ಆಗುವುದನ್ನೂ ಹೀಗೇ ಸಹಿಸಿಕೊಳ್ಳುತ್ತೀರಾ? ದಾರ್ಷ್ಟ್ಯ, ದ್ವೇಷದಿಂದ ಈ ರೀತಿ ಹೇಳಿಕೆಗಳನ್ನು ಕೊಡುವುದಾದರೆ ಪರಿಸ್ಥಿತಿ ಏನಾಗಬೇಕು? ಸೆಕ್ಯುಲರ್ ಪರಿಧಿಯಲ್ಲಿ ನೋಡುವುದು ಎಷ್ಟು ಸರಿ. ಮೊನ್ನೆ ಹಜ್‌ರತ್ ಅಲಿ ದರ್ಗಾದಲ್ಲಿ ಅಶೋಕ ಚಕ್ರ ಇದೆ ಎಂದು ಕಲ್ಲಿಂದ ಕುಟಿದರು. ಅದು ಅಭಿವ್ಯಕ್ತಿ ಸ್ವಾತಂತ್ರ್ಯದಡಿ ಬರುತ್ತಾ ಸ್ವಾಮಿ? ಎಂದರು. ಮುಡಾದಲ್ಲಿ 14 ಸೈಟುಗಳನ್ನು ಪಡೆದಿದ್ದು ಹಗಲು ದರೋಡೆ ಆಗಿತ್ತು. ಇಂತಹ ಹಗಲು ದರೋಡೆ ಪ್ರಕರಣವನ್ನು ಹೈಕೋರ್ಟ್‌ನಲ್ಲಿ ವಜಾ ಮಾಡಲಾಯಿತು. ಹಾಗೇ ಧರ್ಮಸ್ಥಳ ಮೇಲೆ ಅಪನಂಬಿಕೆ ಬರುವಂತಹ ವಿಡಿಯೋ ಸಮೀರ್ ಮಾಡಿದ್ದ. ಇಷ್ಟೆಲ್ಲಾ ಕೆಲಸ ಮಾಡಿದ ಸಮೀರ್‌ಗೆ ಸೆಷನ್ ಕೋರ್ಟ್ ಜಾಮೀನು ನೀಡಿತು. ಮಹೇಶ್ ತಿಮರೋಡಿ ಕೂಡ ಆರಾಮವಾಗಿ ಓಡಾಡಿಕೊಂಡಿದ್ದಾನೆ ಎಂದರು. ನಾನು ಕೋರ್ಟ್‌ನ ವಿಶ್ವಾಸಾರ್ಹತೆಯ ಮೇಲೆ ಪ್ರಶ್ನೆ ಮಾಡುತ್ತಿಲ್ಲ. ನನ್ನ ಪಿಐಎಲ್ ಸೆಕ್ಯುಲರಿಸಂ ಚೌಕಟ್ಟಿನಲ್ಲಿ ವಜಾ ಮಾಡಲಾಗಿದೆ. ಅದೇ ವಾಕ್ ಸ್ವಾತಂತ್ರ್ಯವನ್ನು ಬಳಸಿಕೊಂಡು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ ಅಷ್ಟೇ ಎಂದರು.


ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯೆ: ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಪ್ರತಾಪ್ ಸಿಂಹ ಅವರೊಂದಿಗೆ ಹೊಸ ಪಕ್ಷ ಕಟ್ಟುವ ಸಾಧ್ಯತೆಯನ್ನು ಸೂಚಿಸಿದ್ದ ಕುರಿತು ಪ್ರತಾಪ್ ಸಿಂಹ ಸ್ಪಷ್ಟನೆ ನೀಡಿದರು. ನನ್ನ ತಂದೆ ಜನಸಂಘದ ದೀಪದ ಚಿಹ್ನೆಯಿಂದ ಗೆದ್ದವರು. ಬಿ.ಬಿ.ಶಿವಪ್ಪ ಜತೆ ಇದ್ದವರು ನಮ್ಮ ಕುಟುಂಬದ ನಿಷ್ಠೆ ಸಂಘಕ್ಕೂ, ಬಿಜೆಪಿಗೂ. ನಾನು ಪತ್ರಕರ್ತನಾಗಿ ಪ್ರಾರಂಭಿಸಿ ಈಗ ಬಿಜೆಪಿ ಕಾರ್ಯಕರ್ತನಾಗಿದ್ದೇನೆ. ಯತ್ನಾಳ್ ಜತೆ ಸೇರಿ ಹೊಸ ಪಕ್ಷ ಕಟ್ಟುವ ಯೋಚನೆ ಇಲ್ಲ ಅಧಿಕಾರ ಇರಲಿ ಇಲ್ಲದಿರಲಿ ಪಕ್ಷ ಬಿಟ್ಟು ಹೋಗುವುದಿಲ್ಲ ಯತ್ನಾಳ್ ಅವರಿಗೂ ನಾನು ಈ ಮಾತು ಹೇಳಿದ್ದೇನೆ ಎಂದು ಅವರು ತಿಳಿಸಿದರು.

ಯುವ ಸಂಭ್ರಮದಲ್ಲಿ ನೃತ್ಯ ರಸದೌತಣ ; ನಾಡು-ನುಡಿ ವೈಭವ, ದೇಶಭಕ್ತಿ, ಮಹನೀಯರ ಕೊಡುಗೆ ಅನಾವರಣ





ಮೈಸೂರಿನ ಕರುಣಾಮಯಿ ಫೌಂಡೇಶನ್ ವಿಶೇಷಚೇತನ ಮಕ್ಕಳ ತಂಡವು 'ದುರ್ಗೆ' ಅವತಾರಗಳೊಂದಿಗೆ ಮಹಿಷಾಸುರ ಮರ್ದನದ ಸನ್ನಿವೇಶ ಅನಾವರಣಗೊಳಿಸಿತು. ಬಲಚಿತ್ರದಲ್ಲಿ ಮೈತ್ರಿ ಚಾರಿಟಬಲ್ ಟ್ರಸ್ಟ್‌ನ ವಿಶೇಷಚೇತನ ಮಕ್ಕಳ ನೃತ್ಯ ಪ್ರದರ್ಶನ ಕಾಣಬಹುದು.



ನೃತ್ಯರೂಪಕದಲ್ಲಿ ಸ್ವಾತಂತ್ರ್ಯ ಸೇನಾನಿ ಭಗತ್‌ಸಿಂಗ್ ಸ್ಮರಣೆ

ಮೈಸೂರು,ಸೆ.15(ಪಿಎಂ)- ಅಂಬರ ಚುಂಬಿಸುವಂತಹ ಅಬ್ಬರದ ಸಂಗೀತ-ಗಾನಕ್ಕೆ ಮೂಡಿದ ನೃತ್ಯದ ಹೊನಲು... ನೃತ್ಯದ ಸೊಬಗಿನಲ್ಲಿ ನಾಡು-ನುಡಿಯ ವೈಭವ ಮಾತ್ರವಲ್ಲದೆ, ದೇಶಭಕ್ತಿಯೂ ಮೂಡಿತು. ಜೊತೆಗೆ ಮಹನೀಯರ ಕೊಡುಗೆಗಳೂ ಪ್ರತಿಬಿಂಬಿಸಿದವು.

ಇಂತಹ ನೃತ್ಯ ರಸದೌತಣಕ್ಕೆ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ಸಾಕ್ಷಿಯಾಯಿತು. ದಸರಾ 'ಯುವ ಸಂಭ್ರಮ'ದ 6ನೇ ದಿನವಾದ ಸೋಮವಾರ ಈ ರೀತಿಯ ವರ್ಣರಂಜಿತ ನೃತ್ಯ ಲೋಕ ಯುವ ಸಮೂಹ ಸೇರಿದಂತೆ ನೆರೆದಿದ್ದ ಪ್ರೇಕ್ಷಕರಲ್ಲಿ ಸಂಭ್ರಮದ ನವೋಲ್ಲಾಸ ಮೂಡಿಸಿತು.

ಚಂದನಾ ಅನಂತಕೃಷ್ಣ ಮೋಡಿ: ಜೊತೆಗೆ ಎಕ್ಕ ಸಿನಿಮಾದ ಬ್ಯಾಂಗಲ್ ಬಂಗಾರಿ... ಗೀತೆಗೆ ಕನ್ನಡ ಕಿರುತೆರೆ ನಟಿ ಚಂದನಾ ಅನಂತಕೃಷ್ಣ ವೈಯ್ಯಾರದ ಹೆಜ್ಜೆ ಹಾಕಿ ನೆರೆದಿದ್ದ ಯುವಪಡೆ ಮನಕ್ಕೆ ಲಗ್ಗೆಯಿಟ್ಟರು. ನೀಲಿ ಸೀರೆ ಧರಿಸಿ ನಾಟ್ಯ ಮಯೂರಿಯಂತೆ ಕಂಗೊಳಿಸುತ್ತಿದ್ದ ಈ ಬೆಡಗಿ, ಡ್ಯಾನ್ಸ್ ಮುಗಿಸಿ, ಪ್ರೇಕ್ಷಕರತ್ತ ಫ್ಲೈಯಿಂಗ್ ಕಿಸ್ ಹಾರಿಸಿ ಅಭಿಮಾನ ಮೆರೆದರು.

ಶರವೇಗ ಹಾಗೂ ಸಾಹಸಮಯ ನೃತ್ಯದ ಭಾವಭಂಗಿಯೂ ಅನೇಕ ತಂಡದ ಸಮೂಹ ನೃತ್ಯದಲ್ಲಿ ಮೂಡಿಬಂದು ನೆರೆದಿದ್ದ ಯುವಪಡೆ ರೋಮಾಂಚನಗೊಂಡು ಹುಚ್ಚೆದ್ದು ಕುಣಿಯುವಂತಾಯಿತು. ಜೊತೆಗೆ ವಿಶೇಷಚೇತನ ಮಕ್ಕಳ ಅತ್ಯಾಕರ್ಷಕ ನೃತ್ಯ ಮೋಡಿಗೆ ನೆರೆದವರು ಅಭಿಮಾನದ ಚಪ್ಪಾಳೆ ನೀಡಿ ಸಂಭ್ರಮಿಸಿದರು.

ವಿಶೇಷಚೇತನ ಮಕ್ಕಳ ಆಕರ್ಷಕ ನೃತ್ಯ ಪ್ರದರ್ಶನ...

ವಿಶೇಷಚೇತನ ಮಕ್ಕಳ ತಂಡಗಳು ತಮ್ಮ ವರ್ಣರಂಜಿತ ನೃತ್ಯ ಪ್ರದರ್ಶನ ಮೂಲಕ ಪ್ರೇಕ್ಷಕರನ್ನು ರಂಜಿಸಿ, ಅಭಿಮಾನದ ಚಪ್ಪಾಳೆ ಪಡೆದವು. ಮೈಸೂರಿನ ವಿವೇಕಾನಂದ ವೃತ್ತದಲ್ಲಿರುವ ಮೈತ್ರಿ ಚಾರಿಟಬಲ್ ಟ್ರಸ್ಟ್‌ನ ವಿಶೇಷಚೇತನ ಮಕ್ಕಳ ತಂಡವು ವಿವಿಧ ಹಾಡುಗಳಿಗೆ ನೃತ್ಯ ಪ್ರದರ್ಶನ ಮಾಡಿ ಕನ್ನಡ ನಾಡಿನ ಪರಂಪರೆಯ ವೈಶಿಷ್ಟ್ಯ ಅನಾವರಣಗೊಳಿಸಿತು. ಇದಲ್ಲದೆ, ಮೈಸೂರಿನ ಕರುಣಾಮಯಿ ಫೌಂಡೇಶನ್ ಮಕ್ಕಳ ತಂಡವು 'ದುರ್ಗೆ' ಅವತಾರಗಳನ್ನು ಪ್ರದರ್ಶಿಸಿ, ಮಹಿಷಾಸುರ ಮರ್ದನದ ಸನ್ನಿವೇಶ ಅನಾವರಣಗೊಳಿಸಿತು. ಈ ಎರಡು ತಂಡಗಳ ಅದ್ಭುತ ನೃತ್ಯ ಪ್ರದರ್ಶನಕ್ಕೆ ಪ್ರೇಕ್ಷಕರು ಚಪ್ಪಾಳೆ ನೀಡಿ ಅಭಿಮಾನ ಮೆರೆದರಲ್ಲದೇ, ಹರ್ಷೋದ್ಗಾರ, ಶಿಳ್ಳೆ, ಕೇಕೆ ಮೂಲಕ ಈ ವಿಶೇಷ ಮಕ್ಕಳಲ್ಲಿ ನೃತ್ಯೋಲ್ಲಾಸ ತುಂಬಿದರು.



ನೃತ್ಯದ ಮೂಲಕ ಆಪರೇಷನ್ ಸಿಂಧೂರ್ ರೋಚಕ ದೃಶ್ಯ

ಮೈಸೂರಿನ ಸಾತಗಳ್ಳಿಯ ವಿಶ್ವಭಾರತಿ ಕಾಲೇಜು ತಂಡ 'ಮಲ್ಲ' ಸಿನಿಮಾದ 'ಕುರುನಾಡೇ...' ಗೀತೆ ಸೇರಿದಂತೆ ವಿವಿಧ ಗೀತೆಗಳ ಸಂಯೋಜನೆ ಇರುವ ಹಾಡಿಗೆ ಹೆಜ್ಜೆ ಹಾಕುವ ಮೂಲಕ ದಸರಾ ವೈಭವ ಕಣ್ಮುಂದೆ ತಂದಿತು. ಬಳಿಕ ಮಂಡ್ಯ ಜಿಲ್ಲೆ ಪಾಂಡವಪುರದ ಸರ್ಕಾರಿ ಪದವಿಪೂರ್ವ ಕಾಲೇಜು ತಂಡದಿಂದ 'ಮಹಿಷಾಸುರ ಮರ್ದಿನಿ' ಸನ್ನಿವೇಶವು ನರ್ತನದ ಮೂಲಕ ಮೂಡಿಬಂದಿತು. ದುರ್ಗೆಯರ ವೇಷಧಾರಿಯಾಗಿ ನರ್ತಿಸಿದ ಈ ತಂಡವು ಪ್ರೇಕ್ಷಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿತು.

ಇದಾದ ನಂತರದಲ್ಲಿ ವೇದಿಕೆಯಲ್ಲಿ ಕನ್ನಡದ ಕಂಪು ಸೂಸಿತು. ಬಿಡದಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಂಡವು ಕನ್ನಡ ನಾಡು-ನುಡಿಯನ್ನು ನೃತ್ಯದ ಮೂಲಕ ಅನಾವರಣಗೊಳಿಸಿತು. 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' ಎಂಬಿತ್ಯಾದಿ ಗೀತೆಗಳಿಗೆ ಕುಣಿದು ಕುಪ್ಪಳಿಸಿ ನಾಡಿನ ಹಿರಿಮೆಯನ್ನು ಕೊಂಡಾಡಿತು. ಅತ್ತ ಪ್ರೇಕ್ಷಕರ ಸಾಲಿನಲ್ಲಿದ್ದ ಯುವಕ-ಯುವತಿಯರು ತಾವಿದ್ದಲ್ಲೇ ಹೆಜ್ಜೆ ಹಾಕಿ ಸಂಭ್ರಮಿಸಿದರು. ಅಂತೆಯೇ ರಾಮನಗರದ ಶಾಂತಿನಿಕೇತನ್ ಕಾಲೇಜ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ತಂಡವು ತಮ್ಮ ನೃತ್ಯದ ಮೂಲಕ ಕನ್ನಡದ ಅಭಿಮಾನ ಮೆರೆಯಿತು.

'ಮರೆಯೋದುಂಟೆ ಮೈಸೂರು ದೊರೆಯ..' ಗೀತೆಯೊಂದಿಗೆ ಹೆಚ್‌ಡಿ ಕೋಟೆಯ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ತಂಡವು ನೃತ್ಯ ಆರಂಭಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಸ್ಮರಿಸಿತು. ಅಲ್ಲದೆ, ಮಹಾತ್ಮ ಗಾಂಧಿ, ನಾಡಪ್ರಭು ಕೆಂಪೇಗೌಡರ ಭಾವಚಿತ್ರವಿಡಿದು ಹೆಜ್ಜೆ ಹಾಕುವ ಮೂಲಕ ಈರ್ವರು ಮಹನೀಯರು ನಮ್ಮ ಸಮಾಜಕ್ಕೆ ನೀಡಿದ ಕೊಡುಗೆಯನ್ನು ಕೊಂಡಾಡಿತು. ಜೊತೆಗೆ 'ಮಹಾನಾಯಕ ಭೀಮರಾವ್...' ಗೀತೆಗೂ ಹೆಜ್ಜೆ ಹಾಕಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಗಳನ್ನು ಸ್ಮರಿಸಿತು. ಈ ತಂಡದ ಅದ್ಭುತ ಪ್ರದರ್ಶನಕ್ಕೆ ಇಡೀ ಆವರಣದಲ್ಲಿದ್ದ ಪ್ರೇಕ್ಷಕರು ಅಭಿಮಾನದ ಚಪ್ಪಾಳೆ ಸುರಿಸಿದರು.

ಮಂಡ್ಯ ಜಿಲ್ಲೆ ಮಳವಳ್ಳಿಯ ಭಾರತಿ ಪ್ರಥಮ ದರ್ಜೆ ಕಾಲೇಜು ತಂಡವು ನರ್ತನದ ಮೂಲಕ ಅಂಬಾರಿ ಆನೆಯಾಗಿದ್ದ ಅರ್ಜುನನ ಸ್ಮರಿಸಿತು. 'ಮೈಸೂರು ದಸರಾ ಎಷ್ಟೊಂದು ಸುಂದರ...' ಗೀತೆಗೆ ಹೆಜ್ಜೆ ಹಾಕಿದ ಹಾಸನ ಜಿಲ್ಲೆಯ ಹಳೇಬೀಡಿನ ಕಲ್ಪತರು ಪದವಿಪೂರ್ವ ಕಾಲೇಜು ತಂಡವು ನೃತ್ಯ ಪ್ರದರ್ಶಿಸಿ ಮೈಸೂರು ಜಂಬೂಸವಾರಿಯನ್ನು ಪ್ರತಿಬಿಂಬಿಸಿತು.

ಜೆಎಲ್‌ಬಿ ರಸ್ತೆಯ ಮಹಾರಾಜ ಸರ್ಕಾರಿ ಪಿಯು ಕಾಲೇಜು ತಂಡವು ರಾಷ್ಟ್ರಾಭಿಮಾನ ಹಾಗೂ ನಾಡು-ನುಡಿಯ ಅಭಿಮಾನವನ್ನು ನೃತ್ಯ ಮುಖೇನ ಅನಾವರಣಗೊಳಿಸಿತು. ಮೇಲುಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಂಡ 'ದಸರಾ ವೈಭವ' ಕಣ್ಮುಂದೆ ತಂದರೆ, ತಿ.ನರಸೀಪುರದ ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ತಂಡವು ಸಂಗೊಳ್ಳಿ ರಾಯಣ್ಣ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ಸಾಹಸಮಯ ಸನ್ನಿವೇಶಗಳನ್ನು ಅನಾವರಣಗೊಳಿಸಿತು. ಮೈಸೂರಿನ ಸಿದ್ಧಾರ್ಥ ನಗರದ ಜೆಎಸ್‌ಎಸ್ ಬದ್ರಿಪ್ರಸಾದ್ ಪಿಯು ಕಾಲೇಜು ತಂಡವು ಸುಭಾಷ್ ಚಂದ್ರ ಬೋಸ್ ಹಾಗೂ ಭಗತ್ ಸಿಂಗ್ ಅವರ ಹೋರಾಟದ ಕಿಚ್ಚನ್ನು ನೃತ್ಯದಲ್ಲಿ ಪ್ರತಿಬಿಂಬಿಸಿತು. ಒಟ್ಟಾರೆ 58 ಕಾಲೇಜು ತಂಡಗಳು ನೃತ್ಯ ಪ್ರದರ್ಶನ ನೀಡಿದವು. ಇಡೀ ಬಯಲು ರಂಗಮಂದಿರ ಕಿಕ್ಕಿರಿದು ತುಂಬಿತ್ತು. ಈ ಪೈಕಿ ಎಂದಿನಂತೆ ಯುವ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ನಿಗದಿತ ಥೀಮ್ ಮರೆತ ತಂಡಗಳು!

ನಿಗದಿತ ಥೀಮ್‌ಗೆ ಪೂರಕವಾಗಿಲ್ಲದ ನೃತ್ಯಗಳನ್ನು ಹಲವು ತಂಡಗಳು ಪ್ರದರ್ಶಿಸಿದವು. ಈಗಾಗಲೇ ಕಾಲೇಜು ತಂಡಗಳು ಹಾಗೂ ಅವುಗಳಿಗೆ ನಿಗದಿಯಾಗಿರುವ ಥೀಮ್‌ಗಳನ್ನು ಸಹ ಪಟ್ಟಿ ಮಾಡಿ ಕೈಪಿಡಿ ಹೊರತರಲಾಗಿದೆ. ಆದರೆ ಸೋಮವಾರ ಹಲವು ತಂಡಗಳು ತಮಗೆ ನೀಡಿರುವ ಥೀಮ್‌ಗೆ ಪೂರಕವಾಗಿ ನೃತ್ಯ ಪ್ರದರ್ಶಿಸದೇ ಬೇರೆ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮ ನೀಡಿದ್ದು ಕಂಡುಬಂದಿತು. ಅಲ್ಲದೆ, ಅನೇಕ ತಂಡಗಳ ಪ್ರದರ್ಶನವೂ ಅಂತಹ ಆಕರ್ಷಕವಾಗಿ ಇಲ್ಲದೇ ಸಪ್ಪೆಯಾಗಿರುವುದು ಇದ್ದಿತು. ಅದೇನೇ ಇದ್ದರೂ ಅಬ್ಬರ ಸಂಗೀತ ಕೇಳಿ ಬರುತ್ತಿದ್ದ ಹಿನ್ನೆಲೆಯಲ್ಲಿ ಯುವ ಪಡೆಯ ಗುಂಪುಗಳು ತಾವಿದ್ದಲ್ಲೇ ಕುಣಿದು ಕುಪ್ಪಳಿಸಿ ಸಂಭ್ರಮಿಸಿದ್ದು ಎಂದಿನಂತೆ ಇಂದು ಸಹ ಸಾಮಾನ್ಯವಾಗಿಯೇ ಕಂಡು ಬಂದಿತು.



ನಟಿ ಚಂದನಾ ಅನಂತಕೃಷ್ಣ ನೃತ್ಯ ಭಂಗಿ.



ಯುವ ಸಂಭ್ರಮದಲ್ಲಿ ಕರಾವಳಿಯ ಯಕ್ಷಗಾನ ಕಲೆಯ ಅನಾವರಣ



ಬಯಲು ರಂಗಮಂದಿರದಲ್ಲಿ ಕುಣಿದು ಕುಪ್ಪಳಿಸುತ್ತಿರುವ ಯುವತಿಯರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ

ಶಾಸಕ ಟಿ.ಎಸ್.ಶ್ರೀವತ್ಸ ಪ್ರತಿಕ್ರಿಯೆ

ಮೈಸೂರು, ಸೆ.15(ಎಂಕೆ)- ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆಯನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.



ಶ್ರೀವತ್ಸ

ಮಾಜಿ ಸಂಸದ ಪ್ರತಾಪ್ ಸಿಂಹ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಪಿಐಎಲ್ ಅರ್ಜಿ ವಜಾಗೊಂಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ನಾವು ನಿಸಾರ್ ಅಹಮದ್ ಅವರ ಆಯ್ಕೆಯನ್ನು ಒಪ್ಪಿದ್ದೆವು. ಅವರಿಗೆ ದೇವರು, ನಮ್ಮ ಧರ್ಮದ ಮೇಲೆ ನಂಬಿಕೆ ಇತ್ತು. ಆದರೆ, ಬಾನು ಮುಷ್ತಾಕ್ ಅವರಿಗೆ ಅಂತಹ ನಂಬಿಕೆ ಇಲ್ಲ. ಹಾಗಾಗಿ ಪ್ರತಾಪ್ ಸಿಂಹ ಕೋರ್ಟ್ ಮೊರೆ ಹೋಗಿದ್ದರು ಎಂದರು.

ದಸರಾ ಉದ್ಘಾಟನೆಗೆ ಇನ್ನೂ ಕೆಲವು ದಿನಗಳು ಬಾಕಿ ಇದ್ದು, ಈ ಬಗ್ಗೆ ಪಕ್ಷದ ಹಿರಿಯರ ಜೊತೆ ಚರ್ಚೆ ನಡೆಸಿ ಮುಂದಿನ ತೀರ್ಮಾನ ಮಾಡುತ್ತೇವೆ. ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆಯನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಆನೆಗಳಿಗೆ ಸದ್ದಿನ ಪರೀಕ್ಷೆ

ಸಿಡಿಮದ್ದು ತಾಲೀಮಿನ ಮೊದಲ ಪರೀಕ್ಷೆಯಲ್ಲಿ ಸ್ವಲ್ಪ ಗಲಿಬಿಲಿ; ಅದು ಬಿಟ್ಟರೆ ಆನೆ, ಕುದುರೆಗಳ ವರ್ತನೆ ನಿರಾಳ

ಮೈಸೂರು,ಸೆ.15(ಎಂಟಿವೈ)- ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆ ಜಂಬೋಪಡೆ ಹಾಗೂ ಅಶ್ವಪಡೆಯ ಮುಂದೆ ಮೊದಲ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ಜಂಬೂಸವಾರಿಗೆ 17 ದಿನವಷ್ಟೇ ಇದ್ದು, ಗಜಪಡೆಗೆ ಅಂತಿಮ ಹಂತದ ತಾಲೀಮು ಪ್ರಕ್ರಿಯೆ ಆರಂಭಿಸಲಾಗಿದೆ. ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆ ನುಡಿಸುವ ವೇಳೆ 21 ಬಾರಿ ಕುಶಾಲ ತೋಪು ಸಿಡಿಸುವ ಸಂಪ್ರದಾಯವಿದ್ದು, ಈ ವೇಳೆ ಸಿಡಿಮದ್ದು ಶಬ್ದಕ್ಕೆ ಆನೆಗಳು ಬೆದರದಂತೆ ಸಜ್ಜುಗೊಳಿಸಲು ನಡೆಸಿದ ಮೊದಲ ಸಿಡಿಮದ್ದು ತಾಲೀಮಿನಲ್ಲಿ ಮೂರು ಹೊಸ ಆನೆಗಳು ಸ್ವಲ್ಪ ಬೆಚ್ಚಿದವು. ಉಳಿದವು ಅಂಜಲಿಲ್ಲ.

ದಸರಾ ವಸ್ತುಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಸೋಮವಾರ ಬೆಳಗ್ಗೆ ನಡೆಸಿದ ಸಿಡಿಮದ್ದು ತಾಲೀಮಿನಲ್ಲಿ ಗಜಪಡೆಯ ನಾಯಕ ಅಭಿಮನ್ಯು ನೇತೃತ್ವದಲ್ಲಿ ನಾಲ್ಕು ಹೊಸ ಆನೆ ಸೇರಿದಂತೆ ಒಟ್ಟು 14 ಆನೆಗಳು ಪಾಲ್ಗೊಂಡಿದ್ದವು. ಅಲ್ಲದೆ, ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಅಶ್ವಾರೋಹಿ ದಳದ 38 ಕುದುರೆಗಳು ಸಹ ಪಾಲ್ಗೊಂಡು ಸಿಡಿಮದ್ದು ಸಿಡಿತದ ಭಾರಿ ಶಬ್ದವನ್ನು ಅರಗಿಸಿಕೊಂಡವು.

ಆನೆ, ಕುದುರೆಗಳಿಗೆ ಸಿಡಿಮದ್ದಿನ ಶಬ್ದ ಪರಿಚಯಿಸಲು ತಾಲೀಮು

ಜಂಬೂಸವಾರಿ ದಿನ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ 21 ಬಾರಿ ಕುಶಾಲತೋಪು ಸಿಡಿಸಲಾಗುತ್ತದೆ. ಆ ವೇಳೆ ಶಬ್ದಕ್ಕೆ ಆನೆ, ಕುದುರೆಗಳ ವರ್ತನೆ ಬದಲಾಗಬಾರದು ಎಂಬ ಕಾರಣಕ್ಕೆ ಸಿಡಿಮದ್ದು ತಾಲೀಮು ನಡೆಸಲಾಗಿದೆ. ಸದ್ಯ ಎಲ್ಲಾ ಆನೆ, ಕುದುರೆಗಳು ಸುಸ್ಥಿತಿ ಕಾಯ್ದುಕೊಂಡಿವೆ.

ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತರು.

7 ಫಿರಂಗಿ, 21 ಕುಶಾಲತೋಪು: ಅಂಬಾರಿಗೆ ಪುಷ್ಪಾರ್ಚನೆ ವೇಳೆ 7 ಫಿರಂಗಿ ಬಳಸಿ ಒಂದು ನಿಮಿಷದೊಳಗೆ 3 ಸುತ್ತಿನಂತೆ 21 ಕುಶಾಲತೋಪು ಸಿಡಿಸಲಾಗುತ್ತದೆ. ಇಂದು ನಡೆದ ತಾಲೀಮಿನಲ್ಲೂ 7 ಫಿರಂಗಿ ಬಳಸಿ, ಮೂರು ಸುತ್ತಿನಲ್ಲಿ 21 ಬಾರಿ ಸಿಡಿಮದ್ದು ಸಿಡಿಸಲಾಯಿತು. ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್, ಎಸಿಪಿ ಕುಮಾರಸ್ವಾಮಿ ನೇತೃತ್ವದಲ್ಲಿ 35 ಸಿಬ್ಬಂದಿಯ ತಂಡ ಸುರಕ್ಷಿತವಾಗಿ 21 ಬಾರಿ ಸಿಡಿಮದ್ದು ಸಿಡಿಸಿ ಸೈ ಎನಿಸಿಕೊಂಡರು.



ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಮೈದಾನದಲ್ಲಿ ದಸರಾ ಗಜಪಡೆಗೆ ಮೊದಲ ಹಂತದ ಸಿಡಿಮದ್ದು ತಾಲೀಮು ನಡೆಸಲಾಯಿತು.

ಅಂದಾಜು 38 ಕೆಜಿ ಗನ್‌ಪೌಡರ್ ಬಳಕೆ

ಮೊದಲ ತಾಲೀಮಿನಲ್ಲಿ ಉದ್ದನೆಯ(ಲಾಂಗ್) ಬ್ಯಾರಲ್‌ವುಳ್ಳ 4, ಚಿಕ್ಕ(ಶಾರ್ಟ್) ಬ್ಯಾರಲ್‌ವುಳ್ಳ 3 ಫಿರಂಗಿ ಬಳಸಲಾಗಿತ್ತು. ಅವುಗಳಲ್ಲಿ ಉದ್ದನೆಯ ಬ್ಯಾರಲ್ ಫಿರಂಗಿಗಳಿಗೆ ಒಂದು ಬಾರಿಗೆ 1ಕೆಜಿ 200 ಗ್ರಾಂ ಗನ್‌ಪೌಡರ್‌ನಿಂದ ತಯಾರಿಸಿದ ಸಿಡಿಮದ್ದು ಬಳಸಿದರೆ, ಚಿಕ್ಕ ಬ್ಯಾರಲ್ ಫಿರಂಗಿಗಳಿಗೆ ಒಂದು ಬಾರಿಗೆ 1ಕೆಜಿ, 800 ಗ್ರಾಂ ಗನ್‌ಪೌಡರ್ ಬಳಸಿ ತಯಾರಿಸಿದ ಮದ್ದು ಬಳಸಲಾಯಿತು. ಒಟ್ಟು 21 ಸಿಡಿಮದ್ದು ತಯಾರಿಕೆಗೆ ಅಂದಾಜು 38 ಕೆಜಿ ಗನ್‌ಪೌಡರ್ ಬಳಸಲಾಗಿದೆ. ಫಿರಂಗಿ ತೂಬಿಗೆ ರಂಜಕ ತುಂಬುವ ಸಿಬ್ಬಂದಿಗೆ ಅಗ್ನಿ ನಿರೋಧಕ ಜರ್ಕಿನ್ ಮತ್ತು ಸುರಕ್ಷಿತ ಹೆಲ್ಮೆಟ್ ನೀಡಲಾಗಿತ್ತು.

ಸಮಾಧಾನ ತಂದಿದೆ

ಮೊದಲ ಹಂತದ ಸಿಡಿಮದ್ದು ತಾಲೀಮಿನಲ್ಲಿ ಆನೆಗಳ ವರ್ತನೆ ಸಮಾಧಾನ ತಂದಿದೆ. ತಾಲೀಮಿನಲ್ಲಿ ಪಾಲ್ಗೊಂಡ ಎಲ್ಲಾ ಆನೆಗಳು ಸಿಡಿಮದ್ದಿನ ಶಬ್ದ ಗ್ರಹಿಸಿ, ಸೌಮ್ಯ ರೀತಿ ವರ್ತಿಸಿವೆ. ಮುಂದಿನ ದಿನಗಳಲ್ಲಿ ಎರಡು ಬಾರಿ ಸಿಡಿಮದ್ದು ತಾಲೀಮು ನಡೆಸಿ, ಗಜಪಡೆಯನ್ನು ಸಜ್ಜುಗೊಳಿಸಲಾಗುವುದು.

ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್,

ಬೆದರಿದ ಹೊಸ ಆನೆಗಳು: ಇದೇ ಮೊದಲ ಬಾರಿಗೆ ಗಜಪಡೆಯಲ್ಲಿ ಸ್ಥಾನಗಿಟ್ಟಿಸಿಕೊಂಡಿರುವ ಶ್ರೀಕಂಠ, ಹೆಣ್ಣಾನೆಗಳಾದ ಹೇಮಾವತಿ, ರೂಪ ಆರಂಭದಲ್ಲಿ ಬೆದರಿದವು. ಬಳ್ಳೆ ಲಕ್ಷ್ಮೀ ಮತ್ತು ಪ್ರಶಾಂತ ಆನೆಯೂ ಸ್ವಲ್ಪ ಬೆಚ್ಚಿದಂತೆ ಕಂಡುಬಂದವು. ಎರಡನೇ ಸುತ್ತಿನ ಸಿಡಿಮದ್ದು ಸಿಡಿಯುವ ವೇಳೆಗೆ ಪ್ರಶಾಂತ ಹಾಗೂ ಲಕ್ಷ್ಮೀ ಸುಧಾರಿಸಿಕೊಂಡರೆ, ಶ್ರೀಕಂಠ ಮತ್ತು ಹೇಮಾವತಿ ಎರಡು ಬಾರಿ ಹಿಮ್ಮುಖವಾಗಿ ತಿರುಗಿ ನಿಂತುಕೊಂಡವು. ನಂತರ ಮಾವುತರು ನಿಯಂತ್ರಣಕ್ಕೆ ತೆಗೆದುಕೊಂಡರು. ಮೂರನೆ ಸುತ್ತಿನ ಸಿಡಿಮದ್ದು ಸಿಡಿಯುವ ವೇಳೆಗೆ ಆನೆಗಳನ್ನು ತಹಬದಿಗೆ ತರಲಾಯಿತು.

ಪಟಾಕಿ ಸಿಡಿತ: ವಸ್ತುಪ್ರದರ್ಶನ ಆವರಣಕ್ಕೆ ಗಜಪಡೆಯನ್ನು ಕರೆತಂದು ಮೊದಲಿಗೆ ಎರಡು ಬಾರಿ ಆಟಂ ಬಾಂಬ್(ಪಟಾಕಿ) ಸಿಡಿಸಲಾಯಿತು. ಈ ವೇಳೆ ಶ್ರೀಕಂಠ ಮತ್ತು ಹೇಮಾವತಿ ಬೆದರಿದವು. ಬಳಿಕ ಕುಶಾಲತೋಪು ಸಿಡಿಸುವ ತಾಲೀಮಿಗೆ ಅಣಿಗೊಳಿಸಲಾಯಿತು.

ಅಶ್ವಪಡೆಯೂ ಗಲಿಬಿಲಿ: ಸಿಡಿಮದ್ದು ತಾಲೀಮಿಗೆ ಅಶ್ವಪಡೆಯ ಕುದುರೆಗಳು ಗಲಿಬಿಲಿಗೊಳಗಾದವು. ಸುಮಾರು 38 ಕುದುರೆಗಳನ್ನು ಸಿಡಿಮದ್ದು ತಾಲೀಮಿಗೆ ಕರೆತರಲಾಗಿತ್ತು. ಆದರೆ, 6-7 ಕುದುರೆಗಳು ಮಾತ್ರ ವಿಚಲವಾದಂತೆ ಕಂಡುಬಂದವು. ಆದರೆ, ಅವುಗಳನ್ನು ಸಂತೈಸಲಾಯಿತು.

ತಾಲೀಮಿನ ವೇಳೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಡಿಸಿಪಿಗಳಾದ ಬಿ.ಎನ್.ಬಿಂದುಮಣಿ, ಸುಂದರ್‌ರಾಜ್, ಸಿದ್ದನಗೌಡ ಪಾಟೀಲ್, ಮೌಂಟೆಡ್ ಕಮಾಂಡೆಂಟ್ ಮಾರುತಿ, ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ರಂಗರಾಜು, ಅಕ್ರಂ ಇನ್ನಿತರರು ಉಪಸ್ಥಿತರಿದ್ದರು.



ಸಿಡಿಮದ್ದು ಸಿಡಿತದಿಂದಾಗಿ ಫಿರಂಗಿಯಿಂದ ಹೊರಬರುತ್ತಿರುವ ದಟ್ಟ ಹೊಗೆ

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದಿಂದ ಗಜಪಡೆಗೆ ಸಾಂಪ್ರದಾಯಿಕ ಪೂಜೆ



ದಸರಾ ವಸ್ತುಪ್ರದರ್ಶನ ದ್ವಾರದ ಬಳಿ ದಸರಾ ಗಜಪಡೆಗೆ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಪೂಜೆ ಸಲ್ಲಿಸಲಾಯಿತು.

ಮೈಸೂರು,ಸೆ.15(ಎಂಟಿವೈ)- ಸಿಡಿಮದ್ದು ತಾಲೀಮಿನಲ್ಲಿ ಪಾಲ್ಗೊಳ್ಳಲು ಆಗಮಿಸಿದ ದಸರಾ ಗಜಪಡೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಬರಮಾಡಿಕೊಳ್ಳಲಾಯಿತು.

ಅರಮನೆಯ ಜಯಮಾರ್ತಾಂಡ ದ್ವಾರದಿಂದ ಸಿಡಿಮದ್ದು ತಾಲೀಮಿನಲ್ಲಿ ಪಾಲ್ಗೊಳ್ಳಲು ಬಿ.ಎನ್.ರಸ್ತೆ ಮೂಲಕ ಆಗಮಿಸಿದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಬಿ.ಎನ್.ರಸ್ತೆ ಜಂಕ್ಷನ್‌ನಿಂದಲೇ ಪೂರ್ಣಕುಂಭ ಸ್ವಾಗತದೊಂದಿಗೆ ಡೊಳ್ಳು ಕುಣಿತ, ಕಂಸಾಳೆ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ದಸರಾ ವಸ್ತುಪ್ರದರ್ಶನದ ಮುಖ್ಯದ್ವಾರದ ಬಳಿ ಸ್ವಾಗತಿಸಲಾಯಿತು.

ಬಳಿಕ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ನೇತೃತ್ವದಲ್ಲಿ ಎಲ್ಲಾ ಆನೆಗಳಿಗೂ ಪ್ರಾಧಿಕಾರದ ಪರವಾಗಿ ಪೂಜೆ ಸಲ್ಲಿಸಿ, ಪಂಚಫಲ, ಕಬ್ಬು ನೀಡಲಾಯಿತು. ನಂತರ ಪುಷ್ಪಾರ್ಚನೆ ಮಾಡಿ, ಗಜಪಡೆಯನ್ನು ಬರಮಾಡಿಕೊಂಡರು.

ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಕಳೆದ ಕೆಲ ವರ್ಷಗಳಿಂದ ದಸರಾ ಗಜಪಡೆ ಸಿಡಿಮದ್ದು ತಾಲೀಮಿಗಾಗಿ ದಸರಾ ವಸ್ತುಪ್ರದರ್ಶನ ಆವರಣದ ಮೂಲಕ ಪಾರ್ಕಿಂಗ್ ಸ್ಥಳಕ್ಕೆ ತೆರಳುತ್ತಿವೆ. ಈ ಹಿಂದೆ ಕಾರಂಜಿಕೆರೆಗೆ ದಸರಾ ಗಜಪಡೆ ತೆರಳುತ್ತಿತ್ತು. ಈಗ ಕಾರಂಜಿಕೆರೆಗೆ ಆನೆಗಳನ್ನು ಕರೆತರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸಿಡಿಮದ್ದು ತಾಲೀಮಿಗಾಗಿ ಮೊದಲ ಬಾರಿಗೆ ವಸ್ತುಪ್ರದರ್ಶನ ಆವರಣಕ್ಕೆ ಬಂದಾಗ ಪ್ರಾಧಿಕಾರದ ವತಿಯಿಂದ ಗೌರವ ಸಮರ್ಪಿಸುವ ಆಲೋಚನೆಯೊಂದಿಗೆ ಇಂದು ಪೂಜೆ ಸಲ್ಲಿಸಲಾಗಿದೆ. ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಅಭಿಲಾಷೆ ಹೊಂದಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಕಮಲಾ ಅನಂತರಾಮು, ಮಾಜಿ ಉಪಮೇಯರ್ ಶಾಂತಕುಮಾರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನೆಲಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 37.13 ಲಕ್ಷ ರೂ.ಲಾಭ

ನಾಪೋಕ್ಲು, ಸೆ.15– ಇಲ್ಲಿಗೆ ಸಮೀಪದ ನೆಲಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 37.13 ಲಕ್ಷ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಮಾಳೆಯಂಡ ಎಂ ಅಪ್ಪಚ್ಚನವರು ಹೇಳಿದರು.

ಸಂಘದಲ್ಲಿ ಗ್ರಾಹಕರಿಗೆ ಗೊಬ್ಬರ ಸೌಲಭ್ಯ ಹಾಗೂ ಕೃಷಿ ಉತ್ಪನ್ನಕ್ಕೆ ಬೇಕಾದ ಸಾಮಗ್ರಿಗಳು ದೊರೆಯುತ್ತವೆ ಹಾಗೂ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಲಭ್ಯವಿರುತ್ತದೆ ಎಂದು ಹೇಳಿದರು ಮತ್ತು ಸದಸ್ಯರ ಮಕ್ಕಳಿಗೆ 10ನೇ ತರಗತಿ ಮತ್ತು 2ನೇ ಪಿ.ಯು.ಸಿ ಎಲ್ಲಾ ಅಂತಿಮ ಪದವಿ ಮತ್ತು ಪೋಸ್ಟ್ ಪದವಿಗಳ ಜೊತೆಗೆ ಮೆಡಿಕಲ್, ಇಂಜಿನಿಯರಿಂಗ್, ಡೆಂಟಲ್‌ನ ಅಂತಿಮ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಮೊದಲ ಮೂವರು ವಿದ್ಯಾರ್ಥಿಗಳಿಗೆ ಬಹುಮಾನ ನೀಡುತ್ತೇವೆ. ಅರ್ಹ ವಿದ್ಯಾರ್ಥಿಗಳು ಸೆ.18ರ ಒಳಗೆ ಸಂಘಕ್ಕೆ ಅಂಕಪಟ್ಟಿಯನ್ನು ತಲುಪಿಸಬೇಕೆಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಂಘದ ಉಪಾಧ್ಯಕ್ಷ ಚೀಯಕ ಪೂವಂಡ ವಿ ರೀನಾ, ನಿರ್ದೇಶಕರಾದ ಬದ್ದಂಜೆಟ್ಟೀರ ಎ.ತಿಮ್ಮಯ್ಯ, ಎ.ಜಿ.ಟಿಂಶ, ಚೀಯಕಪೂವಂಡ ಡಿ.ನಾಚಪ್ಪ, ಕರವಂಡ ಜಿ.ಅಪ್ಪಣ್ಣ, ಮಚ್ಚುರ ಎಂ.ರವೀಂದ್ರ, ಮಣವಟ್ಟೀರ ಬಿ.ದೀಪಕ್ ಪೊನ್ನಪ್ಪ, ಮಣವಟ್ಟೀರ ಕೆ ದಯಾ ಚಿಣ್ಣಪ್ಪ, ಮಣ ವಟ್ಟೀರ. ಎನ್. ಕುಶಾಲಪ್ಪ, ಚೇಂಯಕಪೂವಂಡ ಎ. ಸುನಿಲ್, ಅಪ್ಪುಮಣಿಯಂಡ ಬಿ. ಕಾವೇರಮ್ಮ, ಪಿ.ಎಂ.ವಿಜು ಹಾಗೂ ಸಂಘದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಅನಿಲ್‌ಕುಮಾರ್ ಮತ್ತು ಕೊಡಗು ಡಿಸಿಸಿ ಬ್ಯಾಂಕ್‌ನ ಮೇಲ್ವಿಚಾರಕರು ಎಂ ಬಿ.ಅಯ್ಯಪ್ಪ ಹಾಗೂ ಸಂಘದ ಸಿಬ್ಬಂದಿಗಳು ಹಾಜರಿದ್ದರು.

ಇಂದು ಮಡಿಕೇರಿ ಸುತ್ತಮುತ್ತ ವಿದ್ಯುತ್ ವ್ಯತ್ಯಯ

ಮಡಿಕೇರಿ, ಸೆ.15– ಮೂರ್ನಾಡು ವಿದ್ಯುತ್ ಉಪ ಕೇಂದ್ರದಿಂದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸೆ.16ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಮೂರ್ನಾಡು ಟೌನ್, ಮುತ್ತಾರ್‌ಮುಡಿ, ಕುಂಬಳದಾಳು, ಕಿಗ್ಗಾಲು, ಕಬಡಗೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಾಲಯಗಳಲ್ಲಿ ಸಮಾಜಮುಖಿ ಕಾರ್ಯಗಳಿಗೆ ಆದ್ಯತೆ ನೀಡಿ

ಮಡಿಕೇರಿ, ಸೆ.15– ದೇವಾಲಯಗಳು ಹಿಂದೂಗಳ ಶ್ರದ್ದೆಯ ಧಾರ್ಮಿಕ ಕೇಂದ್ರಗಳಾಗಿದ್ದು, ಸಾಮಾಜಿಕ ಸಾಮರಸ್ಯದ ಜೊತೆಗೆ ಸಮಾಜಮುಖಿ ಕಾರ್ಯಗಳಿಗೆ ಆದ್ಯತೆ ನೀಡಬೇಕು ಎಂದು ದೇವಾಲಯ ಸಂವರ್ಧನಾ ಸಮಿತಿ ರಾಜ್ಯ ಸಂಯೋಜಕ ಮನೋಹರ ಮಠದ್ ಹೇಳಿದರು.

ನಗರದ ನಂದನ ಸಭಾಂಗಣದಲ್ಲಿ ನಡೆದ ದೇವಾಲಯಗಳ ಅರ್ಚಕರು ಮತ್ತು ಸಮಿತಿ ಸದಸ್ಯರ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇವಾಲಯಗಳು ಹಿಂದಿನಿಂದಲೂ ಶೈಕ್ಷಣಿಕ ಕ್ಷೇತ್ರಗಳಿಗೆ ಹೆಚ್ಚು ಒತ್ತು ನೀಡಿ ವಿದ್ಯಾರ್ಜನೆಯ ಕೇಂದ್ರಗಳಾಗಿತ್ತು ರಾಜರ ಕಾಲದಿಂದಲೂ ಧಾರ್ಮಿಕ ಕೇಂದ್ರಗಳು ಅನೇಕ ವಿಶ್ವವಿದ್ಯಾನಿಲಯಗಳಾಗಿ ವಿದ್ಯಾರ್ಜನೆಯನ್ನು ನೀಡುವ ಮೂಲಕ ಜ್ಞಾನಕ್ಕೆ ಹೆಚ್ಚು ಒತ್ತು ನೀಡಿದ್ದವು ಎಂದರು.



ಮನೋಹರ ಮಠದ್ ಅರ್ಚಕರು ಮತ್ತು ಸದಸ್ಯರ ಸಮಾಲೋಚನಾ ಸಭೆ ನಡೆಸಿದರು.

ಜಿಲ್ಲೆಯಲ್ಲಿಯೂ ದೇವಾಲಯಗಳು ನಮ್ಮ ಸಂಸ್ಕೃತಿ, ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಅಬಲರು, ಅಶಕ್ತರಿಗೆ ಸಹಾಯ ಹಸ್ತ ಚಾಚುವಂತಾಗಬೇಕು. ಆ ನಿಟ್ಟಿನಲ್ಲಿ ದೇವಾಲಯ ಸಮಿತಿಯಗಳು ಕಾರ್ಯೋನ್ಮುಖರಾಗುವಂತೆ ತಿಳಿಸಿದರು. ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರದಲ್ಲಿ ದೇವಾಲಯ ಪ್ರಮುಖರ ಸಮಾಲೋಚನಾ ಸಭೆಯನ್ನು ಆಯೋಜಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ದೇವಾಲಯ ಸಂವರ್ಧನಾ ಸಮಿತಿಯ ಜಿಲ್ಲಾ ಸಂಯೋಜಕ ಹೇಮಂತ್ ಕುಮಾರ್, ಸಹ ಸಂಯೋಜಕ ರಂಗಸ್ವಾಮಿ, ಪ್ರಮುಖರಾದ ರಮೇಶ್ ಹೊಳ್ಳ, ಪ್ರಸಾದ್ ಹಾನಗಲ್, ಕೆ.ಕೆ. ದಿನೇಶ್ ಕುಮಾರ್ ಇತರರಿದ್ದರು.

ಮುಸ್ತಫಾ ಸಲ್ಲಲ್ಲಾಹು ಅಲೈವಸಲ್ಲಂರ ನೆನಪಿನ ಕಾಲ್ನಡಿಗೆ ಜಾಥಾ



ಅಲೈವಸಲ್ಲಂರ ಜನ್ಮದಿನಾಚರಣೆ ಅಂಗವಾಗಿ ಬೃಹತ್ ಕಾಲ್ನಡಿಗೆ ಜಾಥಾ ನಡೆಯಿತು.

ವಿರಾಜಪೇಟೆ, ಸೆ.15– ವಿಶ್ವ ಪ್ರವಾದಿ ಮಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈವಸಲ್ಲಂರ 1500ನೇ ಜನ್ಮದಿನಾಚರಣೆ ಅಂಗವಾಗಿ ಬೃಹತ್ ಕಾಲ್ನಡಿಗೆ ಜಾಥಾ ನಡೆಯಿತು. ಶಾಫಿ ಜುಮ್ಮಾ ಮಸೀದಿ ಹಾಗೂ ಗೌರಿ ಕೆರೆ ಬಳಿಯ ನಸ್ರತ್ತುಲ್ ಉಲುಂ ಮದ್ರಸ ಸಂಯುಕ್ತ ಆಶ್ರಯದಲ್ಲಿ ರೂಹೇ ಮದೀನ ಮೀಲಾದ್ ರ‍್ಯಾಲಿ ಅಂಗವಾಗಿ ನಡೆದ ಬೃಹತ್ ಜಾಥಾಕ್ಕೆ ಗೌರಿಕೆರೆ ಬಳಿಯ ನಸ್ರತ್ತುಲ್ ಉಲುಂ ಮದ್ರಸ ಬಳಿ ಚಾಲನೆ ನೀಡಲಾಯಿತು.

ಬೃಹತ್ ಮೀಲಾದ್ ಸಂದೇಶ ಜಾಥಾದ ನೇತೃತ್ವವನ್ನು ಶಾಫಿ ಜುಮ್ಮಾ ಮಸೀದಿಯ ಅಧ್ಯಕ್ಷ ಕೆ.ಪಿ.ರಷೀದ್ ಹಾಜಿ ವಹಿಸಿದ್ದರು. ಶಾದಲಿ ಶಾಫಿ ಜುಮ್ಮಾ ಮಸೀದಿ ಉಪಾಧ್ಯಕ್ಷ ಮಹಮ್ಮದ್ ರಾಫಿ, ಡೊನೆಟರ್ಸ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಆಲಿರ ಪವಿಲ್ ಉಸ್ಮಾನ್, ಸದಸ್ಯರಾದ ಸುಬೇರ್, ಸಲಿಂ, ಅಬ್ದುಲ್ ರಜಾಕ್, ಮಿಲಾದ್ ಸ್ವಾಗತ ಸಮಿತಿ ಅಧ್ಯಕ್ಷ ಸಿ.ಎಚ್. ಆಲಿ, ಶಾಫಿ ಜುಮ್ಮಾ ಮಸೀದಿ ಖತೀಬರಾದ ಆರಿಷ್ ಬಾಕವಿ ನೇತೃತ್ವದಲ್ಲಿ ಪಟ್ಟಣದ ಮದ್ರಸಾದ ವಿದ್ಯಾರ್ಥಿಗಳು, ದಫ್ ತಂಡ, ಸ್ಕೌಟ್, ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಮೆರವಣಿಗೆಯು ಮದ್ರಸದಿಂದ ಆರಂಭಗೊಂಡು ಖಾಸಗಿ ಬಸ್ ನಿಲ್ದಾಣ, ಅಬ್ದುಲ್ ಕಲಾಂ ರಸ್ತೆ, ಗೋಣಿಕೊಪ್ಪ ರಸ್ತೆ, ಸರಕಾರಿ ಬಸ್ ನಿಲ್ದಾಣ, ದೊಡ್ಡಟ್ಟಿ ಚೌಕಿ, ಎಫ್.ಎಂ.ಸಿ ರಸ್ತೆ, ಗಡಿಯಾರ ಕಂಬ, ಮುಖ್ಯ ರಸ್ತೆಯ ಮೂಲಕ ಸಾಗಿ ಶಾಫಿ ಜುಮ್ಮಾ ಮಸೀದಿಯಲ್ಲಿ ಸಂಪನ್ನಗೊಂಡಿತು.

ಮೆರವಣಿಗೆ ಸಂದರ್ಭದಲ್ಲಿ ಸ್ನೇಹಿತರ ಒಕ್ಕೂಟದ ಹಾಗೂ ಇತರೆ ಸಂಘ ಸಂಸ್ಥೆಗಳ ವತಿಯಿಂದ ಸಿಹಿ ತಿಂಡಿ, ತಂಪು ಪಾನೀಯ ವಿತರಣೆ ಮಾಡಲಾಯಿತು. ನಗರ ಠಾಣೆ ಅಧಿಕಾರಿ ಪ್ರಮೋದ್ ಕುಮಾರ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಪ್ರಥಮ ಮಹಿಳಾ ವಕೀಲೆಗೆ ಸಮುದಾಯದ ಗೌರವ

ಮಡಿಕೇರಿ, ಸೆ.15– ಜಿಲ್ಲೆಯಲ್ಲಿ ಕುಲಾಲ(ಕುಂಬಾರ) ಸಮುದಾಯದ ಮೊದಲ ಮಹಿಳಾ ವಕೀಲರೆಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಎ.ಮಂಜುಳಾ ಅವರನ್ನು ಜಿಲ್ಲಾ ಕುಲಾಲ ಮಡಿಕೆ ತಯಾರಕರ ಸಹಕಾರ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ನಗರದ ಕೋಟೆ ಮಹಿಳಾ ಸಮಾಜದಲ್ಲಿ ನಡೆದ ಕೊಡಗು ಜಿಲ್ಲಾ ಕುಲಾಲ (ಕುಂಬಾರ) ಮಡಿಕೆ ತಯಾರಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಎ.ಮಂಜುಳಾ ಅವರನ್ನು ಸನ್ಮಾನಿಸಿದರು.

ಕುಲಾಲ ಸಂಘದ ಸ್ಥಾಪಕಾಧ್ಯಕ್ಷರಾದ ಕೆ.ಎಸ್. ಮುತ್ತಪ್ಪ, ಉಪಾಧ್ಯಕ್ಷ ಕೆ.ಕೆ.ದಾಮೋದರ್, ಕಾರ್ಯದರ್ಶಿ ಅರುಣ್ ಕುಮಾರ್, ಹಿರಿಯರಾದ ಮಾಯಿಲಪ್ಪ, ಸಹಕಾರ ಸಂಘದ ಕಾರ್ಯದರ್ಶಿ ದೀನಮಣಿ, ನಿರ್ದೇಶಕರಾದ ಕಾಂತಿಮಣಿ, ಚಿನ್ನಪ್ಪ ಮತ್ತಿತರರು ಉಪಸ್ಥಿತರಿದ್ದರು.



ಮೊದಲ ಮಹಿಳಾ ವಕೀಲೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಎ.ಮಂಜುಳಾ ಅವರನ್ನು ಜಿಲ್ಲಾ ಕುಲಾಲ ಮಡಿಕೆ ತಯಾರಕರ ಸಹಕಾರ ಸಂಘವು ಸನ್ಮಾನಿಸಿತು.

ಗಾಂಜಾ ಮಾರಾಟ : ಇಬ್ಬರ ಬಂಧನ

ಮಡಿಕೇರಿ, ಸೆ.15–ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಗ ಬಾಣಂಗಾಲ ಗ್ರಾಮದಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದ ಪಶ್ಚಿಮ ಬಂಗಾಳದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಪಶ್ಚಿಮ ಬಂಗಾಳದ ನಾದಿಯ ಜಿಲ್ಲೆ ಮೂಲದವರಾಗಿ ಸಿದ್ದಾಪುರದಲ್ಲಿರುವ ಮಾರ್ಗೊಲ್ಲಿ ಟಾಟಾ ಕಾಫಿ ಎಸ್ಟೇಟ್ ಲೈನ್‌ಮನೆ ನಿವಾಸಿಗಳಾದ ಅರ್ಚನಾ ಸರ್ದಾರ್(30) ಮತ್ತು ತಪಾನ್ ಸರ್ದಾರ್(38) ಎಂಬವರು ಬಂಧಿತ ಆರೋಪಿಗಳಾಗಿದ್ದಾರೆ.

ಇವರ ಬಳಿ ಇದ್ದ 1 ಕೆ.ಜಿ 166 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಬಾಡಗ ಬಾಣಂಗಾಲ ಗ್ರಾಮದ ಮಾರ್ಗೊಲ್ಲಿ ಟಾಟಾ ಕಾಫಿ ಎಸ್ಟೇಟ್ ಜಂಕ್ಷನ್ ಬಸ್ ನಿಲ್ದಾಣದ ಬಳಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಅರ್ಚನಾ

ತಪಾನ್

ವಿರಾಜಪೇಟೆ ಡಿವೈಎಸ್‌ಪಿ ಸೂರಜ್. ಪಿ.ಎ, ಮಡಿಕೇರಿ ನಗರ ವೃತ್ತ ನಿರೀಕ್ಷಕ ರಾಜು.ಪಿ.ಕೆ, ಸಿದ್ದಾಪುರ ಪೊಲೀಸ್ ಠಾಣೆ ಪಿಎಸ್‌ಐ ಮಂಜುನಾಥ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಸುಂಟಿಕೊಪ್ಪ ಫ್ಯಾಷನ್ ಜ್ಯುವೆಲರಿ ಮಳಿಗೆಯಲ್ಲಿ ಸರ ಕಳ್ಳತನ


ಸಿ.ಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ಶಂಕಿತ ಮಹಿಳಾ ಆರೋಪಿಗಳು

ಸುಂಟಿಕೊಪ್ಪ: ಸುಂಟಿಕೊಪ್ಪ ಹೃದಯ ಭಾಗದಲ್ಲಿರುವ ಫ್ಯಾಷನ್ ಜ್ಯುವೆಲರಿ ಮಳಿಗೆಯಲ್ಲಿ ಭಾನುವಾರ ಸಂಜೆ 22 ಗ್ರಾಂ ತೂಕದ ಚಿನ್ನದ ಸರ ಕಳುವಾಗಿರುವ ಪ್ರಕರಣ ಬೆಳಕಿಗೆ ಬಂದಿದೆ. ಭಾನುವಾರ ರಾತ್ರಿ ಮಳಿಗೆ ಮುಚ್ಚುವ ಮೊದಲು ದಾಸ್ತಾನು ಪರಿಶೀಲಿಸುವ ಸಂದರ್ಭದಲ್ಲಿ ಚಿನ್ನದ ಸರ ಕಳವಾಗಿರುವುದು ಅಂಗಡಿಯವರ ಗಮನಕ್ಕೆ ಬಂದಿದೆ. ತಕ್ಷಣ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಸಂಜೆ 5ರ ಸಮಯದಲ್ಲಿ ಮಗುವಿನೊಂದಿಗೆ ಬಂದಿದ್ದ ಮೂವರು ಮಹಿಳೆಯರು ಈ ಕೃತ್ಯ ಎಸಗಿರುವುದು ಕಂಡು ಬಂದಿದೆ. ಅಂಗಡಿ ಮಾಲೀಕರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಹಸು ಕಳವು ಮಾಡಿದ್ದ ಮೂವರ ಬಂಧನ

ಮಡಿಕೇರಿ: ವಿರಾಜಪೇಟೆ ತಾಲೂಕಿನ ಮೈತಾಡಿ ಗ್ರಾಮದಲ್ಲಿ ಹಸು ಕಳವು ಮಾಡಿದ್ದ ಮೂವರು ಆರೋಪಿಗಳನ್ನು ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿರಾಜಪೇಟೆ ತಾಲೂಕು ಕೊಂಡಂಗೇರಿ ಗ್ರಾಮ ನಿವಾಸಿಗಳಾದ ಮೊಹಮ್ಮದ್ ಆಶಿಕ್(22), ಶಾಹಿದ್(25)


ಮೊಹಮ್ಮದ್ ಶಾಹಿದ್ ಹ್ಯಾರೀಸ್

ಮತ್ತು ಹ್ಯಾರೀಸ್(34) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಸೆ.5ರಂದು ಮೈತಾಡಿ ಗ್ರಾಮದ ನಿವಾಸಿ ಬೊಳ್ಳಪಂಡ ಎಂ.ಭೀಮಯ್ಯ ಎಂಬವರ ಹಸು ಕಾಣೆಯಾಗಿರುವ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ವಿಶೇಷ ತಂಡ ರಚಿಸಿ ತನಿಖೆ ನಡೆಸಿದ ಪೊಲೀಸರು 3 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತನಾಗಿರುವ ಹ್ಯಾರೀಸ್ ಎಂಬಾತ ಸಿದ್ದಾಪುರ ಠಾಣಾ ವ್ಯಾಪ್ತಿಯಲ್ಲಿ 2024ರಲ್ಲಿ ನಡೆದಿದ್ದ ಗೋವು ಕಳವು ಪ್ರಕರಣದಲ್ಲೂ ಆರೋಪಿಯಾಗಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ. ಡಿವೈಎಸ್‌ಪಿ ಮಹೇಶ್ ಕುಮಾರ್.ಎಸ್, ವಿರಾಜಪೇಟೆ ವೃತ್ತ ನಿರೀಕ್ಷಕ ಪಿ.ಅನೂಪ್ ಮಾದಪ್ಪ, ಗ್ರಾಮಾಂತರ ಠಾಣಾಧಿಕಾರಿ ಲತಾ.ಎನ್.ಜೆ, ಸಿಬ್ಬಂದಿಗಳಾದ ಸಾಜನ್, ಜೋಸ್ ನಿಶಾಂತ್, ಸಂತೋಷ್ ಚೌಹನ್, ಅಬ್ದುಲ್ ಮಜೀದ್, ಬೋಪಣ್ಣ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕಾಮಗಾರಿಯಲ್ಲಿ ದೋಷ ಕಂಡು ಬಂದರೆ ಶೋಕಾಸ್ ನೋಟಿಸ್, ಬಿಲ್‌ನಲ್ಲಿ ಕಡಿತ

ಚಾಮರಾಜನಗರ, ಸೆ.15–ನಗರದಲ್ಲಿ ನಡೆಯುತ್ತಿರುವ ಕಾಮಗಾರಿಗಳಲ್ಲಿ ಗುಣಮಟ್ಟದ ಕೆಲಸಗಳು ಆಗಬೇಕು. ಏನಾದರೂ ಲೋಪ ಕಂಡುಬಂದರೆ ಶೋಕಾಸ್ ನೋಟಿಸ್ ನೀಡಿ ಬಿಲ್ ಕಡಿಮೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಯೋಜನೆಯಡಿಯಲ್ಲಿ ನಗರದ ವಿವಿಧ ವಾರ್ಡ್‌ಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಕಾಮಗಾರಿಯಲ್ಲಿ ತಪ್ಪು ಕಂಡುಬಂದರೆ ರೀವರ್ಕ್ ಮಾಡಲು ಹೇಳಿದ್ದೇವೆ. ಜಿಪಿಎಸ್ ಪ್ರಕಾರ ಕಾಮಗಾರಿಗಳನ್ನು ವೀಕ್ಷಣೆ ಮಾಡಿಕೊಂಡು ಬರಲಾಗುತ್ತಿದೆ. ಮೂರು, ನಾಲ್ಕು ಕಡೆ ಬೋರಿಂಗ್ ಮಿಷನ್ ಮೂಲಕ ಪರಿಶೀಲನೆ ಮಾಡ ಲಾಗುತ್ತದೆ ವ್ಯತ್ಯಾಸ ಕಂಡುಬಂದರೆ ಗುತ್ತಿಗೆದಾರರಿಗೆ ಬಿಲ್ ಕಡಿಮೆ ಮಾಡುವುದಲ್ಲದೆ ಅವರಿಗೆ ಶೋಕಾಸ್ ನೋಟಿಸ್ ನೀಡಲಾಗುವುದೆಂದರು.


ರಾಮಸಮುದ್ರ 29ನೇ ವಾರ್ಡ್‌ಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ನಗರದ ರಾಮಸಮುದ್ರದ 28, 29ನೇ ವಾರ್ಡ್‌ನಲ್ಲಿ ನಗರೋತ್ಥಾನ ಹಂತ–4 ಯೋಜನೆಯಡಿಯಲ್ಲಿ ನಡೆಯುತ್ತಿರುವ ಸಿಮೆಂಟ್ ರಸ್ತೆ, ಚರಂಡಿ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ 4 ಯೋಜನೆಯಡಿ ವಿವಿಧ ಕಾಮಗಾರಿಗಳು ನಗರದಾದ್ಯಂತ ನಡೆಯುತ್ತಿದೆ. ಅಲ್ಟಿಮೆಂಟ್ ಬಿಲ್ ಮಾಡುವ ಮುಂಚೆ ಗುಣಾತ್ಮಕ ಕಾಮಗಾರಿ ಮಾಡಿದ್ದಾರಾ ಕ್ರಿಯಾ ಯೋಜನಾ ಪ್ರಕಾರ ಮಾಡಿದ್ದಾರಾ ಎಂಬುದನ್ನು ತಿಳಿಯಲು ರ‍್ಯಾಂಡಮ್ ಆಗಿ ಪರಿಶೀಲನೆ ಮಾಡಲು ಬಂದಿದ್ದೇನೆ. ಚರಂಡಿ ಕಾಮಗಾರಿ, ಸಿಮೆಂಟ್ ರಸ್ತೆ ಕಾಮಗಾರಿ, ಹಲವು ಕಾಮಗಾರಿಗಳಿವೆ ಎಂದರು.

ನಾವು ಇಂತಹ ಕಾಮಗಾರಿಗೆ ಬರುತ್ತೇವೆ ಎಂದು ಹೇಳಿ ಬರುವುದಿಲ್ಲ. ಎಲ್ಲ ಕ್ರಿಯಾಯೋಜನೆ ಪಟ್ಟಿಯನ್ನು ತೆಗೆದುಕೊಂಡು ಬಂದಿದ್ದು ಇಂದಿನ ಪರಿಶೀಲನೆಗೆ 17 ಕಾಮಗಾರಿಗಳಿವೆ. ರ‍್ಯಾಂಡಮ್ ಆಗಿ 3 ಕಾಮಗಾರಿ ಆಯ್ಕೆ ಮಾಡಿ ಪರಿಶೀಲನೆ ಮಾಡಲಾಗುತ್ತಿದೆ. ಕ್ರಿಯಾಯೋಜನೆ ಪ್ರಕಾರ ಉದ್ದ, ಕಾಮಗಾರಿ, ಎಡುಲ ಅಗಲ, ಥಿಕ್‌ನೆಸ್‌ನ್ನು ಬೋರಿಂಗ್ ಮಿಷನ್ ಮೂಲಕ ಲೆಯರ್ ತೆಗೆದು ಅಳತೆ ಮಾಡುವ ಮೂಲಕ ಪರಿಶೀಲನೆ ಮಾಡಲಾಗುತ್ತಿದೆ. ಈ ರಸ್ತೆ ಥಿಕ್‌ನೆಸ್ ಕಡಿಮೆ ಬರುತ್ತಿದೆ ಎಂದರು.

28,29ವಾರ್ಡ್‌ಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳಿಗೆ ನಿವಾಸಿಗಳು ಸರಿಯಾಗಿ ಸ್ವಚ್ಚತೆ ಮಾಡುತ್ತಿಲ್ಲ. ನೀರು ಬಿಡುತ್ತಿಲ್ಲ. ಕಸ ತೆಗೆಯುತ್ತಿಲ್ಲ ಎಂದು ದೂರಿದಾಗ ಸ್ಥಳದ ಹಾಜರಿದ್ದ ಅಧಿಕಾರಿಗಳಿಗೆ ನಾಳೆಯಿಂದ ನಗರಸಭಾ ಅಧಿಕಾರಿಗಳಿಗೆ ವಾರ್ಡ್‌ಗಳಿಗೆ ಭೇಟಿ ನೀಡಿ ಸ್ವಚ್ಚತೆ ಕಾಪಾಡಬೇಕು. ಜನರ ಸಮಸ್ಯೆ ಸ್ಪಂದಿಸಬೇಕು. ಎಂದು ಸೂಚಿಸಿದರು. ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಲ್ತಾಫ್, ಎಇಇ ರಾಮಚಂದ್ರ, ನಗರಸಭಾ ಎಇಇ ಪ್ರಕಾಶ್, ಪರಿಸರ ಎಇಇ ರೂಪ, ಜೆಇ ರಾಜು ಹಾಜರಿದ್ದರು.

ಅನಧಿಕೃತ ಕಾಮಗಾರಿ ಸ್ಥಗಿತಗೊಳಿಸಲು ಆದೇಶ

ಕೊಳ್ಳೇಗಾಲ,ಸೆ15– ಪಟ್ಟಣದ ವಾರ್ಡ್‌ನಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಕಾಮಗಾರಿಗಳನ್ನು ಕೂಡಲೇ ಸ್ಥಗಿತಗೊಳಿಸುವಂತೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ನಗರಸಭೆ ಸಭಾಂಗಣದಲ್ಲಿ ಸೋಮವಾರ ಅಧ್ಯಕ್ಷೆ ರೇಖಾ ರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಾಗ ಸುಬ್ಬಣ್ಣ ಅವರ ವಾರ್ಡ್‌ನಲ್ಲಿ ಅನಧಿಕೃತವಾಗಿ ಕಟ್ಟಡ ಕಾಮಗಾರಿ ನಡೆಯುತ್ತಿದೆ. ಸಭೆಯಲ್ಲಿ ಆಸೀನರಾಗಿರುವ ಮೂವರು ಇದರಲ್ಲಿ ಭಾಗಿಯಾಗಿದ್ದಾರೆ, ಅವರ ಹೆಸರು ಹೇಳಬೇಕಾ, ಎಂದು ಕಿಡಿಕಾರಿದ ಶಾಸಕ ಕೃಷ್ಣಮೂರ್ತಿ ಮೊದಲು ಸ್ಥಳಕ್ಕೆ ತೆರಳಿ ಕಾಮಗಾರಿ ಸ್ಥಗಿತಕ್ಕೆ ಮುಂದಾಗಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಳೆದ ಸಭೆಯಲ್ಲಿ ಡಾ. ರಾಜಕುಮಾರ್ ರಸ್ತೆ ಮತ್ತು ಅಂಬೇಡ್ಕರ್ ರಸ್ತೆ ಅಗಲೀಕರಣದ ಕುರಿತು ಸರ್ವೆ ಕಾರ್ಯ ನಡೆಯುತ್ತಿದೆ. ಈ ವೇಳೆ ಆ ರಸ್ತೆಯ 15 ಆಸ್ತಿಗಳಿಗೆ ಇ ಸ್ವತ್ತು ನೀಡಿದ ಕ್ರಮದ ಬಗ್ಗೆಯೂ ಸಾಕಷ್ಟು ಚರ್ಚೆ ನಡೆದು ಇಲ್ಲಿ ಯಾರೇ ತಪ್ಪು ಮಾಡಿದ್ದರೂ ಸಹ ತನಿಖೆ ನಡೆಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಕುರಿತು ಹಲವು ಸದಸ್ಯರು ತಮ್ಮ ಅಸಮಾಧಾನ ವ್ಯಕ್ತಪಡಿಸಿಕೊಂಡಿದ್ದರಿಂದ ಮೇಲಾಧಿಕಾರಿಗಳಿಂದ ತನಿಖೆಯಾಗಲಿ ಎಂದು ಶಾಸಕರು ಹೇಳಿದರು


ಕೊಳ್ಳೇಗಾಲ ನಗರಸಭೆ ಅಧ್ಯಕ್ಷೆ ರೇಖಾ ರಮೇಶ್ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ನಗರಸಭೆಯ ಆಸ್ತಿ ಪುಸ್ತಕ ಈಗ ಪತ್ತೆಯಾಗಿದೆ ನಾಪತ್ತೆಯಾಗಲು ಕಾರಣವೇನು? ಇಲ್ಲಿವರೆಗೆ ಅದು ಎಲ್ಲಿತ್ತು? ಯಾರ ಬಳಿ ಇತ್ತು? ಎಂದು ಸಭೆಯಲ್ಲಿ ತೀವ್ರ ಚರ್ಚೆ ನಡೆದು ಈ ಸಂಬಂಧ ತನಿಖೆ ನಡೆಸುವಂತೆ ಸದಸ್ಯರಾದ ಜಯಮರಿ, ಬಸ್ತಿಪುರ ಶಾಂತರಾಜು ಆಗ್ರಹಿಸಿದರು

ನಗರಸಭೆಯಲ್ಲಿ ಖಾತೆಯದ್ದೆ ಗೊಂದಲವಾಗಿದೆ. ಇಲ್ಲಿ ಅಧಿಕಾರಿಗಳ ಹಿಡಿತವಿಲ್ಲದಾಗಿದೆ. ಶೌಚಾಲಯ. ನಗರಸಭೆ ವ್ಯಾಪ್ತಿಯ ಮಳಿಗೆ ವಿಚಾರದಲ್ಲೂ ಸರಿಯಾದ ಕ್ರಮ ಆಗಿಲ್ಲ, ಬಾಡಿಗೆ ವಸೂಲಾತಿಯಲ್ಲಿ ಅಧಿಕಾರಿಗಳು ಹಿಂದಿದ್ದಾರೆ. ಹೀಗಾದರೆ ನಗರಸಭಾಧಿಕಾರಿಗಳನ್ನೆ ಹೊಣೆಗಾರರನ್ನಾಗಿಸಬೇಕಾಗುತ್ತದೆ ಎಂದು ಶಾಸಕರು ಆಕ್ರೋಶ ವ್ಯಕ್ತಪಡಿಸಿದರು.

ಆಯುಕ್ತ ರಮೇಶ್ ಮಾತನಾಡಿ, ರಾಜ್ ಕುಮಾರ್ ರಸ್ತೆ ವಿಚಾರದಲ್ಲಿ ಅಲ್ಲಿನ ಮಾಲೀಕರು ಕಂದಾಯ ನೀಡಿದ ಹಿನ್ನೆಲೆಯಲ್ಲಿ 8 ಖಾತೆಗಳನ್ನು ನೀಡಲಾಗಿದೆ. ಈ ರಸ್ತೆಯಲ್ಲಿ ಮುಂದಕ್ಕೆ ಖಾತೆ ನೀಡದಂತೆ ನಿರ್ಣಯ ಕೈಗೊಂಡರೆ ಮುಂದೆ ಖಾತೆ ಮಾಡಲ್ಲ ಎಂದರಲ್ಲದೆ, ಮಳಿಗೆ ವಿಚಾರದಲ್ಲಿ 16 ಮಂದಿ ಬಾಡಿಗೆ ಕಟ್ಟಿಲ್ಲ, ಬೀಗ ಹಾಕಲಾಗಿದೆ. ಶೀಘ್ರದಲ್ಲೆ 16 ಮಾಲೀಕರು ನ್ಯಾಯಾಲಯದ ಆದೇಶ ಇದ್ದರೂ ಬಾಡಿಗೆ ಪಾವತಿಸದ ಹಿನ್ನೆಲೆ ಅವರುಗಳ ವಿರುದ್ಧ ನ್ಯಾಯಾಲಯದ ನಿಂದನೆ ಪ್ರಕರಣ ದಾಖಲಿಸಲಾಗುವುದು ಎಂದರು.

ನಗರಸಭೆಯಲ್ಲಿ ಬಲಾಢ್ಯವಾಗಿರುವ ಕೆಲ ನಗರಸಭೆ ಸದಸ್ಯರ ಕೆಲಸ ಆಗುತ್ತೆ, ಅವರೇ ಒತ್ತಡ ನೀಡಿ ಕೆಲಸ ಮಾಡಿಸುತ್ತಾರೆ, ಆದರೆ ಸಾರ್ವಜನಿಕರ ಕೆಲಸ ಮಾತ್ರ ನಡೆಯುತ್ತಿಲ್ಲ ಎಂದು ಅನ್ಸರ್ ಬೇಗ್ ದೂರಿದರು. ಜಿ.ಎಂ ಸುರೇಶ್, ಜಯಂತ್, ಜಿ.ಪಿ.ಶಿವಕುಮಾರ್, ಸ್ವಾಮಿ ನಂಜಪ್ಪ, ಅನ್ಸರ್ ಬೇಗ್, ಜಯಮೇರಿ, ಸುಶೀಲ, ಪವಿತ್ರ, ರಾಮಕೃಷ್ಣ, ಸುಮ ಸುಬ್ಬಣ್ಣ, ಪುಷ್ಪಲತಾ ಶಾಂತರಾಜು ಇನ್ನಿತರಿದ್ದರು

ನಾಳೆಯಿಂದ ನಗರದಲ್ಲಿ ಸ್ವಚ್ಛೋತ್ಸವ ಅಭಿಯಾನ

ಚಾಮರಾಜನಗರ: ಜಿಲ್ಲೆಯ ಎಲ್ಲಾ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಗಾಂಧಿ ಜಯಂತಿ ಅಂಗವಾಗಿ ಸ್ವಚ್ಛತಾ ಹೀ ಸೇವಾ ಅಥವಾ ಸ್ವಚ್ಛತೆಯೇ ಸೇವೆ ಎಂಬ ವಿಶೇಷ ಜನಾಂದೋಲನವನ್ನು ಹಮ್ಮಿಕೊಂಡಿದ್ದು, ಸೆ.17ರಿಂದ ಅ.2ರವರೆಗೆ 'ಸ್ವಚ್ಛೋತ್ಸವ' ಎಂಬ ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಸ್ವಚ್ಛತೆಗಾಗಿ ಸ್ವಯಂ ಪ್ರೇರಣೆ ಮತ್ತು ಸಾಮೂಹಿಕ ಶ್ರಮದಾನ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮುದಾಯದಲ್ಲಿ ಸ್ವಚ್ಛತೆಯ ಆಶಯಗಳನ್ನು ಬಲಪಡಿಸಲು 2017ರಿಂದ ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಆಂದೋಲನವನ್ನು ಆಚರಿಸಲಾಗುತ್ತಿದೆ.

ಸ್ವಚ್ಛ ಭಾರತ ಅಭಿಯಾನದ 11ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದು, ಈ ಯೋಜನೆ ಸಾಧನೆಯ ಮೈಲಿಗಳನ್ನು ಗೌರವಿಸಲು ಎಸ್‌ಹೆಚ್‌ಎಸ್ 2025 ಅಭಿಯಾನವನ್ನು ಆಚರಿಸಲಾಗುತ್ತಿದೆ. ಅಭಿಯಾನದ ಅವಧಿಯಲ್ಲಿ ಸ್ವಚ್ಛತೆಗಾಗಿ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕರ ಸಹಭಾಗಿತ್ವ ಮತ್ತು ಸಮುದಾಯದ ಭಾಗವಹಿಸುವಿಕೆಗೆ ಅನುಕೂಲ ಮಾಡಿಕೊಡಲಾಗುವುದು. ಅನೈರ್ಮಲ್ಯ ಮತ್ತು ಸಮಸ್ಯಾತ್ಮಕ ಕಸದ ತಾಣಗಳನ್ನು ತೆರವು ಗೊಳಿಸಲು ಗಮನಹರಿಸುವ ಬೃಹತ್ ಸ್ವಚ್ಛತಾ ಅಭಿಯಾನಗಳು, ನೈರ್ಮಲ್ಯ ಕಾರ್ಮಿಕರ ಕೊಡುಗೆಯನ್ನು ಗುರುತಿಸುವುದು ಹಾಗೂ ಕಳೆದ ದಶಕದ ಸಾಧನೆಗಳ ಆಚರಣೆ ಮತ್ತು ಸಂಪೂರ್ಣ ಸ್ವಚ್ಛತೆಗೆ ನಮ್ಮ ಬದ್ಧತೆಯನ್ನು ಪುನರುಚ್ಚರಿಸಲಾಗುವುದು.

ಸೈಕಲ್ ರ‍್ಯಾಲಿ


ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ನಡೆದ ಸೈಕಲ್ ರ‍್ಯಾಲಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿ.ಪಂ. ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಕೊಂಡ ಹಾಯುತ್ತಿದ್ದ 14 ಮಂದಿಗೆ ಗಾಯ


ಮಾಜಿ ಸಚಿವ ಎನ್.ಮಹೇಶ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದರು.

ಯಳಂದೂರು,ಸೆ.15 (ವಿ.ಎನ್)–ತಾಲೂಕಿನ ಅಂಬಳೆ ಗ್ರಾಮದಲ್ಲಿ ನಿನ್ನೆ ಸಂಜೆ ನಡೆದ ಶ್ರೀ ಚಾಮುಂಡೇಶ್ವರಿ ಕೊಂಡೋತ್ಸವದಲ್ಲಿ ಕೊಂಡ ಹಾಯುತ್ತಿದ್ದ 14ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.

ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಚಾಮುಂಡೇಶ್ವರಿ ಹಬ್ಬದ ಪ್ರಯುಕ್ತ ಗ್ರಾಮದ ಹೊನ್ನಹೊಳೆ ಸಮೀಪದಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗ ಕೊಂಡೋತ್ಸವದಲ್ಲಿ ಕೊಂಡ ಹಾಯುತ್ತಿದ್ದಾಗ ಕೆಲ ಭಕ್ತರ ಕಾಲುಗಳು ಸುಟ್ಟು ಗಾಯಗಳಾಗಿವೆ. ಗಾಯಗೊಂಡ ಪ್ರಕಾಶ್, ನಂದ, ಚೇತನ್, ಯಶ್ವಂತ್, ನಾರಾಯಣಸ್ವಾಮಿ, ಚಿಕ್ಕಮಹದೇವ ಸೇರಿದಂತೆ ಇತರೆ ಹಲವು ಭಕ್ತರನ್ನು ಕೂಡಲೇ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ.

ಆಸ್ಪತ್ರೆಗೆ ಎನ್.ಮಹೇಶ್ ಭೇಟಿ : ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಮಾಜಿ ಶಾಸಕ ಎನ್.ಮಹೇಶ್ ಭೇಟಿ ಮಾಡಿ ಯೋಗ ಕ್ಷೇಮ ವಿಚಾರಿಸಿದರು. ಗಾಯಾಳುಗಳಿಂದ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಅನಿಲ್ ಇತರರಿದ್ದರು.

ವಿಶ್ವೇಶ್ವರಯ್ಯನವರ ಆದರ್ಶಗಳನ್ನು ಇಂಜಿನಿಯರ್‌ಗಳು ಅಳವಡಿಸಿಕೊಳ್ಳಬೇಕು

ಚಾಮರಾಜನಗರ: ಸರ್.ಎಂ.ವಿಶ್ವೇಶ್ವರಯ್ಯನವರ ಆದರ್ಶಗಳನ್ನು ಪ್ರತಿಯೊಬ್ಬ ಇಂಜಿನಿಯರ್‌ಗಳು ಸಹ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ದೇಶದ ಪ್ರಗತಿ ಸಾಧ್ಯ ಎಂದು ಕಾರ್ಯಪಾಲಕ ಇಂಜಿನಿಯರ್ ಹೆಚ್.ಸಿ.ರಮೇಶಕುಮಾರ ತಿಳಿಸಿದರು.

ನಗರದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯಲ್ಲಿ ನಡೆದ ಇಂಜಿನಿಯರ್ಸ್ ದಿನಾಚರಣೆ ಸಮಾರಂಭದಲ್ಲಿ ವಿಶ್ವೇಶ್ವರಯ್ಯರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಸರ್.ಎಂ.ವಿಶ್ವೇಶ್ವರಯ್ಯನವರು ಕರ್ನಾಟಕದ ಹೆಮ್ಮೆಯ ಪುತ್ರ, ಇಂದು ಅವರ ಸಾಧನೆಯನ್ನು ಗೌರವಿಸುವ ದಿನವಾಗಿದೆ ಎಂದರು.

ಅಧೀಕ್ಷಕ ಎಸ್.ಮಹದೇವಯ್ಯ ಮಾತನಾಡಿ, ಸರ್ ಎಂ.ವಿಶ್ವೇಶ್ವರಯ್ಯನವರು ಮೈಸೂರು ಪ್ರಾಂತ್ಯಕ್ಕೆ ಕೆಆರ್‌ಎಸ್ ಅಣೆಕಟ್ಟು ಕಟ್ಟುವ ಮೂಲಕ ಲಕ್ಷಾಂತರ ಜನರ ಬದುಕಿಗೆ ಆಸರೆಯಾಗಿದ್ದಾರೆ. ಈ ಭಾಗದ ಜನರು ಇಂದಿಗೂ ಸಹ ಅವರನ್ನು ಪೂಜಿಸುತ್ತಿದ್ದಾರೆ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಲೆಕ್ಕಾಧಿಕಾರಿ ಬಿ.ಎಸ್.ಪ್ರಶಾಂತ್, ಇಂಜಿನಿಯರ್‌ಗಳಾದ ಮಂಜುನಾಥ್, ರಂಗಸ್ವಾಮಿ, ಸಬೀನಾಬಾನು, ಗುತ್ತಿಗೆದಾರರಾದ ಅಸ್ಲಾಂ ಷರೀಫ್, ಎಸ್.ಜಗದೀಶ್, ಭಾರ್ಗವ, ನೌಕರುಗಳಾದ ಮಲ್ಲಣ್ಣ, ರಘು, ಸಿದ್ದರಾಜು, ವಿನ್ಸೆಂಟ್, ನಂದಕುಮಾರ್, ಮಹೇಶ್ ಹಾಗೂ ಇತರರಿದ್ದರು.


ಸರ್.ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ರಮೇಶಕುಮಾರ ಪುಷ್ಪಾರ್ಚನೆ ಮಾಡಿದರು.

ಮೈಸೂರು ಮಿತ್ರ

ಮಂಗಳವಾರ 16 ಸೆಪ್ಟೆಂಬರ್ 2025

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್‌ನ 119ನೇ ವಾರ್ಷಿಕೋತ್ಸವ ಸಂಭ್ರಮ

ಹಬ್ಬದಂತೆ ಸಡಗರದಿಂದ ನಡೆದ ವಾರ್ಷಿಕ ಸಭೆಯಲ್ಲಿ ಬ್ಯಾಂಕ್ ಸಾಧನೆ ಸಾದರಪಡಿಸಿದ ಅಧ್ಯಕ್ಷ ಜೆ.ಯೋಗೇಶ್



ಮೈಸೂರು ಗಾಂಧಿಚೌಕದಲ್ಲಿರುವ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್‌ನ 119ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಬ್ಯಾಂಕಿನ ಷೇರು ಹೊಂದಿದ ಹಿರಿಯ ಸದಸ್ಯರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಸೆ 15–ಶತಮಾನ ಪೂರೈಸಿದ ಮೈಸೂರಿನ ಗಾಂಧಿಚೌಕದಲ್ಲಿರುವ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಬರೋಬ್ಬರಿ 33,333 ಸದಸ್ಯರನ್ನು ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ 1 ಕೋಟಿ 40 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ.

ನಗರದ ವಸ್ತುಪ್ರದರ್ಶನ ಪ್ರಾಧಿಕಾರದ ಕಾಳಿಂಗರಾವ್ ಸಭಾ ಭವನದಲ್ಲಿ ಸಂಘದ ಅಧ್ಯಕ್ಷ ಜೆ.ಯೋಗೇಶ್ ಅಧ್ಯಕ್ಷತೆಯಲ್ಲಿ 119ನೇ ವಾರ್ಷಿಕ ಸಭೆ ಯಶಸ್ವಿಯಾಗಿ ನಡೆಯಿತು.

ಬ್ಯಾಂಕ್ 10968.89 ಲಕ್ಷ ರೂ. ಸಾಲ ನೀಡಿದ್ದು, ಶೇ.10ರಷ್ಟು ಡಿವಿಡೆಂಡ್ ಅನ್ನು ಘೋಷಿಸಿದೆ. ಇದೇ ವೇಳೆ ಬ್ಯಾಂಕಿನ ಸರ್ವ ಸದಸ್ಯರ ಸಭೆಯಲ್ಲಿ ಡಿವಿಡೆಂಡ್ ಹೆಚ್ಚಳ, ಯುಪಿಐ ಬಳಕೆ, ಸಿಹಿ ವಿತರಣೆ ಹಾಗೂ ಮರಣ ನಿಧಿಯ ಬಗ್ಗೆ ಸದಸ್ಯರು ಹಲವು ಸಲಹೆ ನೀಡಿದರು. ಸಭೆ ಬಳಿಕ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಾಧಕ ಮಕ್ಕಳನ್ನು ಸನ್ಮಾನಿಸಲಾಯಿತು.

ಜತೆಗೆ ಬ್ಯಾಂಕಿನ ಷೇರು ಹೊಂದಿದ ಹಿರಿಯ 119 ಮಂದಿ ಸದಸ್ಯರನ್ನು ಅಭಿನಂದಿಸಲಾಯಿತು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್ ಮಾತನಾಡಿ, ಬ್ಯಾಂಕ್ 1ಕೋಟಿ 40ಲಕ್ಷ ರೂ. ಲಾಭ ಗಳಿಸಿದೆ. ನನ್ನ ಅವಧಿಯಲ್ಲಿ ಶೇ.32 ರಷ್ಟಿದ್ದ ಎನ್‌ಪಿಎಯನ್ನು 40 ದಿನದಲ್ಲಿ ಶೇ.5.46ಕ್ಕೆ ನಿಲ್ಲಿಸಿದ್ದೇನೆ. ಬ್ಯಾಂಕ್ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದೆ. ಆಡಳಿತ ಮಂಡಳಿ ಸಹಕಾರದಿಂದ ಇದು ಸಾಧ್ಯವಾಗಿದೆ. ಮಾರ್ಚ್ ಒಳಗೆ ವಸೂಲಾತಿ ಮಾಡಿದ್ದರ ಫಲವಾಗಿ 1ಕೋಟಿ 40ಲಕ್ಷ ಲಾಭ ಗಳಿಸಿದ್ದೇವೆ. ಎಸ್‌ಬಿ ಖಾತೆಯನ್ನು ಪ್ರತಿಯೊಬ್ಬರೂ ತೆರೆಯುವ ಮೂಲಕ ಆನ್‌ಲೈನ್ ಮೂಲಕವೂ ಬ್ಯಾಂಕ್‌ನಲ್ಲಿ ಹಣಕಾಸಿನ ವ್ಯವಹಾರ ಮಾಡಬಹುದಾಗಿದೆ. ಈ ಬಾರಿ ನಮ್ಮದೇ ನಂದಿನಿಯ ಗುಣಮಟ್ಟದ ಸಿಹಿ ವಿತರಣೆ ಮಾಡಿದ್ದೇವೆ. ಜತೆಗೆ ಡಿವಿಡೆಂಡ್ ಹೆಚ್ಚಳ ಮಾಡುವಂತೆ ಸದಸ್ಯರು ಬೇಡಿಕೆಯಿಟ್ಟಿದ್ದಾರೆ. ಅದರಲ್ಲೂ ಪ್ರಮುಖವಾಗಿ ಮರಣವಂತಿಕೆ. ನಾಲ್ಕು ವರ್ಷದಿಂದ ಮರಣ ನಿಧಿ ಕಟ್ಟಿಲ್ಲ. ಸದ್ಯಕ್ಕೆ ಶೇ.70ರಷ್ಟು ಮಂದಿ 500ರೂ. ವಂತಿಗೆ ಕಟ್ಟಿದ್ದಾರೆ. ಇನ್ನೂ ಶೇ.30ರಷ್ಟು ಮಂದಿ ಕಟ್ಟಬೇಕು. ಅವರಿಗೆ ಡಿ.31ರವರೆಗೆ ಅವಕಾಶ ನೀಡಲಾಗುತ್ತಿದೆ. ಪ್ರತಿ ಸದಸ್ಯರೂ ಈ ಅವಧಿಯಲ್ಲಿ ಮರಣ ನಿಧಿ ಕಡ್ಡಾಯವಾಗಿ ಕಟ್ಟುವಂತೆ ಜಾಗೃತಿ ಮೂಡಿಸಲಾಗುವುದು. ಅನಂತರ ಮರಣನಿಧಿ ವಂತಿಗೆ ಕಟ್ಟದವರಿಗೆ ಸ್ಥಗಿತಗೊಳಿಸುವ ಬಗ್ಗೆ ಒಮ್ಮತದ ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು.

ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ ಮಾತನಾಡಿ, 119 ವರ್ಷಗಳ ಇತಿಹಾಸವಿರುವ, ಮೈಸೂರು ಭಾಗದಲ್ಲೇ ಅತ್ಯಂತ ಹೆಚ್ಚು ಸದಸ್ಯರನ್ನು ಹೊಂದಿರುವ ಬ್ಯಾಂಕಿನ ವಾರ್ಷಿಕ ಮಹಾಸಭೆ ಹಬ್ಬದಂತೆ ಸಂಭ್ರಮದಿಂದ ನಡೆದಿದೆ. ಆರು ತಿಂಗಳಿಂದ ಹೊಸದಾಗಿ ಚುನಾಯಿತರಾಗಿ ಬಂದ ಬೋರ್ಡ್, ಸದಸ್ಯರ ಮನೆ ಬಾಗಿಲಿಗೆ ಸೌಲಭ್ಯವನ್ನು ಕೊಂಡು ಹೋಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಲಾಭದಲ್ಲೇ ಪ್ರತಿ ವರ್ಷ ಬ್ಯಾಂಕ್ ನಡೆಯುತ್ತಿದ್ದು, ಎನ್‌ಪಿಎ ವಿಚಾರದಲ್ಲಿ ಉತ್ತಮವಾಗಿದ್ದೇವೆ ಎಂದರು.

ವಹಿವಾಟು ಹೆಚ್ಚಿಸುವ ನಿಟ್ಟಿನಲ್ಲಿ ಯುಪಿಐ ಸೌಲಭ್ಯ ಸಹ ಜಾರಿಗೆ ತಂದಿದ್ದೇವೆ. ಹೆಚ್ಚಿನ ಡಿವಿಡೆಂಡ್ ಕೊಡಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್.ಬಿ.ಎಂ. ಮಂಜು, ಎನ್.ಯೋಗನಂದ, ಜಿ. ನಿರಂಜನ್, ಎಚ್.ಹರೀಶ್‌ಕುಮಾರ್, ಆರ್.ರವಿಕುಮಾರ್(ರಾಜಕೀಯ), ಆರ್.ಸೋಮಣ್ಣ, ಕೆ.ಗಿರೀಶ್, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ಎಂ.ಪ್ರಮೀಳ, ವೃತ್ತಿಪರ ನಿರ್ದೇಶಕರಾದ ಎಂ.ವೈ. ರಮೇಶ್‌ಗೌಡ, ಸಿ.ಎಸ್.ರಾಮಕೃಷ್ಣಯ್ಯ, ಕಾರ್ಯದರ್ಶಿ ಕೆ. ಹರ್ಷಿತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಸಚಿವರಿಗೆ ಸನ್ಮಾನ...



ಕಲಾಮಂದಿರದಲ್ಲಿ ನಡೆದ ಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ರಾಜ್ಯ ಅಧ್ಯಕ್ಷ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎನ್.ಸೋಮು, ನಗರ ಸಂಚಾಲಕ ಲಕ್ಷ್ಮೀನಾರಾಯಣ್, ರಾಮು, ರವಿಕುಮಾರ್, ವಿನೋದ್‌ರಾಜ್, ಅಶೋಕ್, ಶ್ರೀಕಾಂತ್ ಸನ್ಮಾನಿಸಿದರು.

ಅಭಿನಂದನೆ...



ವಿಧಾನಪರಿಷತ್ ಸದಸ್ಯರಾಗಿ ಇತ್ತೀಚೆಗೆ ಪ್ರಮಾಣವಚನ ಸ್ವೀಕರಿಸಿದ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಅವರನ್ನು ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಬಳಗದ ಸಂಚಾಲಕ ಭರತ್ ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ವೆಂಕಟರಾಜು, ಮುಡಾ ಮಾಜಿ ಸದಸ್ಯ ಸಿ.ಜೆ.ಶಿವಕುಮಾರ್, ಶಿವಸ್ವಾಮಿ, ಗಿರೀಶ್ ಇನ್ನಿತರರಿದ್ದರು.



ಅಭಿನಂದನೆ...

ಆಸ್ಟ್ರೇಲಿಯಾದ ಮೊನಾಶ್ ವಿಶ್ವವಿದ್ಯಾಲಯದಲ್ಲಿ ಡೇಟಾ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ, ಪ್ರಮಾಣ ಪತ್ರ ಪಡೆದ ಪುತ್ರಿಯನ್ನು ಕೆ.ಆರ್.ಬ್ಯಾಂಕ್ ಬಸವರಾಜು (ಬಸಪ್ಪ) ದಂಪತಿ ಅಭಿನಂದಿಸಿದರು.

ವಾರ್ಷಿಕ ಮಹಾಸಭೆ...



ಮೈಸೂರು ತಾಲೂಕು ಸಿದ್ದರಾಮನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಸಿದ್ದರಾಮ.ಎಸ್ ಉದ್ಘಾಟಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಶಿವಚಂದ್ರ, ಸದಸ್ಯರಾದ ಸುರೇಶ, ರಮೇಶ, ನಾಗೇಶ, ಮಾದೇಶ, ಮಹಾದೇವ, ಶಿವಕುಮಾರ್, ದೊಳ್ಳಯ್ಯ, ಭಾರತಿ, ಲತಾ ಹಾಗೂ ಸಿಬ್ಬಂದಿಗಳಾದ ರಮೇಶ, ಲೋಕೇಶ, ಮಧು ಇನ್ನಿತರರಿದ್ದರು.

ಇಂದು ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮ

ಮೈಸೂರು, ಸೆ.15– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ) ಹಾಗೂ ಕರ್ನಾಟಕ ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟ ಸಹಯೋಗದಲ್ಲಿ ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ಮಂಗಳವಾರ(ಸೆ.16) ಬೆಳಗ್ಗೆ 11ಕ್ಕೆ ಕರಾಮುವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಶ್ರೀರಂಗಪಟ್ಟಣ ಬೇಬಿಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಮಹನ್ನೋತಿ ವಿಜ್ಞಾನಿ ಡಾ.ಎಸ್.ವಿ.ಶರ್ಮ, ತ್ರಿಸ್ಕಂದ ಜ್ಯೋತಿರ್ ವಿದ್ವಾನ್ ಸಿದ್ಧಾಂತಿ ಡಾ.ಕೆಮುಟ್ಟು ಹೊನ್ನಯ್ಯ, ಶಾಸ್ವತಿ ಧಾರ್ಮಿಕ ಕ್ರಿಯಾ ಸಮಿತಿಯ ಖ್ಯಾತ ಜ್ಯೋತಿಷಿ ಡಾ.ಭಾನು ಪ್ರಕಾಶ್ ಶರ್ಮ, ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎನ್.ಅನಂತ ರಾಘವನ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಲಯ ಮಟ್ಟದ ಪಂದ್ಯಾವಳಿ...



ಮೈಸೂರಿನ ಸರಸ್ವತಿಪುರಂನ ರೋಟರಿ ವೆಸ್ಟ್ ಶಾಲೆಯ ವಿದ್ಯಾರ್ಥಿನಿಯರು ವಲಯ 1ರ 14 ವರ್ಷದೊಳಗಿನ ವಾಲಿಬಾಲ್‌ನಲ್ಲಿ ಪ್ರಥಮ ಹಾಗೂ ಥ್ರೋಬಾಲ್‌ನಲ್ಲಿ ರನ್ನರ್ ಅಪ್ ಆದರು. ದೈಹಿಕ ಶಿಕ್ಷಣ ಶಿಕ್ಷಕ ನಾಗರಾಜ್ ಮತ್ತಿತರರಿದ್ದರು.

ಸೈಕಲ್ ಜಾಥಾ ಮೂಲಕ ಪ್ರಜಾಪ್ರಭುತ್ವ ಜಾಗೃತಿ



ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲಾ ಮಟ್ಟದ ಸೈಕಲ್ ಜಾಥಾ ನಡೆಸಲಾಯಿತು.

ಮೈಸೂರು, ಸೆ.15(ಎಂಕೆ)–'ನನ್ನ ಮತ ನನ್ನ ಹಕ್ಕು', 'ಮತದಾನವೇ ಪ್ರಜೆಗಳ ಶಕ್ತಿ', 'ಮತದಾನ ಪ್ರಜಾಪ್ರಭುತ್ವದ ಅತಿ ದೊಡ್ಡ ಶಕ್ತಿ' ಎಂಬಿತ್ಯಾದಿ ಜಾಗೃತಿ ಫಲಕಗಳನ್ನು ಹಿಡಿದು ಟ್ರಿಣ್ ಟ್ರಿಣ್ ಸೈಕಲ್ ಏರಿದ ನೂರಾರು ವಿದ್ಯಾರ್ಥಿಗಳು ನಗರದೆಲ್ಲೆಡೆ ಜಾಥಾ ನಡೆಸಿ 'ಪ್ರಜಾಪ್ರಭುತ್ವದ'ದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಪಂ ಹಾಗೂ ನಗರಪಾಲಿಕೆ ವತಿ ಯಿಂದ 'ನನ್ನ ಮತ ನನ್ನ ಹಕ್ಕು' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಬೃಹತ್ ಸೈಕಲ್ ಜಾಥಾದಲ್ಲಿ ಪ್ರಜಾಪ್ರಭುತ್ವ, ಮತದಾನದ ಮಹತ್ವ ತಿಳಿಸಲಾಯಿತು.

ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಆರಂಭವಾದ ಸೈಕಲ್ ಜಾಥಾ, ನಜರ್‌ಬಾದ್ ಪೊಲೀಸ್ ಠಾಣೆ, ಹಾರ್ಡಿಂಜ್ ಸರ್ಕಲ್, ಕೆ.ಆರ್.ಸರ್ಕಲ್‌ನಿಂದ ಡಿ.ದೇವರಾಜ ಅರಸು ರಸ್ತೆ ಮಾರ್ಗವಾಗಿ ಜೆಎಲ್‌ರಸ್ತೆ ಮೂಲಕ ಮೆಟ್ರೋಪೋಲ್ ಸರ್ಕಲ್, ರೈಲ್ವೆ ನಿಲ್ದಾಣ, ಇರ್ವಿನ್ ರಸ್ತೆ ಮೂಲಕ ಅಶೋಕ ರಸ್ತೆ ಮಾರ್ಗವಾಗಿ ಟೌನ್ ಹಾಲ್‌ವರೆಗೆ ಸಾಗಿ ಮುಕ್ತಾಯಗೊಂಡಿತು.

ಬೈಕ್ ರ್‍ಯಾಲಿ: ಇದಕ್ಕೂ ಮುನ್ನ ಮೈಸೂರಿನಿಂದ ಬೆಂಗಳೂರಿಗೆ ಹೊರಟ 10 ಜನರ ಬೈಕ್ ರ್‍ಯಾಲಿಗೂ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ ಚಾಲನೆ ನೀಡಿದರು. ಜಿಲ್ಲಾ ಪಂಚಾಯತಿ ಸಿಇಓ ಎಸ್.ಯುಕೇಶ್‌ಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೋದಿ ಭೇಟಿ ಮರುದಿನ ಮಣಿಪುರದಲ್ಲಿ ಕುಕಿ ನಾಯಕನ ಮನೆಗೆ ಬೆಂಕಿ



ಚುರಾಚಂದ್‌ಪುರ: ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡಿದ ಮಾರನೇ ದಿನವೇ ಚುರಾಚಂದ್‌ಪುರ ಜಿಲ್ಲೆಯಲ್ಲಿ ಗುಂಪೊಂದು ಕುಕಿ ನಾಯಕನ ಮನೆಗೆ ಬೆಂಕಿ ಹಚ್ಚಿದ್ದು, ಉದ್ವಿಗ್ನ ಪರಿಸ್ಥಿತಿ ಇದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕುಕಿ ರಾಷ್ಟ್ರೀಯ ಸಂಘಟನೆ(ಕೆಎನ್‌ಓ) ನಾಯಕ ಕ್ಯಾಲ್ವಿನ್ ಐಖೆಂಥಂಗ್ ಅವರ ನಿವಾಸವನ್ನು ಭಾನುವಾರ ತಡರಾತ್ರಿ ಸುಟ್ಟುಹಾಕಲಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ, ಚುರಾಚಂದ್‌ಪುರದ ಸ್ಥಳೀಯರ ಒಂದು ಗುಂಪು, ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಹೇಳಿಕೊಂಡಿದೆ. ಕೆಎನ್‌ಓ, ಕೇಂದ್ರ ಸರ್ಕಾರದೊಂದಿಗಿನ ಕಾರ್ಯಾಚರಣೆಗಳ ಅಮಾನತು(ಎಸ್‌ಓಓ) ಒಪ್ಪಂದಕ್ಕೆ ಸಹಿ ಹಾಕಿದೆ. ಪ್ರಧಾನಿ ನರೇಂದ್ರ ಮೋದಿ ಸಂಘರ್ಷ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ ಒಂದು ದಿನದ ನಂತರ ಈ ದಾಳಿ ನಡೆದಿದೆ. ಕುಕಿ ಝೋ ಕೌನ್ಸಿಲ್ (ಕೆಜೆಡ್‌ಸಿ) ಮತ್ತು ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆ(ಐಟಿಎಲ್‌ಎಫ್) ವಕ್ತಾರರಾಗಿರುವ ಮತ್ತೊಬ್ಬ ಕುಕಿ ನಾಯಕಿ ಗಿಂಜಾ ವುಲ್‌ಜಾಂಗ್ ಅವರ ನಿವಾಸಕ್ಕೂ ದುಷ್ಕರ್ಮಿಗಳು ಬೆಂಕಿ ಹಚ್ಚಲು ಯತ್ನಿಸಿದರು. ಆದರೆ ಸ್ಥಳೀಯರ ಸಕಾಲಿಕ ಮಧ್ಯಪ್ರವೇಶದ ನಂತರ ಮನೆಗೆ ಬೆಂಕಿ ಹಚ್ಚುವುದನ್ನು ತಡೆದಿದ್ದಾರೆ ಎಂದು ತಿಳಿದುಬಂದಿದೆ.

ಮತಗಳ್ಳತನಕ್ಕೆ ಅವಕಾಶ ಮಾಡಿಕೊಡಬೇಡಿ...!

• ರಾಜ್ಯದ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ • 'ನನ್ನ ಮತ ನನ್ನ ಹಕ್ಕು' ಶಕ್ತಿ ದುರ್ಬಲಗೊಳಿಸುವ ಯತ್ನ • ವಿಧಾನಸೌಧದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಬೆಂಗಳೂರು, ಸೆ.15(ಕೆಎಂಶಿ)–ಮತಗಳ್ಳತನಕ್ಕೆ ಅವಕಾಶ ನೀಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನತೆಗೆ ಇಂದಿಲ್ಲಿ ಕರೆ ನೀಡಿದ್ದಾರೆ.

ಎಲ್ಲರಿಗೂ ಸಮಾನ ಅವಕಾಶಗಳು ದೊರೆತಾಗ ಮಾತ್ರ ರಾಷ್ಟದಲ್ಲಿ ಬದಲಾವಣೆ ಸಾಧ್ಯ. ಇದನ್ನು ಅರಿತು ನಮ್ಮ ಹಕ್ಕನ್ನು ಚಲಾಯಿಸಬೇಕಿದೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನದ ರಕ್ಷಣೆ ಎಲ್ಲ ನಾಗರಿಕರ ಜವಾಬ್ದಾರಿ, ಪ್ರಜಾಪ್ರಭುತ್ವ ರಕ್ಷಣೆಯಿಂದ ದೇಶದ ಜನರ ರಕ್ಷಣೆ ಸಾಧ್ಯ ಎಂದರು.

ಪ್ರಜಾಪ್ರಭುತ್ವ ದಿನಾಚರಣೆ ಘೋಷವಾಕ್ಯ 'ನನ್ನ ಮತ ನನ್ನ ಹಕ್ಕು', ಈ ಶಕ್ತಿ ದುರ್ಬಲಗೊಳಿಸುವ ಹುನ್ನಾರ ಪಟ್ಟಭದ್ರ ಹಿತಾಸಕ್ತಿಗಳಿಂದ ನಡೆದಿದೆ, ಶ್ರೀಮಂತರಿಗೆ ಅಧಿಕಾರ ದೊರೆಯುವ ಕಾಲವೊಂದಿತ್ತು, ಈಗ ಶ್ರೀಮಂತ, ಬಡವ, ಬಲ್ಲಿದ ಎಂಬ ಭೇದವಿಲ್ಲದೆ ಎಲ್ಲರಿಗೂ ಒಂದು ಮತಾಧಿಕಾರ ನೀಡಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ 'ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ' ಎಂದಿದ್ದನ್ನು ದುರುಪಯೋಗಪಡಿಸಿಕೊಂಡು ಸಂವಿಧಾನ ದುರ್ಬಲಗೊಳಿಸುವ ಕುತಂತ್ರ ನಡೆಯುತ್ತಿದೆ. ಇದನ್ನು ತಡೆಯಬೇಕಿದೆ, ಈ ಕರ್ತವ್ಯವನ್ನು ಎಲ್ಲರೂ ತಪ್ಪದೇ ನಿರ್ವಹಿಸಬೇಕು.

ದೇಶದಲ್ಲಿ ವಿವಿಧ ಜಾತಿ–ಧರ್ಮಗಳ ವ್ಯವಸ್ಥೆಯಿದೆ.



ಬಹುಸಂಸ್ಕೃತಿಯ ದೇಶದಲ್ಲಿ ವಿವಿಧತೆಯಲ್ಲಿ ಏಕತೆ ಕಾಪಾಡಲು ಪ್ರಜಾಪ್ರಭುತ್ವ ವ್ಯವಸ್ಥೆ ತರಲಾಗಿದೆ. ಜಾತಿ ವ್ಯವಸ್ಥೆಯಿಂದ ಅಸಮಾನತೆ ಉಂಟಾಗಿದೆ. ಡಾ.ಬಿ.ಆರ್. ಅಂಬೇಡ್ಕರ್, ದೇಶದಲ್ಲಿ ಜನರಿಗೆ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸ್ವಾತಂತ್ರ್ಯ ಯಶಸ್ವಿಯಾಗುತ್ತದೆ ಎಂದಿದ್ದರು.

ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿದ ಬಸವಣ್ಣ ಪ್ರಜಾಪ್ರಭುತ್ವ ಪರಿಕಲ್ಪನೆಗೆ ಜೀವ ತುಂಬಿದ್ದರು, ಅತ್ಯಂತ ತಳಸಮುದಾಯದ ಅಲ್ಲಮ ಪ್ರಭು ಅನುಭವ ಮಂಟಪದ ಅಧ್ಯಕ್ಷರಾಗಿದ್ದರು. ಮಹಿಳೆಯರೂ ಸೇರಿದಂತೆ ಸಮಾಜದ ಎಲ್ಲ ವರ್ಗದವರು ಪ್ರಾತಿನಿಧ್ಯ ಹೊಂದಿದ್ದರು, ಎಲ್ಲ ವರ್ಗದವರ ಅಭಿಪ್ರಾಯಕ್ಕೆ ಬೆಲೆ ದೊರಕುವುದೋ ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿತವಾಗಿದೆ ಎನ್ನಬಹುದು.

ಜಾತಿ ವ್ಯವಸ್ಥೆಗೆ ಚಲನೆಯಿಲ್ಲದೇ, ಸಮಾಜದಲ್ಲಿ ಆಳವಾಗಿ ಬೇರೂರಿದೆ, ಆರ್ಥಿಕ, ಸಾಮಾಜಿಕ ಸಮಾನತೆ ತರದೇ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯವಿಲ್ಲ, ಎಲ್ಲರಿಗೂ ಸಮಾನ ಅವಕಾಶಗಳು ದೊರೆತಾಗ ಮಾತ್ರ ಬದಲಾವಣೆ ಸಾಧ್ಯ.

ಹಿಂದಿನಿಂದಲೂ ಮಹಿಳೆಯರು, ಶೂದ್ರರು ಅಕ್ಷರ ಸಂಸ್ಕೃತಿ ಹಾಗೂ ಅವಕಾಶಗಳಿಂದ ವಂಚಿತರಾದ ಕಾರಣ, ಅಸಮಾನತೆ ತಲೆದೋರಿದೆ. ಡಾ.ಅಂಬೇಡ್ಕರ್ ಸಹಿಷ್ಣುತೆ ಹಾಗೂ ಸಹಬಾಳ್ವೆ ಬೋಧಿಸಿದರು, ಸಮಾಜದಲ್ಲಿ ಬಹುಸಂಖ್ಯಾತರು ಎಚ್ಚರದಿಂದಿರಬೇಕು ಎಂದರು.

ಅಧಿಕಾರ ಉಳಿಸಿಕೊಳ್ಳಲು ಮತಗಳ್ಳತನದ ಹಾದಿ ಹಿಡಿದಿದ್ದಾರೆ. ಆದ್ದರಿಂದ 'ನನ್ನ ಮತ ನನ್ನ ಹಕ್ಕು' ಎಂಬುದು ಪ್ರಮುಖವಾಗಿದೆ, ಮತಗಳ ದುರುಪಯೋಗವಾಗಬಾರದು.

ಸಂವಿಧಾನಕ್ಕೆ ಧಕ್ಕೆ ತರಲು ಮನುವಾದಿಗಳು ಪ್ರಯತ್ನಿಸುತ್ತಿದ್ದಾರೆ, ಸ್ವಾತಂತ್ರ್ಯ ಬಂದಾಗಿನಿಂದ ಸಂವಿಧಾನ ವಿರೋಧಿಗಳು ಇದ್ದಾರೆ. ಅಸಮಾನತೆ ನಿವಾರಣೆಯಾದರೆ ಶೋಷಣೆ ಸಾಧ್ಯವಿಲ್ಲ ಸಾಹಿತಿ ಬಾನು ಮುಷ್ತಾಕ್ ಅನ್ಯಧರ್ಮದವರೆಂದು ದಸರಾ ಉದ್ಘಾಟಿಸಬಾರದೆಂದು ವಿರೋಧ ವ್ಯಕ್ತಪಡಿಸಲಾಗುತ್ತಿದೆ. ಸಹಿಷ್ಣುತೆ ಹಾಗೂ ಸಹಬಾಳ್ವೆಯನ್ನು ಎಲ್ಲರೂ ರೂಢಿಸಿಕೊಳ್ಳಬೇಕು. ಜಾತಿ ಧರ್ಮ, ವರ್ಗ ವ್ಯವಸ್ಥೆ ಮೀರಿ, ಸಮಾನತೆ ನೆಲೆಸಬೇಕೆಂದು ಸಂವಿಧಾನ ಸ್ಪಷ್ಟವಾಗಿ ಹೇಳಿದೆ.

ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನಿಂದ ಶಿಕ್ಷಕರ ದಿನಾಚರಣೆ

ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗೆ ಶಿಕ್ಷಕರು ಉತ್ತರಿಸಿದರೆ ವಿದ್ಯಾರ್ಥಿಗಳು–ಶಿಕ್ಷಕರ ನಡುವೆ ಉತ್ತಮ ಬಾಂಧವ್ಯ ವೃದ್ಧಿ



ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ ಭಾನುವಾರ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಸೆ.15 (ಜಿಎ)–ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗೆ ಶಿಕ್ಷಕರು ಉತ್ತರಿಸಿದಾಗ ಮಾತ್ರ ಶಿಕ್ಷಕರೂ ಮತ್ತು ವಿದ್ಯಾರ್ಥಿಗಳ ನಡುವೆ ಉತ್ತಮ ಬಾಂಧವ್ಯ ವೃದ್ಧಿಯಾಗಲಿದೆ ಎಂದು ಶಿಕ್ಷಣ ತಜ್ಞೆ ಭ್ರಮರ ಬಹದ್ದೂರ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ವಿಶೇಷ ಮಹತ್ವವಿದೆ. ತಾಯಿ ಮಗುವಿನ ಮೊದಲ ಗುರುವಾದರೂ, ನಿಜವಾಗಿಯೂ ಮಗುವಿಗೆ ಪ್ರಾಥಮಿಕವಾಗಿ ಶಿಕ್ಷಕರ ಜೊತೆಗೆ ಒಡನಾಟವಾದಾಗ ಸಾಮಾಜಿಕ ಪ್ರಜ್ಞೆ ಮೂಡಿ, ಸಮಾಜಕ್ಕೆ ಪರಿಚಯಿಸುತ್ತಾರೆ ಎಂದರು.

ಮಗುವಿನ ಮನಸ್ಸು ಬಿಳಿ ಹಾಳೆ ಇದ್ದಂತೆ. ಪ್ರಾಥಮಿಕ ಶಿಕ್ಷಣದಿಂದ ಮಾಧ್ಯಮಿಕ ಹಂತಕ್ಕೆ ಬಂದಾಗ ಬೇರೆ ರೂಪ ಮೂಡುತ್ತದೆ. ಅದಕ್ಕಾಗಿ ಪೋಷಕರು ಪ್ರತಿಯೊಂದಕ್ಕೂ ಪ್ರೋತ್ಸಾಹ ನೀಡಬೇಕು. ಇದ್ದರಿಂದ ದೊಡ್ಡವರಿಗಿಂತಲೂ ಅವಲೋಕನ ಶಕ್ತಿ ಹೆಚ್ಚಿರುತ್ತದೆ. ಪ್ರೌಢ ಶಿಕ್ಷಣ ಸಂದರ್ಭದಲ್ಲಿ ಗುರು ಹೇಳಿಕೊಡುವುದು, ಮಕ್ಕಳು ಕೇಳಿ ತಿಳಿದುಕೊಳ್ಳುವುದು ಶಿಷ್ಯನ ಕೆಲಸವಾಗಿದೆ ಎಂದು ತಿಳಿಸಿದರು.

ನಂತರ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಕುರಿತು ಮಾತನಾಡಿ, ರಾಧಾಕೃಷ್ಣನ್ ಅವರು ತತ್ವಶಾಸ್ತ್ರವನ್ನು ಪಾಶ್ಚಾತ್ಯ ದೇಶಕ್ಕೂ ಪಸರಿಸಿದರು. ವಿದೇಶಿಗರಿಗೆ ಅದರ ಆಳ ಅಗಲವನ್ನು ಪರಿಚಯಿಸಿದ ನಂತರ ತತ್ವಶಾಸ್ತ್ರದ ಮಹತ್ವದ ಬಗ್ಗೆ ತಿಳಿಯಿತು ಎಂದರು.

ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುವಾಗ ವಿದ್ಯಾರ್ಥಿಗಳ ಪ್ರೀತಿ ಪಾತ್ರರಾದ ಶಿಕ್ಷಕರಾಗಿದ್ದ ಅವರು ಸರಳ ವ್ಯಕ್ತಿತ್ವ ರೂಢಿಸಿಕೊಂಡಿದ್ದರು. ಮೈಸೂರಿನಿಂದ ಕೊಲ್ಕತ್ತಾ ವಿವಿಗೆ ವರ್ಗಾವಣೆಗೊಂಡಾಗ ಅವರ ಶಿಷ್ಯವೃಂದ ಅವರನ್ನು ಮಹಾರಾಜ ಕಾಲೇಜಿನಿಂದ ರೈಲ್ವೆ ನಿಲ್ದಾಣದವರೆಗೆ ನಡೆಸಿದ ಅದ್ದೂರಿ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಸಾರೋಟಿಗೆ ಕುದುರೆ ಕಟ್ಟದೇ ತಾವೇ ಎಳೆಯುವ ಮೂಲಕ ವಿಶೇಷವಾಗಿ ಗೌರವ ಸಲ್ಲಿಸಿದರು ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಕೈವಲ್ಯ ಅರಸ್, ನಿರಂಜನ್ ಕೊರಾನಿ, ಲಾವಣ್ಯ ಅರಸ್, ಚೆನ್ನರಾಜೇ ಅರಸ್, ಮಾಧವಿ ಅವರಿಗೆ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ನೀಡಿ ಅಭಿನಂದಿಲಾಯಿತು. ಈ ಸಂದರ್ಭದಲ್ಲಿ ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿಯರಿಂಗ್ ಅಧ್ಯಕ್ಷ ಡಾ.ಆರ್. ದೀಪ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚುಟಕು ಯುಗಾಚಾರ್ಯ ಡಾ.ಎಂಜಿ.ಆರ್, ಅರಸ್, ಹೆಚ್.ಡಿ.ಕೋಟೆ ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಟ್ರಸ್ಟ್ ಅಧ್ಯಕ್ಷೆ ಡಾ.ಇಂದುಕಲಾ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಿನ ವಿವಿಧೆಡೆ ಮಹಾ ರಕ್ತದಾನ ಅಭಿಯಾನ

ಮೈಸೂರು,ಸೆ.15(ಎಂಟಿವೈ)– 'ರಕ್ತದಾನ ಅಮೃತ ಮಹೋತ್ಸವ 2.0' ಮಹಾ ಸಪ್ತಾಹದ ಅಂಗವಾಗಿ ಮೈಸೂರಿನ ವಿವಿಧೆಡೆ ಸೆ.17ರಂದು 'ಮಹಾ ರಕ್ತದಾನ' ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಮೈಸೂರು ಮತ್ತು ಅಖಿಲ ಭಾರತ ತೇರಾಪಂತ್ ಯುವಕ ಮಂಡಳಿ ಸಹಯೋಗದಲ್ಲಿ ಮಹಾ ಸಪ್ತಾಹವನ್ನು ಜಿಲ್ಲೆಯಾದ್ಯಂತ ಆಯೋಜಿಸಲಾಗಿದೆ. ಸೆ.17ರಂದು ಬೆಳಗ್ಗೆ 8 ರಿಂದ ಸಂಜೆ 4ರವರೆಗೆ ನಗರದ 16 ಕಡೆ ಹಾಗೂ ಹೆಚ್.ಡಿ. ಕೋಟೆ, ಕೆ.ಆರ್. ನಗರ, ಪಿರಿಯಾಪಟ್ಟಣ ಸೇರಿದಂತೆ ವಿವಿಧೆಡೆ ಈ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಲಿದೆ.

ರಕ್ತದಾನ ಮಾಡಲು ಆಗಮಿಸುವವರಿಗೆ ಹಣ್ಣು, ಜ್ಯೂಸ್, ಬಿಸ್ಕೆಟ್, ಪ್ರಮಾಣಪತ್ರ ನೀಡಲಾಗುವುದು. ಈ ಅಭಿಯಾನದಲ್ಲಿ ಒಂದೂವರೆ ಸಾವಿರ ಯೂನಿಟ್ ರಕ್ತ ಸಂಗ್ರಹಿಸುವ ಉದ್ದೇಶವಿದೆ. ಗೋಷ್ಠಿಯಲ್ಲಿ ರೋಟರಿ ಸಂಸ್ಥೆ ಪದಾಧಿಕಾರಿಗಳಾದ ಚಿರಾಗ್, ಮುಕೇಶ್, ಪ್ರಮೋದ್, ರವಿಶಂಕರ್, ಸಂಜಯ್ ಇದ್ದರು.

ಅಪಾರ್ಟ್‌ಮೆಂಟ್‌ನ ಮಹಡಿಯಿಂದ ಹಾರಿ ಎಂಜಿನಿಯರ್ ಆತ್ಮಹತ್ಯೆ

ಬೆಂಗಳೂರು, ಸೆ.15–ಭಾರತೀಯ ವಾಯುಪಡೆಯ ಎಂಜಿನಿಯರ್ ಒಬ್ಬರು ಭಾನುವಾರ ಸಂಜೆ ಅಪಾರ್ಟ್‌ಮೆಂಟ್‌ನ 24ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಮೃತನನ್ನು ಹಲಸೂರು ಮಿಲಿಟರಿ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿದ್ದ 25 ವರ್ಷದ ಲೋಕೇಶ್ ಪವನ್ ಕೃಷ್ಣ ಎಂದು ಗುರುತಿಸಲಾಗಿದೆ.

ಬೆಂಗಳೂರಿನ ಪ್ರೆಸ್ಟೀಜ್ ಜಿಂದಾಲ್ ಸಿಟಿ ಅಪಾರ್ಟ್‌ಮೆಂಟ್‌ನ 24 ನೇ ಮಹಡಿಯಿಂದ ಲೋಕೇಶ್ ಜಿಗಿದಿದ್ದಾರೆ. ನಿನ್ನೆ ಸಂಜೆ ಲೋಕೇಶ್ ತಮ್ಮ ಸಹೋದರಿ ಲಕ್ಷ್ಮಿ ಅವರನ್ನು ಭೇಟಿ ಮಾಡಿದ್ದರು. ಯಾವುದೋ ವಿಷಯದಿಂದ ಅವರ ಮನಸ್ಥಿತಿ ಹಾಳಾಗಿತ್ತು. ಆ ಕ್ಷಣದಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬಗ್ಗೆ ತಿಳಿದ ಪೊಲೀಸರು ಮೃತದೇಹವನ್ನು ವಶಕ್ಕೆ ಪಡೆದು, ಮರಣೋತ್ತರ ಪರೀಕ್ಷೆಗಾಗಿ ನೆಲಮಂಗಲ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಿದ್ದಾರೆ. ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಹೈನುಗಾರಿಕೆಯನ್ನು ಮುಖ್ಯ ಕಸುಬಾಗಿಸಿ ಅಭಿವೃದ್ಧಿ ಹೊಂದಿ

● ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಸಲಹೆ ● ನೂತನ ಬಿಎಂಸಿ, ಡೇರಿ ಕಟ್ಟಡಕ್ಕೆ ಗುದ್ದಲಿ ಪೂಜೆ

ತಿ.ನರಸೀಪುರ, ಸೆ.15– ರೈತರು ವ್ಯವಸಾಯದ ಜೊತೆಗೆ ಉಪ ಕಸುಬನ್ನಾಗಿ ಮಾಡಿಕೊಂಡಿರುವ ಹೈನುಗಾರಿಕೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಳ್ಳುವ ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಸಲಹೆ ನೀಡಿದರು.

ತಾಲೂಕಿನ ಕಗ್ಗಲೀಪುರದಲ್ಲಿ ನೂತನ ಬಿಎಂಸಿ ಕೇಂದ್ರದೊಂದಿಗೆ ನಿರ್ಮಿಸಲಾಗುವ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಸಂಘದಿಂದ ಆಯೋಜಿಸಿದ್ದ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮದ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಡೈರಿ ಕಟ್ಟಡ ಶಿಥಿಲವಾಗಿದ್ದ ಹಿನ್ನೆಲೆಯಲ್ಲಿ ನೂತನ ಕಟ್ಟಡಕ್ಕೆ ಮೊದಲಿನಿಂದಲೂ ಒತ್ತಾಯ ಕೇಳಿ ಬಂದಿತ್ತು. ಇದೀಗ ನೂತನ ಕಟ್ಟಡಕ್ಕೆ ಕಾಲ ಕೂಡಿ ಬಂದಿದ್ದು, ಶಿಥಿಲಗೊಂಡಿರುವ ಹಳೇ ಕಟ್ಟಡ ತೆರವುಗೊಳಿಸಿ ನೂತನ ಕಟ್ಟಡ ನಿರ್ಮಿಸಲು ಒಕ್ಕೂಟವು 10 ಲಕ್ಷ ಹಾಗೂ ಕೆಎಂಎಫ್ 4.5 ಲಕ್ಷ ರೂ. ಅನುದಾನ ನೀಡಿದೆ ಎಂದರು.

ರೈತರು ಎಷ್ಟೇ ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದನೆ ಮಾಡಿದರೂ ಅದಕ್ಕೆ ಮಾರುಕಟ್ಟೆ ದೊಡ್ಡದಿದೆ. ಇಂದು ರೈತ ಬೆಳೆದ ಯಾವುದೇ ಬೆಳೆಗಳಿಗೆ ಬೆಂಬಲ ಬೆಲೆ ದೊರಕುತ್ತಿಲ್ಲ. ಆದರೆ ಹಾಲಿಗೆ ಹೆಚ್ಚಿನ ಲಾಭಾಂಶ ಇಲ್ಲದಿದ್ದರೂ ಯಾವಾಗಲೂ ನಿಖರ ಬೆಲೆ ಇರುತ್ತದೆ. ಹೆಚ್ಚಿನ ಹಾಲು ಮಾರಾಟ ಮಾಡಬಹುದಾಗಿದ್ದು, ಸರಿಯಾದ ಸಮಯಕ್ಕೆ ಹಣ ಸಹ ನೀಡಲಾಗುತ್ತದೆ. ಜೊತೆಗೆ ಸರ್ಕಾರದಿಂದ 5 ರೂ.ಗಳ ಪ್ರೋತ್ಸಾಹ ಧನ ಸಹ ಸಿಗಲಿದ್ದು, ಇದು ನಿಮ್ಮ ಖಾತೆಗೆ ನೇರವಾಗಿ ಜಮೆಯಾಗುತ್ತದೆ. ಹಾಗಾಗಿ ರೈತರು ಗ್ರಾಮಗಳಲ್ಲಿ ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿ, ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಹಕಾರ ಸಂಘಗಳು ಹಾಗೂ ಒಕ್ಕೂಟ ಅಭಿವೃದ್ಧಿ ಹೊಂದಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಕಗ್ಗಲೀಪುರದ ಹಾಲಿನ ಡೇರಿ 35 ವರ್ಷ ಹಳೆಯದಾಗಿದ್ದು, 30 ಲಕ್ಷ ರೂ. ವೆಚ್ಚದಲ್ಲಿ ಹೊಸ ಕಟ್ಟಡ ಕಟ್ಟಲು ನಿರ್ಧರಿಸಿ ಎಸ್ಟಿಮೇಟ್ ಮಾಡಿಸಬೇಕಿದೆ. ನೂತನ ಡೈರಿ ಕಟ್ಟಡದಲ್ಲಿ ಬಿಎಂಸಿ ಕೇಂದ್ರ ಸಹ ಆಗಲಿದ್ದು, ನಮ್ಮ ಒಕ್ಕೂಟದಿಂದ 10 ಲಕ್ಷ ರೂ. ಅನುದಾನ ಕೊಟ್ಟಿದ್ದೇವೆ. ಸೊಸೈಟಿಯಲ್ಲಿ 20 ಲಕ್ಷ ಲಾಭಾಂಶವಿದ್ದು, ಸುಂದರವಾದ ಕಟ್ಟಡ ನಿರ್ಮಾಣವಾಗಲಿದೆ. ಸಹಕಾರ ತತ್ವದಡಿ ಮೈಮುಲ್‌ನಲ್ಲಿ 1500 ಕೋಟಿ ರೂ.ಗೂ ಹೆಚ್ಚಿನ ವಹಿವಾಟು ನಡೆಯುತ್ತಿದ್ದು, ಇದಕ್ಕೆ ರೈತರೇ ಪ್ರಮುಖ ಕಾರಣ. ರೈತರು ಉತ್ಪಾದಿಸಿದ ಹಾಲನ್ನು ನಿರಾಕರಿಸದೇ ಅವರಿಂದ ಹಾಲನ್ನು ಪಡೆದು ಹೆಚ್ಚುವರಿ ಹಾಲನ್ನು ಪೌಡರ್ ಆಗಿ ಪರಿವರ್ತಿಸಿ ಹೊರ ರಾಜ್ಯಗಳಿಗೆ ಮಾರಾಟ ಮಾಡಿ ಲಾಭ ಇರಲಿ, ನಷ್ಟವಾಗಲೀ ರೈತರಿಗೆ ಪ್ರತಿ ಲೀಟರ್ ಹಾಲಿಗೆ 34 ರೂ. ಗಳನ್ನು ನೀಡುತ್ತಿದ್ದೇವೆ. ಬಿಜೆಪಿ ಸರ್ಕಾರವಿದ್ದಾಗ ಲೀಟರ್ ಹಾಲಿಗೆ 2 ರೂ. ಹಾಗೂ ನಂತರದಲ್ಲಿ ಬಂದ ಕಾಂಗ್ರೆಸ್ ಸರ್ಕಾರ 3 ರೂ. ಪ್ರೋತ್ಸಾಹಧನ ಕೊಡಲಾಗುತ್ತಿದ್ದು, ಇದು ಒಕ್ಕೂಟಕ್ಕೆ ಬರದೇ ನೇರವಾಗಿ ರೈತರ ಖಾತೆಗೆ ಜಮೆಯಾಗುತ್ತದೆ ಎಂದರು.

ಸಂಘದ ವಾರ್ಷಿಕ ವರದಿ ಮಂಡಿಸಿದ ಮೈಮುಲ್ ಮೇಲ್ವಿಚಾರಕ ಆರ್.ಪ್ರಮೋದ್ ಪ್ರಸಕ್ತ ಸಾಲಿನಲ್ಲಿ ಸಂಘ 7,07,864 ರೂ. ನಿವ್ವಳ ಲಾಭಗಳಿಸಿದ್ದು, 3,34,137 ರೂ.ಗಳನ್ನು ಬೋನಸ್ ಆಗಿ ವಿತರಿಸಲಾಗುತ್ತದೆ. ಪ್ರತಿ 100 ರೂ. ಹಾಲು ಸರಬರಾಜು ಮಾಡಿದ ಉತ್ಪಾದಕನಿಗೆ 1.36 ರೂ.ಗಳ ಬೋನಸ್ ಸಿಗಲಿದ್ದು, ಆಡಳಿತ ಮಂಡಳಿ ನಿರ್ಧಾರದಂತೆ ಆಯುಧ ಪೂಜೆಗೆ ಬೋನಸ್ ವಿತರಿಸಲಾಗುತ್ತದೆ ಎಂದರು.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಆರ್.ರಾಜೇಶ್, ಉಪಾಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ಕೆ.ಎಂ. ಮಂಜುನಾಥ್, ಎನ್.ಮಹದೇವಸ್ವಾಮಿ, ನಾಗರಾಜು, ಚಿಕ್ಕಸ್ವಾಮಿ, ಕೃಷ್ಣ, ತ್ರಿವೇಣಿ, ಸುಜಾತ, ಪಿಎಸಿಎಸ್ ಅಧ್ಯಕ್ಷ ಎಸ್.ನಾಗರಾಜು, ಬೋರೇಗೌಡ, ಸಂಘದ ಕಾರ್ಯದರ್ಶಿ ಎಂ.ರವಿ, ಬಿಎಂಸಿ ಸಹಾಯಕ ಕೆ.ಕಿರಣ್, ಹಾಲು ಪರೀಕ್ಷಕ ಮಹೇಶ್, ಸಹಾಯಕ ಮಧು ಕುಮಾರ್, ಜವರೇಗೌಡ ಮತ್ತಿತರರಿದ್ದರು.



ಡೇರಿ ನೂತನ ಕಟ್ಟಡ ಕಾಮಗಾರಿಗೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭೂಮಿ ಪೂಜೆ ನೆರವೇರಿಸಿದರು.

ಚೆಲುವರಾಜು, ಓಂ ಪ್ರಕಾಶ್‌ಗೆ ಮತ್ತೆ ಗೆಲುವು!

ಕಗ್ಗಲೀಪುರ ಸಹಕಾರ ಸಂಘದಲ್ಲಿ ಮೊದಲಿನಿಂದ ಯಾವುದೇ ರಾಜಕೀಯ ಸುಳಿದಿಲ್ಲ. ಸಂಘ ಆರಂಭದಿಂದಲೂ ಲಾಭಾಂಶದಲ್ಲೇ ನಡೆಯುತ್ತಿದೆ. ಸಂಘದ ಅಭಿವೃದ್ಧಿಗೆ ಮಾಜಿ ಮೈಮುಲ್ ಅಧ್ಯಕ್ಷ ಓಂ ಪ್ರಕಾಶ್ ಹಾಗೂ ಹಾಲಿ ಅಧ್ಯಕ್ಷ ಚೆಲುವರಾಜು ಸಾಕಷ್ಟು ಸಹಕಾರ ನೀಡಿದ್ದಾರೆ. ಮುಂದೆ ಮೈಮುಲ್ ಚುನಾವಣೆ ನಡೆದರೇ, ಇವರೇ ಗೆದ್ದು ನಿರ್ದೇಶಕರಾಗಿ ಬರುತ್ತಾರೆ. ಬೇರೆ ಹಳಬರಿದ್ದರೂ ಇವರಿಬ್ಬರಿಗೆ ಅಲ್ಲಿ ಒಳ್ಳೆಯ ಹೆಸರಿದೆ. ಮುಂದೆ ಯಾರೇ ಓಟಿಂಗ್ ಪವರ್ ಪಡೆದರೂ ಇವರಿಬ್ಬರಿಗೆ ಬೆಂಬಲ ನೀಡಬೇಕು. ಕಗ್ಗಲೀಪುರ ಡೈರಿಗೆ ನಮ್ಮ ತಂದೆ ದಿ.ಕರೀಗೌಡರು ಮತ್ತು ಮಾಜಿ ಶಾಸಕ ಮಾದೇಗೌಡರು ಶ್ರಮಿಸಿದ್ದು, 4 ದಶಕಗಳಾಗಿವೆ. ಈಗ ಮತ್ತೆ ಶಿಥಿಲಗೊಂಡಿರುವ ಕಟ್ಟಡಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರಿಂದ 20 ಲಕ್ಷಕ್ಕೂ ಹೆಚ್ಚು ಅನುದಾನ ಕೊಡಿಸುವೆ.

–ಕೆ.ವಜ್ರೇಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ, ಸೆ.15– ತಾಲೂಕು ನಾಯಕ ನೌಕರರ ಸಂಘದ ವತಿಯಿಂದ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಪ್ರತಿಭಾವಂತ ನಾಯಕ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.


ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.90, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಶೇ.85 ರಷ್ಟು ಅಂಕಗಳಿಸಿದ ವಿದ್ಯಾರ್ಥಿಗಳು ಅಂಕಪಟ್ಟಿ, ಭಾವಚಿತ್ರ, ಜಾತಿ ಪ್ರಮಾಣ ಪತ್ರ ಮತ್ತು ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಸ್ವವಿವರಗಳೊಂದಿಗೆ ಸೆ.30ರೊಳಗೆ ಅರ್ಜಿಯನ್ನು ಸಂಘದ ಕಚೇರಿಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ಮೊ. 9845959727, 9880159902, 9916017669, 9964460082 ಅನ್ನು ಸಂಪರ್ಕಿಸುವಂತೆ ಸಂಘದ ಅಧ್ಯಕ್ಷ ಸಿದ್ದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.15– ನಂಜನಗೂಡು ತಾಲೂಕು ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಎಂ.ಕೆ.ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಸೆ.19ರಂದು ಮಧ್ಯಾಹ್ನ 12.30ಕ್ಕೆ ನಡೆಯಲಿದೆ. ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆ ಯಶಸ್ವಿಗೊಳಿಸಬೇಕು ಎಂದು ಸಿಇಓ ಹೆಚ್.ಡಿ.ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಹಸಿರಿನಿಂದ ಕಂಗೊಳಿಸಲು ಸರ್ ಎಂ.ವಿಶ್ವೇಶ್ವರಯ್ಯ ಕಾರಣ

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ



ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ ಆಚರಿಸಲಾಯಿತು.

ಬನ್ನೂರು, ಸೆ.15– ಮಂಡ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಹಸಿರಿನಿಂದ ಕಂಗೊಳಿಸುತ್ತಿದ್ದರೆ ಅದಕ್ಕೆ ಸರ್ ಎಂ.ವಿಶ್ವೇಶ್ವರಯ್ಯನವರೇ ಕಾರಣ. ಇವರು ನಾಡು ಕಂಡ ಶ್ರೇಷ್ಠ ವ್ಯಕ್ತಿಯಾಗಿದ್ದು, ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದ್ದಾರೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಎದುರು ಜೈ ಭುವನೇಶ್ವರಿ ಕನ್ನಡ ಮಿತ್ರ ಬಳಗದಿಂದ ಆಯೋಜಿಸಿದ್ದ ವಿಶ್ವೇಶ್ವರಯ್ಯ ಜಯಂತಿಯಲ್ಲಿ ಮಾತನಾಡಿದ ಅವರು, ಭಾರತದ ಶ್ರೇಷ್ಠ ಇಂಜಿನಿಯರ್‌ಗಳಲ್ಲಿ ಒಬ್ಬರಾದ ವಿಶ್ವೇಶ್ವರಯ್ಯನವರು ದಕ್ಷತೆ, ದೂರದೃಷ್ಟಿತ್ವದ ಮೂಲಕ ಜಗತ್ತಿನ ಗಮನವನ್ನೇ ಸೆಳೆದಿದ್ದಾರೆ ಎಂದು ತಿಳಿಸಿದರು.

ವಿಶ್ವೇಶ್ವರಯ್ಯನವರು ಕೆಆರ್‌ಎಸ್, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ, ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ, ಮೈಸೂರು ಸಾಬೂನು ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸ್ವಯಂ ಚಾಲಿತ ಗೇಟ್ ಅಳವಡಿಸಿದ್ದು ಹೀಗೆ ನಾನಾ ಬಗೆಯ ಸಾಧನೆ ಮಾಡಿ ಮೈಸೂರು ಸಂಸ್ಥಾನವನ್ನು ಉನ್ನತೀಕರಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದರು.

ಈ ವೇಳೆ ಬೃಹತ್ ಕೇಕ್ ಕತ್ತರಿಸುವ ಮೂಲಕ ವಿಶ್ವೇಶ್ವರಯ್ಯ ಜನ್ಮದಿನ ಆಚರಿಸಲಾಯಿತು. ಜೈ ಭುವನೇಶ್ವರಿ ಕನ್ನಡ ಮಿತ್ರ ಬಳಗದ ಸದಸ್ಯರು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

ಎಲ್ಲಾ ಜಿಲ್ಲೆಗಳಲ್ಲೂ ಸ್ಯಾಟಲೈಟ್ ಹೃದ್ರೋಗ ಕೇಂದ್ರ ಆರಂಭ

ಜಯದೇವ ಹೃದ್ರೋಗ ಸಂಸ್ಥೆ ನೂತನ ನಿರ್ದೇಶಕ ಡಾ.ಬಿ.ದಿನೇಶ್

ತಿ.ನರಸೀಪುರ, ಸೆ.15– ಭವಿಷ್ಯದಲ್ಲಿ ಹೆಚ್ಚಾಗುವ ಜನಸಂಖ್ಯೆ ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಚಿಕಿತ್ಸೆ ನೀಡಲು ಎಲ್ಲಾ ಜಿಲ್ಲೆಗಳಲ್ಲೂ ಸ್ಯಾಟಲೈಟ್ ಹೃದ್ರೋಗ ಕೇಂದ್ರ ಆರಂಭಿಸಲಾಗುವುದು ಎಂದು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನೂತನ ನಿರ್ದೇಶಕ ಡಾ.ಬಿ.ದಿನೇಶ್ ತಿಳಿಸಿದರು.

ಮೈಸೂರಿನಲ್ಲಿ ಪಟ್ಟಣದ ಯುವ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 2040ರ ವೇಳೆಗೆ ಜನಸಂಖ್ಯೆಯು ಶೇ.15ರಷ್ಟು ಹೆಚ್ಚಾಗುತ್ತದೆ. ಆ ನಿಟ್ಟಿನಲ್ಲಿ ಸಂಸ್ಥೆ ಅಗತ್ಯ ಮೂಲ ಸೌಕರ್ಯ ವೃದ್ಧಿಸಿಕೊಂಡು ಸೇವೆ ವಿಸ್ತರಿಸಿಕೊಳ್ಳಬೇಕಿದೆ. ಜೊತೆಗೆ ಜಿಲ್ಲೆಗೊಂಡು ಸ್ಯಾಟಲೈಟ್ ಹೃದ್ರೋಗ ಕೇಂದ್ರ ಆರಂಭಿಸಲು ಪ್ರಯತ್ನಿಸಲಾಗುವುದು. ಈ ಸಂಬಂಧ ಸರ್ಕಾರದಿಂದ ಅನುಮೋದನೆ ಪಡೆದು ಶೀಘ್ರ ಕಾರ್ಯರೂಪಕ್ಕೆ ತರಲಾಗುವುದು ಎಂದರು.

ರಾಜ್ಯಾದ್ಯಂತ ಪುನೀತ್ ರಾಜ್‌ಕುಮಾರ್ 'ಸ್ಟೆಮಿ' ಯೋಜನೆ ಜಾರಿಯಲ್ಲಿದ್ದು, ತಾಲೂಕು ಹಂತದಲ್ಲಿಯೇ ಹೃದ್ರೋಗಕ್ಕೆ ಪ್ರಾಥಮಿಕ ಚಿಕಿತ್ಸೆ ನೀಡಲಾಗುತ್ತಿದೆ. ಇಲ್ಲಿ 'ಸ್ಟೆಪ್ಟೊಕೈನಸ್' ಮತ್ತು 'ಟೆನೆಕ್ಟಿವ್ ಪ್ಲಸ್' ಎಂಬ ಚುಚ್ಚುಮದ್ದು ನೀಡುವ ಮೂಲಕ ಪ್ರಾಥಮಿಕ ಚಿಕಿತ್ಸೆ ಸಿಗುವಂತೆ ಮಾಡಲಾಗಿದೆ. ಇದರಿಂದ ತಾಲೂಕು ಮಟ್ಟದಲ್ಲಿಯೇ 'ಗೋಲ್ಡನ್ ಅವರ್'ನಲ್ಲಿ ಚಿಕಿತ್ಸೆ ದೊರೆಯುತ್ತಿದೆ. ಇದರಿಂದ ಸಾವಿರಾರು ಹೃದ್ರೋಗಿಗಳ ಜೀವ ಉಳಿದಿದೆ. ಹಾಗಾಗಿ ಈ ಯೋಜನೆಯ ಮತ್ತಷ್ಟು ಬಲವರ್ಧನೆಗೆ ಕ್ರಮ ವಹಿಸಲಾಗುವುದು ಎಂದರು.

ಮೈಸೂರಿನ ಜಯದೇವ ಆಸ್ಪತ್ರೆಗೆ 5 ಜಿಲ್ಲೆಗಳಿಂದ ಜನರು ಹೆಚ್ಚಾಗಿ ಬರುತ್ತಿದ್ದಾರೆ. ಅಲ್ಲದೇ ನೆರೆಯ ಕೇರಳ, ತಮಿಳುನಾಡಿನಿಂದಲೂ ರೋಗಿಗಳು ಬರುತ್ತಿದ್ದಾರೆ. ಆದರೆ ಇಲ್ಲಿ ಶೇ.20ರಷ್ಟು ವೈದ್ಯರು, ಶೇ.18ರಷ್ಟು ದಾದಿಯರು, ಶೇ.15ರಷ್ಟು ಗ್ರೂಪ್ 'ಡಿ' ಸಿಬ್ಬಂದಿ ಕೊರತೆ ಇದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು. ಆಗ ಓಪಿಡಿ ಸೇವೆ ನೀಡುವಲ್ಲಿ ಆಗುತ್ತಿರುವ ವಿಳಂಬ ತಪ್ಪಲಿದೆ ಎಂದರು.

ಈ ವೇಳೆ ಕೆಪಿಸಿಸಿ ಹಿಂದುಳಿದ ವರ್ಗಗಳ ಕಾರ್ಯದರ್ಶಿ ಎಂ.ರಮೇಶ್, ಯುವ ಮುಖಂಡ ಮಹಾದೇವ, ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ, ಪುರಿ ನಟೇಶ್, ಸ್ವಾಮಿ, ದೊರೆಸ್ವಾಮಿ, ಎಂ.ಕೆ.ಸಹದೇವ, ರಾಜಣ್ಣ, ಶಿವು, ಇತರರಿದ್ದರು.



ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಬಿ.ದಿನೇಶ್ ಅವರನ್ನು ತಿ.ನರಸೀಪುರ ಯುವ ಮುಖಂಡರು ಅಭಿನಂದಿಸಿದರು.

ಕಡಿಮೆ ಬಡ್ಡಿ ದರದಲ್ಲಿ ದೀರ್ಘಾವಧಿ ಸಾಲ

ಹಾಡ್ಯ ಪಿಎಸಿಎಸ್ ಅಧ್ಯಕ್ಷ ಹೆಚ್.ಎಂ.ಶಂಕರ್



ಸಭೆಯಲ್ಲಿ ಅಧ್ಯಕ್ಷ ಹೆಚ್.ಎಂ.ಶಂಕರ್ ಮಾತನಾಡಿದರು.

ಮಲ್ಕುಂಡಿ, ಸೆ.15– ಬ್ಯಾಂಕ್‌ನಿಂದ ಸಾಲ ಪಡೆದ ರೈತರು ಆರ್ಥಿಕವಾಗಿ ಸಬಲರಾಗಬೇಕು ಎಂದು ಹಾಡ್ಯ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಾಡ್ಯ ಪಿಎಸಿಎಸ್ ಆವರಣದಲ್ಲಿ ನಡೆದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಕಡಿಮೆ ಬಡ್ಡಿದರದಲ್ಲಿ ದೀರ್ಘಾವಧಿ ಸಾಲ ನೀಡಲಾಗುತ್ತಿದೆ. ಸಾಲ ಪಡೆದ ರೈತರು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಸಂಘ ಅಭಿವೃದ್ಧಿಯಾಗಲು ಎಲ್ಲಾ ಷೇರುದಾರರ ಸಹಕಾರ ಮುಖ್ಯ. ರೈತರಿಂದ, ರೈತರಿಗಾಗಿ ಆರಂಭಗೊಂಡಿರುವ ಸಹಕಾರ ಸಂಘ ರೈತರಿಗೆ ಉತ್ತಮ ಸಾಲ ಸೌಲಭ್ಯ ನೀಡುತ್ತಿದೆ. ರೈತರು ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದರೆ ಸಂಘವು ಹೆಚ್ಚಿನ ಲಾಭ ಕಾಣಲು ಸಾಧ್ಯ. ನನ್ನ ಅಧಿಕಾರಾವಧಿಯಲ್ಲಿ ಸರ್ಕಾರದ ಸೌಲಭ್ಯಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಿದ್ದೇನೆ. ಮುಂದಿನ ದಿನಗಳಲ್ಲಿ ಷೇರುದಾರರಿಗೆ ಹೆಚ್ಚಿನ ಸಾಲ ನೀಡಲಾಗುವುದು ಎಂದು ಭರವಸೆ ನೀಡಿದರು.

ಸಿಇಓ ಎಂ.ಪಿ.ವೆಂಕಟರಾಜಯ್ಯ ವಾರ್ಷಿಕ ವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷ ನೀಲಕಂಠಪ್ಪ, ನಿರ್ದೇಶಕರಾದ ಬಸವರಾಜ್, ಮುದ್ದಣ್ಣ, ಶೇಖರಪ್ಪ, ಪುಟ್ಟದಾಸಯ್ಯ, ತಗಡೂರು ನಾಯಕ, ನಾಗಣ್ಣ, ಶಿವಣ್ಣ, ದೊಡ್ಡಸಿದ್ದೇಗೌಡ, ನಾಗಮ್ಮ, ಪದ್ಮ, ಮೇಲ್ವಿಚಾರಕ ನಿರಂಜನ್ ಸೇರಿದಂತೆ ಇತರರಿದ್ದರು.

ಹೈನುಗಾರಿಕೆ ನಿರಂತರ ಆದಾಯ ತಂದುಕೊಡುವ ಉದ್ಯಮ

ಹೊಸಹಳ್ಳಿ ಡೇರಿ ಅಧ್ಯಕ್ಷೆ ಗೀತಾ ಮಂಜುಗೌಡ



ಮಹಾಸಭೆಯನ್ನು ಸಂಘದ ಅಧ್ಯಕ್ಷೆ ಗೀತಾ ಮಂಜುಗೌಡ ಉದ್ಘಾಟಿಸಿದರು.

ಕೆ.ಆರ್.ನಗರ, ಸೆ.15– ಹೈನುಗಾರಿಕೆ ಭತ್ತದ ನಾಡಿನ ಮಹಿಳೆಯರಿಗೆ ನಿರಂತರ ಆದಾಯ ತಂದು ಕೊಡುವ ಲಾಭದಾಯಕ ಉದ್ಯಮವಾಗಿದೆ ಎಂದು ತಾಲೂಕಿನ ಹೊಸಹಳ್ಳಿ ಡೇರಿ ಅಧ್ಯಕ್ಷೆ ಗೀತಾ ಮಂಜುಗೌಡ ತಿಳಿಸಿದರು.

ತಾಲೂಕಿನ ಹೊಸಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಡೇರಿಗೆ ಅತಿ ಶೀಘ್ರ ಬಿಎಂಸಿ ಕೇಂದ್ರ ಮಂಜೂರು ಮಾಡಿಸಿ ಮೇಲ್ದರ್ಜೆಗೇರಿಸಲಾಗುವುದು. ಜೊತೆಗೆ ಬಿಎಂಸಿ ಕೇಂದ್ರ ಸ್ಥಾಪನೆಯಾದರೆ ಗ್ರಾಮದ ಆರೇಳು ಮಹಿಳೆಯರಿಗೆ ಉದ್ಯೋಗ ಸಿಕ್ಕಂತೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ಮೈಮುಲ್ ಅಧ್ಯಕ್ಷರಿಗೆ ಹಾಗೂ ನಿರ್ದೇಶಕರಿಗೆ ಮನವಿ ಮಾಡಲಾಗಿದೆ ಎಂದರು.


ಈಗಾಗಲೇ 6 ಲಕ್ಷದಷ್ಟು ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ. ಸದಸ್ಯರ ಬೇಡಿಕೆಯಂತೆ ಪ್ರತಿ 15 ದಿನಕ್ಕೊಮ್ಮೆ ಹಾಲು ಸರಬರಾಜು ಮಾಡುವ ಸದಸ್ಯರ ಖಾತೆಗೆ ಬಟವಾಡೆ ಮಾಡಲಾಗುವುದು. ಹೊಸಹಳ್ಳಿ ಡೇರಿಯನ್ನು ತಾಲೂಕಿಗೆ ಮಾದರಿ ಮಾಡಲು ಸದಸ್ಯರ ಸಂಪೂರ್ಣ ಸಹಕಾರ ಬೇಕು. ಮಹಿಳೆಯರ ಸ್ವಾವಲಂಬಿ ಬದುಕಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳು ಸಹಕಾರಿಯಾಗಿವೆ ಎಂದರು.

ಮೈಮುಲ್ ವಿಸ್ತರಣಾಧಿಕಾರಿ ನೇಮಿನಾಥ್ ಮಾಕಾಣಿ ಮಾತನಾಡಿ, ಸಂಘವು 2024–25ನೇ ಸಾಲಿನಲ್ಲಿ ಅಂದಾಜು 95 ಲಕ್ಷದಷ್ಟು ವ್ಯಾಪಾರ ವಹಿವಾಟು ನಡೆಸಿ, 2.45 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ವಾರ್ಷಿಕ ವರದಿ ಮಂಡಿಸಿದರು.

ಬಂದಿರುವ ಲಾಭಾಂಶದಲ್ಲಿ ಪ್ರತಿ ಮಹಿಳಾ ಸದಸ್ಯರಿಗೂ ದೀಪಾವಳಿ ಹಬ್ಬದಂದು ಬೋನಸ್ ನೀಡಲಾಗುವುದು. ಸದಸ್ಯರು ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದಾಗ ಮಾತ್ರ ಸಂಘ ಅಭಿವೃದ್ಧಿ ಹೊದಲು ಸಾಧ್ಯ ಎಂದರು.

ಬಿಜೆಪಿ ಜಿಲ್ಲಾ ಮಾಜಿ ಉಪಾಧ್ಯಕ್ಷ ವೆಂಕಟೇಶ್, ಎಂಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ಡೇರಿ ಉಪಾಧ್ಯಕ್ಷೆ ಮೀನಾಕ್ಷಿ, ನಿರ್ದೇಶಕರಾದ ಶಶಿಕಲಾ, ನಾಗಮ್ಮ, ಮರಿಸಿದ್ದಮ್ಮ, ಶಾಂತಮ್ಮ, ಪ್ರೇಮ, ಕೋಮಲಾಕ್ಷಿ, ಕೋಮಲ, ಮೀನಾಕ್ಷಿ ಸರೋಜ, ಕಾರ್ಯದರ್ಶಿ ಎ.ಹೆಚ್.ಮಮತ, ಹಾಲು ಪರೀಕ್ಷಕಿ ನಾಗಮಣಿ, ಸಹಾಯಕಿ ಮಂಗಳ ಹಾಗೂ ಮುಖಂಡರಾದ ಲೋಕೇಶ್ ಪಾಪಣ್ಣ, ಗೋಪಾಲ್, ಪುಟ್ಟರಾಜು ಇತರರಿದ್ದರು.

ರೋಟರಿ ವತಿಯಿಂದ ಸರ್ಕಾರಿ ಶಾಲೆಗಳ ಪುನಶ್ಚೇತನ



ಹುಣಸೂರು, ಸೆ.15– ರೋಟರಿ ಸಂಸ್ಥೆ ವತಿಯಿಂದ ಗ್ರಾಮಾಂತರ ಸರ್ಕಾರಿ ಶಾಲೆಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ ಎಂದು ರೋಟರಿ ಅಧ್ಯಕ್ಷ ಸುಕಿನ್ ಪದ್ಮನಾಭ ತಿಳಿಸಿದರು.

ತಾಲೂಕಿನ ಉದ್ದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹುಣಸೂರು ರೋಟರಿ ಕ್ಲಬ್ ಮತ್ತು ರೋಟರಿ ಕ್ಲಬ್ ಆಫ್ ಬೆಂಗಳೂರು 3192 ವತಿಯಿಂದ ಶಾಲೆ ಕಾಂಪೌಂಡಿಗೆ ಗೇಟ್ ಮತ್ತು ಗೋಪರ ನೀಡಲಾಗಿದೆ ಎಂದರು.

ರೊ.ಡಾ.ಅನಿಲ್ ಅಗಡಿ ಮಾತನಾಡಿ, ಡಾ.ಮುಸ್ತಾಲಿ ವಾಗ್ ಮತ್ತು ಹುಣಸೂರು ರೋಟರಿ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್ ಮನವಿ ಮೇರೆಗೆ ಉದ್ದೂರು ಸರ್ಕಾರಿ ಶಾಲೆಗೆ ಗೇಟ್, ಗೋಪರ ಮತ್ತು ಕುರ್ಚಿ, ಟೇಬಲ್ ನೀಡಲು ನಿರ್ಧರಿಸಲಾಯಿತು. ಮುಂದೆಯೂ ಈ ಶಾಲೆ ಅಭಿವೃದ್ಧಿಗೆ ಸಹಕಾರ ನೀಡಲಾಗುವುದು ಎಂದರು.

ಹುಣಸೂರು ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಈಗಾಗಲೇ ಅಂಗನವಾಡಿ ಮಕ್ಕಳಿಗೆ ಚೇರು, ಸಮವಸ್ತ್ರ ನೀಡಲಾಗಿದ್ದು, ನಮ್ಮ ರೋಟರಿ ಕ್ಲಬ್ ಆಫ್ ಬೆಂಗಳೂರು ಹಾಗೂ ನಮ್ಮ ರೋಟರಿ ಸದಸ್ಯರ ಸಹಕಾರದಿಂದ 75ರಿಂದ ಒಂದು ಲಕ್ಷದ ಕಾಮಗಾರಿಗೆ ಸಹಕಾರ ನೀಡಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಮಧು ಮೇಹಿಗಳಿಗೆ ನೆರವಾಗುವ ನಿಟ್ಟಿನಲ್ಲಿ ತಾಲೂಕಿನ ಜನತೆ ಅನುಕೂಲಕ್ಕಾಗಿ ಡಯಾಲೀಸಸ್ ಮೆಷಿನ್ ಅನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ನೀಡುವ ಚಿಂತನೆ ಇದೆ ಎಂದರು.

ಈ ವೇಳೆ ಕಾರ್ಯದರ್ಶಿ ಶ್ಯಾಮಣ್ಣ, ಸರ್ಜಂಟ್ ಲೂಯಿಸ್ ಪೆರೇರಾ, ರೊ. ಮುಂಜು ನಾಥ್, ಬೆಂಗಳೂರು ರೋಟರಿ ಕ್ಲಬ್‌ನ ಹಿರಿಯ ರೊ.ಮೋಹನ್, ರೊ. ಮೀರಾ ಶಂಕರ್, ರೊ.ಅಂಜು ಅಗಡಿ, ರೊ. ಗೌರಿ, ಶಿಕ್ಷಕಿ ಚಿನ್ನಮ್ಮ ಇತರರಿದ್ದರು.

ಸರಗೂರು ಜೆಎಸ್‌ಎಸ್ ಪ್ರಾಥಮಿಕ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ



ಸರಗೂರಿನ ಜೆಎಸ್‌ಎಸ್ ಪ್ರಾಥಮಿಕ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಈ ವೇಳೆ ಶಾಲೆಯ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶ್ರೀಕೃಷ್ಣ, ರಾಧೆ ವೇಷಭೂಷಣ ಧರಿಸಿದ್ದರು. ಮುಖ್ಯಶಿಕ್ಷಕ ಜಯಣ್ಣ, ಶಿಕ್ಷಕರಾದ ಜಯಲಕ್ಷ್ಮಿ, ಸುಮಲತಾ, ಜಯಶ್ರೀ, ಶ್ವೇತಾ, ಶಿಲ್ಪ, ಆಂಥೋನಿ ಮೇರಿ, ಜೀವಿತಾ, ರಂಜನಿ, ಮಂಜುಳ, ದೈಹಿಕ ಶಿಕ್ಷಕರಾದ ಕೃಷ್ಣಮೂರ್ತಿ, ಅಶೋಕ್ ಇನ್ನಿತರರಿದ್ದರು.

ಹಾಲು ಉತ್ಪಾದಕರು ಹಾಲಿನ ಗುಣಮಟ್ಟ ಕಾಯ್ದುಕೊಳ್ಳಿ

ನೆರಗ್ಯಾತನಹಳ್ಳಿ ಡೈರಿ ಅಧ್ಯಕ್ಷ ನಟರಾಜಪ್ಪ ಮನವಿ

ತಿ.ನರಸೀಪುರ, ಸೆ.15– ಹಾಲು ಉತ್ಪಾದಕರು ಗುಣಮಟ್ಟದ ಹಾಲನ್ನು ಉತ್ಪಾದಿಸಿ ಸಹಕಾರ ಸಂಘಕ್ಕೆ ನೀಡಬೇಕು ಹಾಗೂ ರಾಸುವಿಗೆ ಸಮತೋಲನ ಆಹಾರ ನೀಡಿ ಮತ್ತು ಹಾಲಿನಲ್ಲಿ ಕೊಬ್ಬಿನಾಂಶ ಇರುವಂತೆ ಹಾಲಿನ ಗುಣಮಟ್ಟ ಕಾಪಾಡಿಕೊಳ್ಳಬೇಕು ಎಂದು ನೆರಗ್ಯಾತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನಟರಾಜಪ್ಪ ಮನವಿ ಮಾಡಿದರು.

ತಾಲೂಕಿನ ನೆರಗ್ಯಾತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸೋಮವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಾಲಿನ ಗುಣಮಟ್ಟ ಕುಸಿದರೆ ಸರ್ಕಾರ ನೀಡುವ 5 ರೂ. ಪ್ರೋತ್ಸಾಹ ಧನ ಕಡಿತಗೊಳ್ಳುತ್ತದೆ. ಆದ್ದರಿಂದ 8.5 ಎಸ್‌ಎನ್‌ಎಫ್ ಬರುವಂತೆ ಹಾಲು ಪೂರೈಕೆ ಮಾಡಲು ಸದ್ಯಸರು ಸಹಕರಿಸಬೇಕು. ಡೈರಿಗೆ ನಿತ್ಯ 420 ಲೀಟರ್ ಹಾಲು ಬರುತ್ತಿದ್ದು, ಇನ್ನೂ ಹೆಚ್ಚು ಹಾಲು ಪೂರೈಕೆ ಮಾಡಲು ಉತ್ಪಾದಕರು ಶ್ರಮವಹಿಸಬೇಕು ಎಂದರು.

ಯಾವುದೇ ಸಹಕಾರ ಸಂಘ ಸದಸ್ಯರ ಸಹಕಾರವಿಲ್ಲದೇ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಹಾಗಾಗಿ ಹಾಲು ಉತ್ಪಾದಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಸಂಘದ ಬೆಳವಣಿಗೆಯೊಂದಿಗೆ, ವೈಯಕ್ತಿಕವಾಗಿಯೂ ಏಳಿಗೆ ಹೊಂದುವಂತೆ ಕರೆ ನೀಡಿದರು.



ಸಭೆಯಲ್ಲಿ ಸಂಘದ ಅಧ್ಯಕ್ಷ ನಟರಾಜಪ್ಪ ಮಾತನಾಡಿದರು.

ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ ಸಿ.ಅನಿತಾ ಮಾತನಾಡಿ ಹಾಲಿನಲ್ಲಿ ಜಿಡ್ಡಿನಾಂಶ ಹೆಚ್ಚಿದಷ್ಟು ಲಾಭಾಂಶ ಇರುತ್ತದೆ. ರಾಸುಗಳಿಗೆ ಗುಣಮಟ್ಟದ ಆಹಾರ ನೀಡಬೇಕು. ಪಶು ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ರಾಸುಗಳನ್ನು ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೊಳಪಡಿಸಬೇಕು. ಸ್ವಚ್ಛತೆ ಕಾಪಾಡಬೇಕು. ಜಿಡ್ಡಿನಾಂಶ ಹೆಚ್ಚಾಗಿರುವಷ್ಟು ಲಾಭ ಕಾಣಬಹುದು ಎಂದರು.

ಸಂಘದ ಸಿಇಓ ಜಿ.ನೇತ್ರಾ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು 71,113 ರೂ. ನಿವ್ವಳ ಲಾಭದಲ್ಲಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ರೀತಿ ನಮ್ಮ ಸಂಘ ಲಾಭದಾಯಕವಾಗಿರಲು ಹಾಲಿನ ಗುಣಮಟ್ಟ ಮತ್ತಷ್ಟು ಹೆಚ್ಚುವ ಅವಶ್ಯಕತೆ ಇದೆ ಎಂದರು.

ಸಂಘದಲ್ಲಿ 90 ಜನ ಷೇರುದಾರರಿದ್ದು, ಹಾಲು ಉತ್ಪಾದಕರಿಗೆ ಬೋನಸ್ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷೆ ಮಂಜುಳಾ, ನಿರ್ದೇಶಕರಾದ ಎನ್.ಗುರುಸ್ವಾಮಿ, ಎನ್.ಆರ್.ಚಂದ್ರಶೇಖರ್, ನಂದೀಶ್, ಮಹೇಶ್, ಶಿವಕುಮಾರ್, ಚಂದ್ರಶೇಖರಪ್ಪ, ದುಂಡಪ್ಪ, ಮಹದೇವಮ್ಮ, ರತ್ನಮ್ಮ, ಸಹಾಯಕ ನವೀನ್ ಹಾಜರಿದ್ದರು.

ಡಿವಿಜಿ ಅವರ ಕೃತಿಗಳು ಅತ್ಯಂತ ಯಶಸ್ವಿಯಾಗಿವೆ

ಮಂಕುತಿಮ್ಮನ ಕಗ್ಗ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕ ಜಿ.ಎಸ್.ನಟೇಶ್

ನಂಜನಗೂಡು, ಸೆ.15– ಎಐ ತಂತ್ರಜ್ಞಾನದ ಇಂದಿನ ದಿನಮಾನದಲ್ಲೂ ಸಾಹಿತ್ಯವನ್ನು ಇಷ್ಟು ಗೌರವಯುತವಾಗಿ ಸ್ವೀಕರಿಸುವ ನಮ್ಮ ಜನರ ಮನೋಭಾವಕ್ಕೆ ತಲೆಬಾಗಲೇಬೇಕು ಎಂದು ಉಪನ್ಯಾಸಕ ಜಿ.ಎಸ್.ನಟೇಶ್ ತಿಳಿಸಿದರು.

ನಗರದ ಭಾರತೀ ತೀರ್ಥ ಸಭಾಂಗಣದಲ್ಲಿ ಡಿವಿಜಿ ಬಳಗ ಆಯೋಜಿಸಿದ್ದ ಮಂಕುತಿಮ್ಮನ ಕಗ್ಗ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾರು ಸಂಪತ್ತು, ಅಧಿಕಾರ ಬಂದಾಗಲೂ ಒಂದೇ ರೀತಿ ಇರುತ್ತಾರೋ ಅವರು ಜಿತೇಂದ್ರಿಯರು ಅನಿಸಿಕೊಳ್ಳುತ್ತಾರೆ. ದೇಶದ ರಾಷ್ಟ್ರಪತಿಯಾಗಿದ್ದ ಎಪಿಜೆ ಅಬ್ದುಲ್ ಕಲಾಂ ಅಂತಹ ಮಹಾನುಭಾವರಾಗಿದ್ದರು. ಚಿಕ್ಕಮಕ್ಕಳು ಚಿಕ್ಕ ವಯಸ್ಸಿನಲ್ಲಿ ಇದ್ದ ಹಾಗೆ ಬೆಳೆದ ಮೇಲೂ ಇರುವುದಿಲ್ಲ. ಹಾಗಾಗಿ ಅವರನ್ನು ಬೇರೆಯವರ ಮುಂದೆ ಹೀಯಾಳಿಸಬಾರದು. ಡಿ.ವಿ.ಗುಂಡಪ್ಪನವರು ಕನ್ನಡದಲ್ಲೂ ಅನುತ್ತೀರ್ಣರಾದರು. ನಂತರ ಕಾಲೇಜು ಶಿಕ್ಷಣ ಮುಂದುವರೆಸಲಿಲ್ಲ. ಕಾಲೇಜು ವಿದ್ಯಾಭ್ಯಾಸವೇ ಎಲ್ಲವನ್ನೂ ಕೊಡುವುದಿಲ್ಲ. ವಿನಯ ಒಂದು ಗುಣವಿದ್ದರೆ ಎಲ್ಲಾ ಒಳ್ಳೆಯ ಗುಣಗಳು ತಾವೇ ಹತ್ತಿರಕ್ಕೆ ಬರುತ್ತವೆ. ಇಂತಹ ಗುಣಸಂಪನ್ನರಾದ ಅವರ ಕೃತಿಗಳು ಅತ್ಯಂತ ಯಶಸ್ವಿಯಾಗಿದೆ. ವಿಶ್ವ ವಿದ್ಯಾನಿಲಯದಲ್ಲಿರುವವರಿಗೂ ಸಹ ಇವರ ಪದ್ಯಗಳನ್ನು ಪಾಠ ಮಾಡಲು ಕಷ್ಟ. ಓದುಗರಿಗೆ ಸಂತೋಷ ಕೊಡುವ ಸಾಹಿತ್ಯ ಉತ್ತಮ ಸಾಹಿತ್ಯವೆನಿಸಿಕೊಳ್ಳುತ್ತದೆ. ಅಂತಹ ಶ್ರೇಷ್ಠ ಕೃತಿಗಳನ್ನು ಡಿವಿಜಿ ರಚಿಸಿದ್ದಾರೆ. ಜಕಣಾಚಾರಿ ಶಿಲೆಗಳನ್ನು ಉಳಿಯಿಂದ ಕೆತ್ತಿದರೆ ಇವರು ಲೇಖನಿಯಿಂದ ಕೆತ್ತಿದ್ದಾರೆ. ಬೇಲೂರು ಹಳೇಬೀಡಿನ ಸುಂದರ ಶಿಲಾಬಾಲಿಕೆಯರ ಮೇಲೆ ಇವರು ರಚಿಸಿರುವ ಸಾಹಿತ್ಯ ಎಲ್ಲರ ಮನಸೂರೆಗೊಳ್ಳುತ್ತದೆ ಎಂದರು.

ಡಿವಿಜಿ ಬಳಗದ ಗೋಪಿನಾಥ್ ಮಾತನಾಡಿ, ಚಿಕ್ಕ ವಯಸ್ಸಿನಿಂದಲೂ ಕಗ್ಗದಿಂದ ಪ್ರೇರಿತನಾಗಿದ್ದೆ. ಇದಕ್ಕೆ ಒಂದು ವೇದಿಕೆ ಕಲ್ಪಿಸಬೇಕು ಎಂದುಕೊಂಡಿದ್ದೆ. ಹಾಗಾಗಿ ಡಿವಿಜಿ ಬಳಗವನ್ನು ಸ್ಥಾಪಿಸಿ ಅದರ ಮೂಲಕ ಈ ಕಾರ್ಯಕ್ರಮಗಳನ್ನು ಆಯೋಜಿಸಲು ಸಾಧ್ಯವಾಯಿತು ಎಂದರು.

ಡಿವಿಜಿ ಬಳಗದ ಕನಕರಾಜು ಮಾತನಾಡಿ, ಮೊದಲ ಕಾರ್ಯಕ್ರಮದಲ್ಲೇ ಗೋಪಿನಾಥ್ ಹಾಗೂ ಡಿವಿಜಿ ಬಳಗ ಅದ್ಭುತ ಯಶಸ್ಸನ್ನು ಸಾಧಿಸಿದ್ದಾರೆ. ಅವರಿಗೆ ಸಹಕಾರ ನೀಡಿದರೆ ಈ ರೀತಿಯ ಹೆಚ್ಚು ಕಾರ್ಯಕ್ರಮಗಳನ್ನು ನೀಡಲು ಸಾಧ್ಯ. ಇದರಿಂದ ಆತ್ಮ ತೃಪ್ತಿ ಸಿಗುತ್ತದೆ. ಇಂತಹ ಕಾರ್ಯ ಕ್ರಮಗಳು ಮುಂದುವರೆಯುತ್ತಿರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ರಾಮಮೋಹನ್, ಸಾತ್ವಿಕ್, ಸುಮನಾ, ಶೈಲಜಾ ನಾಗರಾಜ್, ರಂಜನಾ ಲಕ್ಷ್ಮೀಶ್, ಅನನ್ಯ, ಇಂದಿರೇಶ್, ಶೋಭ ಉಪಸ್ಥಿತರಿದ್ದರು.



ಉಪನ್ಯಾಸ ಕಾರ್ಯಕ್ರಮವನ್ನು ಉಪನ್ಯಾಸಕ ಜಿ.ಎಸ್.ನಟೇಶ್ ಉದ್ಘಾಟಿಸಿದರು.

ಮೈಸೂರಲ್ಲಿ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಗಣನೀಯ ಇಳಿಮುಖ


● ಕಳೆದ ವರ್ಷ 47 ಕೋಟಿ ವಂಚನೆ, ಈ ವರ್ಷ 28 ಕೋಟಿ ವಂಚನೆ ● ಸೈಬರ್ ಕ್ರೈಂ ವಿರುದ್ಧದ ಜಾಗೃತಿ ಕಾರ್ಯಕ್ರಮದಲ್ಲಿ ಎಸಿಪಿ ಸ್ನೇಹರಾಜ್ ಮಾಹಿತಿ ● ಷೇರು ವ್ಯವಹಾರದಲ್ಲಿ ಬಂಡವಾಳ ಹೂಡುವಾಗ ಹೆಚ್ಚು ವಂಚನೆ ● ಡಿ ಮ್ಯಾಟ್ ಅಕೌಂಟ್‌ನಿಂದ ಮಾತ್ರ ಬಂಡವಾಳ ಹೂಡಿ ● ಬ್ಯಾಂಕ್ ವ್ಯವಹಾರ, ಪಾಸ್‌ವರ್ಡ್ ಗೌಪ್ಯತೆ ಕಾಪಾಡಿ ● ಡಿಜಿಟಲ್ ಹೈಜಿನ್ ಮೇಂಟೈನ್ ಮಾಡಿ

ಮೈಸೂರು, ಸೆ.15(ಬಿಎಲ್‌ಯು)– ಅಮಾಯಕರನ್ನು ವಂಚಿಸಿ ಹಣ ದೋಚುವ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮೈಸೂರಿನಲ್ಲಿ 2025ರ ಅವಧಿಯಲ್ಲಿ 128 ಪ್ರಕರಣಗಳಲ್ಲಿ 28 ಕೋಟಿ ರೂಪಾಯಿಗಳನ್ನು ಸುಲಿಗೆ ಮಾಡಿದ್ದಾರೆ ಎಂದು ಮೈಸೂರು ನಗರದ ಸೈಬರ್ ಕ್ರೈಂ ವಿಭಾಗದ ಎಸಿಪಿ ಸ್ನೇಹರಾಜ್ ತಿಳಿಸಿದರು.

ನಗರದ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂದು ಬಜಾಜ್ ಫೈನಾನ್ಸ್‌ನವರು ಆಯೋಜಿಸಿದ್ದ ನಾಕೌಟ್ ಡಿಜಿಟಲ್ ಫ್ರಾಡ್ ಸೈಬರ್ ವಂಚನೆ ಕುರಿತ ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸೈಬರ್ ಅಪರಾಧಿಗಳು ವಂಚನೆ ಮೂಲಕ ದೋಚಿದ್ದ 28 ಕೋಟಿಯಲ್ಲಿ 3 ಕೋಟಿ ರೂಪಾಯಿಗಳನ್ನು ರಿಕವರಿ ಮಾಡಲಾಗಿದೆ ಎಂದು ಹೇಳಿದರು.

2024 ರಲ್ಲಿ 235 ಪ್ರಕರಣಗಳಲ್ಲಿ 47 ಕೋಟಿ ರೂಪಾಯಿ ಹಣವನ್ನು ಸೈಬರ್ ಅಪರಾಧಿಗಳು ದೋಚಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದೆ. ಸೈಬರ್ ಕ್ರೈಂ ಪೊಲೀಸರ ಪರಿಣಾಮಕಾರಿ ಜಾಗೃತಿಯಿಂದ ಈ ವರ್ಷ ಸೈಬರ್ ಅಪರಾಧದಲ್ಲಿ ಹಣ ಕಳೆದುಕೊಳ್ಳುವವರ ಪ್ರಮಾಣ ಕಡಿಮೆಯಾಗಿದೆ. ಸೈಬರ್ ಅಪರಾಧಿಗಳು ಬಹು ವಿಧದಲ್ಲಿ ಚಾಣಾಕ್ಷತನ ತೋರಿದರೂ ಅವರ ಮೋಸಕ್ಕೆ ಜನ ಬಲಿಯಾಗುತ್ತಿಲ್ಲ ಎಂದು ಹೇಳಿದರು.

ನಕಲಿ ಓಟಿಪಿ ವಂಚನೆ, ಫಿಶಿಂಗ್ ವಂಚನೆ, ಡಿಜಿಟಲ್ ಅರೆಸ್ಟ್, ಸ್ಟಾಕ್ ಮಾರ್ಕೆಟ್ ಇನ್ವೆಸ್ಟ್‌ಮೆಂಟ್ ವಂಚನೆ, ಪಿಂಚಣಿ ವಂಚನೆ ಸೇರಿದಂತೆ ಹಲವು ವಿಧದ ಸೈಬರ್ ಅಪರಾಧಗಳ ಮೂಲಕ ಅಮಾಯಕರನ್ನು ಸೈಬರ್ ಅಪರಾಧಿಗಳು ವಂಚಿಸುತ್ತಿದ್ದಾರೆ ಎಂದು ಸ್ನೇಹರಾಜ್ ತಿಳಿಸಿದರು.



ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಸೋಮವಾರ ಬಜಾಜ್ ಫೈನಾನ್ಸ್‌ನವರು ಆಯೋಜಿಸಿದ್ದ ನಾಕೌಟ್ ಡಿಜಿಟಲ್ ಫ್ರಾಡ್ ಸೈಬರ್ ವಂಚನೆ ಕುರಿತ ಜಾಗೃತಿ ಕಾರ್ಯಾಗಾರದಲ್ಲಿ ಸೈಬರ್ ಕ್ರೈಂ ವಿಭಾಗದ ಎಸಿಪಿ ಸ್ನೇಹರಾಜ್ ಮಾತನಾಡಿದರು.

ಇತ್ತೀಚಿನ ಎರಡು ಸೈಬರ್ ಅಪರಾಧ ಪ್ರಕರಣಗಳನ್ನು ಸ್ನೇಹರಾಜ್ ಅವರು ಉದಾಹರಣೆಯಾಗಿ ನೀಡಿದರು. ಒಂದು ಪ್ರಕರಣದಲ್ಲಿ ವ್ಯಕ್ತಿಯೊಬ್ಬರು ಸುಮಾರು 3 ಕೋಟಿ ವಂಚನೆಗೊಳಗಾಗಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಹೂಡಿಕೆ ಹೆಸರಿನಲ್ಲಿ ಮಹಿಳೆಯೊಬ್ಬರು 35 ಲಕ್ಷ ಕಳೆದುಕೊಂಡಿದ್ದಾರೆ ಎಂದರು.

ಸ್ಟಾಕ್ ಮತ್ತು ಷೇರ್ ಮಾರುಕಟ್ಟೆಯಲ್ಲಿ ಬಂಡವಾಳ ಹೂಡಬೇಕಾದರೆ ಡಿ ಮ್ಯಾಟ್ ಅಕೌಂಟ್‌ನಿಂದ ಹೂಡಿಕೆ ಮಾಡಿ. ಇದು ಬಿಟ್ಟು ಅಪರಿಚಿತರು ಬಂಡವಾಳ ಹೂಡುವಂತೆ ನಿಮ್ಮನ್ನು ಸೈಬರ್ ಜಾಲಕ್ಕೆ ಸಿಲುಕಿಸುವ ಪ್ರಯತ್ನ ಮಾಡಿದರೆ ಜಾಗರೂಕರಾಗಿ. ಸಾಮಾಜಿಕ ಮಾಧ್ಯಮದಲ್ಲಿ ಬರುವ ಲಿಂಕ್ ಅನ್ನು ನೀವು ನಂಬಬೇಡಿ ಎಂದು ಹೇಳಿದರು.

ಡಿಜಿಟಲ್ ಅರೆಸ್ಟ್‌ನಲ್ಲಿ ನಾರ್ಮಲ್ ಕಾಲ್ ಬರುವುದಿಲ್ಲ ಬದಲಿಗೆ ವಾಟ್ಸ್‌ಆ್ಯಪ್ ಕಾಲ್ ಬರುತ್ತದೆ. ಇದನ್ನು ನೀವು ಗಮನದಲ್ಲಿಟ್ಟುಕೊಂಡು ವಾಟ್ಸ್‌ಆ್ಯಪ್ ಕಾಲ್‌ಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಬೇಡಿ. ಖಾಸಗಿ ಅಕೌಂಟ್ ಹಾಗೂ ಪಬ್ಲಿಕ್ ಅಕೌಂಟ್‌ನ ಗೌಪ್ಯತೆ ಕಾಪಾಡಿ. ಯಾವುದೇ ಕಾರಣಕ್ಕೂ ನಿಮ್ಮ ಅಕೌಂಟ್ ಪಾಸ್‌ವರ್ಡ್ ಅನ್ನು ಬೇರೆಯವರಿಗೆ ನೀಡಬೇಡಿ. ನಿಮ್ಮ ಓಟಿಪಿಗಳನ್ನು ಬೇರೆಯವರಿಗೆ ಬಹಿರಂಗಗೊಳಿಸಬೇಡಿ ಎಂದು ಸ್ನೇಹರಾಜ್ ಎಚ್ಚರಿಕೆ ನೀಡಿದರು.

ಪಾರ್ಟ್‌ಟೈಮ್ ಜಾಬ್‌ಗೆ ಮಹಿಳೆಯರು ಹೆಚ್ಚಾಗಿ ವಂಚನೆಗೊಳಲಾಗುತ್ತಿದ್ದಾರೆ ಆದ ಕಾರಣ ಡಿಜಿಟಲ್ ಹೈಜಿನ್ ಮೇಂಟೈನ್ ಮಾಡಿ. ಆಗಾಗ್ಗೆ ಪಾಸ್‌ವರ್ಡ್ ಬದಲಾವಣೆ ಮಾಡಿ, ಪರಿಚಯಸ್ಥರನ್ನು ಬಿಟ್ಟು ಅಪರಿಚಿತರ ಜೊತೆ ಹಣಕಾಸಿನ ವ್ಯವಹಾರ ಮಾಡಬೇಡಿ ಎಂದು ಹೇಳಿದರು. ನಿವೃತ್ತ ಎಸಿಪಿ ಜಿ.ಎನ್.ಮೋಹನ್, ನಿವೃತ್ತ ಡಿವೈಎಸ್ಪಿ ರಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೈಬರ್ ಸ್ಲೇವರ್ ಮುಂದಿಟ್ಟು ಕೋಟ್ಯಾಂತರ ಹಣ ಲೂಟಿ

ಇತ್ತೀಚೆಗೆ ಸೈಬರ್ ಕ್ರೈಂ ಪ್ರಕರಣಗಳು ಹೆಚ್ಚಾಗಲು ಸೈಬರ್ ಸ್ಲೇವರ್ (ಸೈಬರ್ ಒತ್ತೆಯಾಳುಗಳು) ಪಾತ್ರ ಬಹು ಮುಖ್ಯವಾಗಿದೆ. ವಿದೇಶದಲ್ಲಿ ಹೆಚ್ಚಿನ ವೇತನಕ್ಕೆ ಕೆಲಸ ಕೊಡಿಸುವುದಾಗಿ ವಂಚಿಸುವ ಸೈಬರ್ ವಂಚಕರು ಅಮಾಯಕರನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳುತ್ತಾರೆ.

ಸೈಬರ್ ಅಪರಾಧ ಕೃತ್ಯಗಳನ್ನು ಎಸಗಲು ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಐಟಿ ಕಂಪನಿಗಳಂತೆ ದೊಡ್ಡ ಕಂಪನಿಗಳನ್ನು ನಡೆಸುತ್ತಿದ್ದಾರೆ. ಕೆಲಸ ಕೊಡಿಸುವುದಾಗಿ ನಂಬಿಸುವವರನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಂಡು ಅವರಿಂದ ಭಾರತದಲ್ಲಿ ಸೈಬರ್ ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದಾರೆ.

ಸೈಬರ್ ಅಪರಾಧಿಗಳು ವಿದೇಶದಲ್ಲಿರುವ ಕಾರಣ ಅವರನ್ನು ಬಂಧಿಸುವುದು ಕಷ್ಟವಾಗಿದೆ. ಅಲ್ಲದೆ ಒತ್ತೆಯಾಳುಗಳಿಂದ ಸೈಬರ್ ಅಪರಾಧ ಕೃತ್ಯ ಎಸಗುವ ಕಾರಣ ಮೂಲ ಪತ್ತೆ ಹಚ್ಚುವುದು ಅಸಾಧ್ಯವಾಗಿದೆ ಎಂದು ಎಸಿಪಿ ಸ್ನೇಹರಾಜ್ ತಿಳಿಸಿದರು.

ಸೈಬರ್ ಜಾಲದಿಂದ ದೂರವಿರಿ, ಹೆಲ್ಪ್‌ಲೈನ್ ಸಂಖ್ಯೆ 1930 ಸಂಪರ್ಕಿಸಿ

ಸೈಬರ್ ಕ್ರೈಂ ಬಗ್ಗೆ ನಾಗರಿಕರು ಸಹಾಯವಾಣಿ ಸಂಖ್ಯೆ 1930ಗೆ ಕರೆ ಮಾಡಿ ತಕ್ಷಣ ವರದಿ ಮಾಡಬೇಕು ಎಂದು ಸ್ನೇಹರಾಜ್ ಸಲಹೆ ನೀಡಿದರು.

ತಾವು ವಂಚನೆಗೊಳಗಾಗುತ್ತಿರುವ ವಿಚಾರವನ್ನು ಸೈಬರ್ ಕ್ರೈಂ ವಿಭಾಗಕ್ಕೆ ತ್ವರಿತವಾಗಿ ತಿಳಿಸಿದರೆ ವಂಚನೆ ವಹಿವಾಟುಗಳನ್ನು ಸ್ಥಗಿತಗೊಳಿಸಲು ಸಾಧ್ಯವಾಗುತ್ತದೆ. ಅಲ್ಲದೆ ಸೈಬರ್ ಅಪರಾಧಿಗಳನ್ನು ಬೆನ್ನಟ್ಟಲು ಅನುವು ಮಾಡಿಕೊಡುತ್ತದೆ ಎಂದರು.

ಸೈಬರ್ ಕ್ರೈಂಗಳನ್ನು ತಡೆಗಟ್ಟಲು ಸಾರ್ವಜನಿಕರ ಜಾಗೃತಿಯೊಂದೇ ಶಕ್ತಿಶಾಲಿ ಅಸ್ತ್ರವಾಗಿದೆ. ಜನರು ಸೈಬರ್ ಕ್ರೈಂ ಬಗ್ಗೆ ಅರಿವು ಹೊಂದಿ ಅಪರಿಚಿತರೊಂದಿಗೆ ವ್ಯವಹಾರ ಮಾಡದಿದ್ದರೆ ಸೈಬರ್ ಅಪರಾಧಿಗಳು ಎಷ್ಟೇ ಚಾಣಾಕ್ಷರಾಗಿದ್ದರೂ ವಂಚನೆ ಮಾಡಲು ಸಾಧ್ಯವಿಲ್ಲ ಎಂದು ಸ್ನೇಹರಾಜ್ ಅಭಿಪ್ರಾಯಪಟ್ಟರು.

ಮನೆಯಿಂದ ಹೊರಗೆ ಹೋಗುವಾಗ, ಪ್ರವಾಸಕ್ಕೆ ತೆರಳುವಾಗ ಸಾಮಾಜಿಕ ಮಾಧ್ಯಮಗಳಲ್ಲಿ ವಿವರ ಹಂಚಿಕೊಳ್ಳಬಾರದು. ಒಂದು ವೇಳೆ ಹೊರಗೆ ಹೋಗುವ ಮಾಹಿತಿಯನ್ನು ಹಂಚಿಕೊಂಡರೆ ಅದೇ ಸಮಯದಲ್ಲಿ ನಿಮ್ಮ ಮನೆಯಲ್ಲಿ ಕಳ್ಳತನ ಮಾಡುತ್ತಾರೆ.

ನಿಮ್ಮ ಮಕ್ಕಳ ಫೋಟೋ ಸೇರಿದಂತೆ ಇತರೆ ವಿವರವನ್ನು ಕೂಡ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಬೇಡಿ. ಒಂದು ವೇಳೆ ಮಕ್ಕಳ ಫೋಟೋ ಸಹಿತ ವಿವರ ಹಂಚಿಕೊಂಡರೆ ಅವರನ್ನು ಅಪಹರಣ ಮಾಡುವ ಸಾಧ್ಯತೆಗಳಿರುತ್ತದೆ.

ಡಿಜಿಟಲ್ ಅರೆಸ್ಟ್ ಎಂಬ ವಿಚಾರ ಪೊಲೀಸ್ ವ್ಯವಸ್ಥೆಯಲ್ಲಿ ಇಲ್ಲ. ಆದರೆ ಈ ಬಗ್ಗೆ ಮಾಹಿತಿ ಕೊರತೆಯ ಕಾರಣ ಜನರು ವಂಚಕರ ಬಲೆಗೆ ಬೀಳುತ್ತಿದ್ದಾರೆ. ಅರೆಕಾಲಿಕ ಉದ್ಯೋಗದ ಆಮಿಷಕ್ಕೆ ಒಳಗಾಗಿ ಗೃಹಿಣಿಯರು ಹಣ ಕಳೆದುಕೊಳ್ಳುತ್ತಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಲಿಂಕ್‌ಗಳು, ಎಪಿಕೆ ಫೈಲ್ಸ್‌ಗಳು, ವಾಟ್ಸಾಪ್ ಕರೆಗಳು ಸ್ವೀಕರಿಸಬಾರದು. ಈ ಮೂಲಕವಾಗಿ ಯಾವುದೇ ವ್ಯವಹಾರ ಮಾಡಬಾರದು. ತೀರಾ ಖಾಸಗಿ ವಿಚಾರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಬಾರದು ಎಂದು ಸಲಹೆ ನೀಡಿದರು.

ಚೈಲ್ಡ್ ಪೋರ್ನೋಗ್ರಫಿ ನೋಡಿದರೆ ಹುಷಾರ್...

ಚೈಲ್ಡ್ ಪೋರ್ನೋಗ್ರಫಿ ವಿಡಿಯೋ ಮತ್ತು ಫೋಟೋ (ಮಕ್ಕಳ ಲೈಂಗಿಕ ದೃಶ್ಯ) ವೀಕ್ಷಣೆ ಮಾಡಬೇಡಿ. ಒಂದು ವೇಳೆ ವೀಕ್ಷಣೆ ಮಾಡಿದರೆ ಟಿಪ್‌ಲೈನ್ ರಿಪೋರ್ಟ್ ಬರುತ್ತದೆ ಎಂದು ಸ್ನೇಹರಾಜ್ ತಿಳಿಸಿದರು. ಕೂಡಲೇ ಈ ರಿಪೋರ್ಟ್ ಅನ್ನು ಸಿಐಡಿಗೆ ನೀಡಲಾಗುತ್ತದೆ. ಸಿಐಡಿ ಅವರು ಸೈಬರ್ ಕ್ರೈಂ ವಿಭಾಗದವರ ಸಹಾಯದಿಂದ ಚೈಲ್ಡ್ ಪೋರ್ನೋಗ್ರಫಿ ನೋಡುವವರನ್ನು ಪತ್ತೆ ಮಾಡಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುತ್ತಾರೆ ಎಂದರು.

ಐಡಿ ಕಾಯ್ದೆಗೆ ವಿರುದ್ಧವಾದ ಕಾನೂನು ವಿರೋಧಿ ವಿಡಿಯೋಗಳನ್ನು ವೆಬ್‌ಸೈಟ್ ಮೂಲಕ ನೋಡಿದರೆ ಅದು ಟಿಪ್‌ಲೈನ್‌ನಲ್ಲಿ ದಾಖಲಾಗುತ್ತದೆ. ಇಂತಹ ವೆಬ್‌ಸೈಟ್ ನೋಡುವವರು ಸಿಕ್ಕಿ ಬೀಳುವುದಂತೂ ಖಚಿತ. ಆದ ಕಾರಣ ಪ್ರತಿಯೊಬ್ಬರು ಚೈಲ್ಡ್ ಪೋರ್ನೋಗ್ರಫಿಯಿಂದ ದೂರ ಇರಬೇಕು ಎಂದು ಎಚ್ಚರಿಸಿದರು.

ಸೈಬರ್ ಅಪರಾಧಿಗಳು ಬಹಳ ಚಾಣಾಕ್ಷರಾಗಿರುತ್ತಾರೆ. ರೈತರು ಹಾಗೂ ಅಕ್ಷರ ಬಾರದ ವಯೋವೃದ್ಧರೆ ಇವರ ಟಾರ್ಗೆಟ್ ಆಗಿರುತ್ತಾರೆ. ಹಳ್ಳಿಗಳಲ್ಲಿ ಇಂತಹವರನ್ನು ಭೇಟಿ ಮಾಡುವ ಸೈಬರ್ ಅಪರಾಧಿಗಳು ಹಣ ಕೊಟ್ಟು ಅವರಿಂದ ಮೊಬೈಲ್ ಸಿಮ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ವಿವರನ್ನು ಪಡೆಯುತ್ತಾರೆ.

ಇಂತಹವರ ಸಿಮ್ ಕಾರ್ಡ್ ಬಳಸಿ ಫೋನ್ ಮೂಲಕ ಅಮಾಯಕರನ್ನು ಸಂಪರ್ಕಿಸುತ್ತಾರೆ ಅವರಿಂದ ಓಟಿಪಿ ಸೇರಿದಂತೆ ಬ್ಯಾಂಕ್ ವಿವರ ಪಡೆದು ಆನ್‌ಲೈನ್ ಮೂಲಕವಾಗಿಯೇ ಅವರ ಬ್ಯಾಂಕ್‌ನಲ್ಲಿರುವ ಹಣ ದೋಚುತ್ತಾರೆ. ಒಂದು ಸಿಮ್ ಕಾರ್ಡ್‌ನಿಂದ ನೂರಾರು ಜನರನ್ನು ಸೈಬರ್ ವಂಚನೆಯ ಖೆಡ್ಡಾಗೆ ಬೀಳಿಸುತ್ತಾರೆ ಎಂದು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಘಾಟಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) + ರಾಮನಗರ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದಸರಾ ಚಲನಚಿತ್ರೋತ್ಸವ

(ಐನಾಕ್ಸ್ ಮಲ್ಟಿಪ್ಲೆಕ್ಸ್)

ಸ್ಕ್ರೀನ್ 2: ಬೆ.10– ಲೆಜೆಂಡ್ ಡೈರೆಕ್ಟರ್, ಮ.1– ಭೈರತಿ ರಣಗಲ್, ಸಂ.4– ಸು ಫ್ರಮ್ ಸೋ, ಸಂ.7– ಅಜ್ಞಾತವಾಸಿ

ಸ್ಕ್ರೀನ್ 3: ಬೆ.10.15– 10ನೇ ಕ್ಲಾಸು/ಸ್ವಲ್ಪ ಮಾಸು, ಮ.1.15– ಕನಸೊಂದು ಶುರುವಾಗಿದೆ, ಸಂ.4.15– ಸ್ವಪ್ನ ಮಂಟಪ, ರಾ.7.15– ಸೆಪ್ಟೆಂಬರ್ 13

ಸ್ಕ್ರೀನ್ 4: ಬೆ.10.30– ಬರ್ಲಿನ್ ಅಲೆಕ್ಸಾಂಡರ್‌ಪ್ಲಾಟ್ಸ್, ಮ.1.30– ರಿಧಂ ಆಫ್ ದಮ್ಮಮ್, ಮ.3.45– ಅದೃಷ್ಟ ಲಕ್ಷ್ಮಿ(ಕಿರುಚಿತ್ರ), ಸಂ.4.30– ಬೆನೆಡೆಟ್ಟಾ ರಾ.7.30– ಮಂಗ್ರಾ ಜೋಗಿ

ಪೊಲೀಸ್ ಚದುರಿಸಿದರು! ಅರಣ್ಯ ಸಿಬ್ಬಂದಿ ಒಗ್ಗೂಡಿಸಿದರು!!

ಮೈಸೂರು, ಸೆ.15– ಗಜಪಡೆಯ ಮರದ ಅಂಬಾರಿ ಹೊರುವ ತಾಲೀಮು ವೇಳೆ ರಸ್ತೆ ಬದಿಯಲ್ಲಿ ಮಿರಿಮಿರಿ ಮಿಂಚುವ ಆಟಿಕೆ ಮಾರುತ್ತಿದ್ದ ಹುಡುಗನೊಂದಿಗೆ ಪೊಲೀಸರು ಹಾಗೂ ಅರಣ್ಯ ಇಲಾಖೆಯವರ ಭಿನ್ನ ವರ್ತನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಗಜಪಡೆ ಮರದ ಅಂಬಾರಿ ಹೊರುವ ತಾಲೀಮು ನೋಡಲೆಂದು ರಸ್ತೆಯ ಇಕ್ಕೆಲಗಳಲ್ಲಿ ಜನ ಕಿಕ್ಕಿರಿದಿದ್ದರು. ಈ ನಡುವೆ ಹುಡುಗನೊಬ್ಬ ಹೊಟ್ಟೆಪಾಡಿಗೆ ಮಿನುಗುವ ಆಟಿಕೆಗಳನ್ನು ಆನೆ ಸಾಗುವ ರಸ್ತೆ ಬದಿ ಮಾರಾಟ ಮಾಡುತ್ತಿದ್ದ. ಇದನ್ನು ನೋಡಿ ಸಿಟ್ಟಿಗೆದ್ದ ಪೊಲೀಸ್ ಸಿಬ್ಬಂದಿ, ಆಟಿಕೆಗಳನ್ನು ಲಾಠಿಯಿಂದ ತಳ್ಳಿ ಚೆಲ್ಲಾಪಿಲ್ಲಿ ಮಾಡಿ ಗದರಿದರು. ಹಿಂದೆಯೇ ಬರುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಆಟಿಕೆಗಳನ್ನು ಆಯ್ದು ಆ ಹುಡುಗನಿಗೆ ನೀಡಿದರು. ಒಂದೇ ಬಣ್ಣದ ಸಮವಸ್ತ್ರ ಧರಿಸಿರುವ ಈ ಸರ್ಕಾರಿ ಸಿಬ್ಬಂದಿ ಇಲಾಖೆ ಮಾತ್ರವಲ್ಲ, ಮನಃಸ್ಥಿತಿಯೂ ಭಿನ್ನವಾಗಿದೆಯೇ? ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸುತ್ತಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಸೆ.15–ಕರಾಮುವಿವಿ ಸ್ಪರ್ಧಾ ತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ವಿವಿಧ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಸೆ.20ರೊಳಗೆ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ದೂ. 0821–2515944 ಸಂಪರ್ಕಿಸಬಹುದು.

ಹಿಂದೂ ಸಮಾಜದಲ್ಲಿ ಸಮಾನತೆ ಇದ್ದಿದ್ದರೆ ಬೇರೆ ಧರ್ಮಕ್ಕೆ ಏಕೆ ಮತಾಂತರ ಆಗುತ್ತಿದ್ದರು!

ಸಿದ್ದರಾಮಯ್ಯ ಹೇಳಿಕೆಗೆ ಬಿಜೆಪಿ ಗರಂ: ಸಿಎಂ ಮತಾಂತರಕ್ಕೆ ಪ್ರಚೋದನೆ

ಬೆಂಗಳೂರು, ಸೆ.15– ಹಿಂದೂ ಸಮಾಜದಲ್ಲಿ ಸಮಾನತೆ ಇದ್ದಿದ್ದರೆ ಜನ ಯಾಕೆ ಬೇರೆ ಧರ್ಮಕ್ಕೆ ಮತಾಂತರ ಆಗುತ್ತಿದ್ದರು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಪಕ್ಷ ಬಿಜೆಪಿ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಗಳು ಆಡಿರುವ ಈ ಮಾತು ಮತಾಂತರಕ್ಕೆ ಪರೋಕ್ಷ ಪ್ರಚೋದನೆ ನೀಡಿದಂತಿದೆ. ಸಾಮಾಜಿಕ ಸಮೀಕ್ಷೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ಛಿದ್ರಗೊಳಿಸುವ ಅಜೆಂಡಾವನ್ನು ಕಾಂಗ್ರೆಸ್ ಇಟ್ಟುಕೊಂಡಂತೆ ಕಾಣುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹಾಗೂ ಸಿ.ಟಿ.ರವಿ ಪ್ರತ್ಯೇಕವಾಗಿ ಮಾತನಾಡಿ ತಿರುಗೇಟು ನೀಡಿದ್ದಾರೆ.

ವಿಜಯೇಂದ್ರ ಆಕ್ರೋಶ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು, ಹಿಂದೂ ಧರ್ಮವನ್ನು ಅವಹೇಳನ ಮಾಡುವುದು, ಧಾರ್ಮಿಕ ಶ್ರದ್ಧಾ ಕೇಂದ್ರಗಳ ವಿರುದ್ಧ ಅಪಪ್ರಚಾರ ನಡೆಸುವಂತೆ ಕುಮ್ಮಕ್ಕು ನೀಡುತ್ತಿದ್ದ ಕಾಂಗ್ರೆಸ್ ಸರ್ಕಾರ ಈಗ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಹಿಂದೂ ಧರ್ಮಿಯರನ್ನು ಮತಾಂತರಗೊಳ್ಳುವಂತೆ ಪ್ರಚೋದಿಸುತ್ತಿದೆ. ಮುಖ್ಯಮಂತ್ರಿಗಳು ಹೇಳಿರುವ ಹೇಳಿಕೆ ಇದಕ್ಕೆ ಪುಷ್ಟಿ ನೀಡುತ್ತಿದೆ ಎಂದು ಕಿಡಿಕಾರಿದ್ದಾರೆ.

ಸಿದ್ದರಾಮಯ್ಯನವರ ರಾಜಕೀಯ ಸಿದ್ಧಾಂತ ಹಿಂದೂ ಧರ್ಮ ಹಾಗೂ ಹಿಂದೂ ಪದ್ಧತಿಗಳನ್ನು ಅವಹೇಳನ ಮಾಡುವುದು ಇತರ ಧರ್ಮೀಯರನ್ನು ಓಲೈಸುವುದು ಮಾತ್ರ ಅವರು ಸಮಾಜವಾದಿಯೂ ಅಲ್ಲ, ಭಾರತೀಯ ಸಂಸ್ಕೃತಿಯ ಪ್ರತಿಪಾದಕರೂ ಅಲ್ಲ. ಸನಾತನ ಹಿಂದೂ ಧರ್ಮ ಹಾಗೂ ಭಾರತೀಯ ಸಂಸ್ಕೃತಿಯನ್ನು ವಿರೋಧಿಸುವುದು ಅವರ ಮನಸ್ಥಿತಿ. ಇದು ರಾಜ್ಯದ ಆಡಳಿತದ ಮೇಲೆ ಪ್ರತಿಬಿಂಬಿತವಾಗಿದೆ. ಅದರ ಪ್ರತೀಕವಾಗಿಯೇ ಸರಣಿ ರೂಪದಲ್ಲಿ ಹಿಂದೂ ವಿರೋಧಿ ಧೋರಣೆಗಳು ಸರ್ಕಾರದಿಂದ ಅನಾವರಣಗೊಳ್ಳುತ್ತಿದೆ ಎಂದು ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಆಯೋ ಗದ ಮುಖೇನ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಯ ಮಾಹಿತಿ ಸಂಗ್ರಹಿಸುವುದರ ಬದಲು ಮತಾಂತರದ ಹೆಸರನ್ನು ಮುಂದು ಮಾಡಿ ಮಾತನಾಡುತ್ತಿರುವ ಮುಖ್ಯಮಂತ್ರಿಗಳ ನಡೆ ಶಂಕಾಸ್ಪದವಾಗಿದೆ. ಸಾಮಾಜಿಕ ಸಮೀಕ್ಷೆಯ ಹೆಸರಿನಲ್ಲಿ ಹಿಂದೂ ಸಮಾಜ ವನ್ನು ಛಿದ್ರಗೊಳಿಸುವ ಅಜೆಂಡಾವನ್ನು ಕಾಂಗ್ರೆಸ್ ಇಟ್ಟುಕೊಂಡಂತೆ ಕಾಣುತ್ತಿದೆ. ಹಿಂದೂ ಧರ್ಮದ ಅಸಮಾನತೆಯ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು ಇಸ್ಲಾಂ ಧರ್ಮದಲ್ಲಿನ ವೈರುಧ್ಯಗಳು, ಮಹಿಳೆಯರ ಮೇಲಿನ ಶೋಷಣೆ, ದೇಶಕ್ಕಿಂತ ಧರ್ಮವೇ ಮೊದಲು ಎನ್ನುವ ಅವರ ಸಿದ್ಧಾಂತವನ್ನು ಏಕೆ ಪ್ರಶ್ನಿಸುವುದಿಲ್ಲ ಎಂದು ಅವರು ಸಾಮಾಜಿಕ ಜಾಲತಾಣದ ಮೂಲಕ ವಿಜಯೇಂದ್ರ ಹರಿಹಾಯ್ದಿದ್ದಾರೆ.



ವಿಜಯೇಂದ್ರ

ಆಮಿಷ ಒಡ್ಡಿ ಮತಾಂತರ: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಸಂವಿಧಾನದಲ್ಲಿ ಕೇವಲ 6 ಧರ್ಮಗಳು ಇವೆ. ಅಷ್ಟೇ ಧರ್ಮಗಳ ಹೆಸರು ಬರೆಯಬೇಕು. ರಾಜ್ಯದಲ್ಲಿ ಮತಾಂ ತರಗೊಂಡ ಕ್ರೈಸ್ತರು ಎನ್ನುವ ಹೊಸ ಕಾಲಂ ಮಾಡಿದ್ದಾರೆ ಇದೊಂದು ಧರ್ಮದ ರೀತಿ ಕಾಲಂ ಮಾಡಿದ್ದಾರೆ. ಇದು ಕಾನೂನು ಬಾಹಿರ, ಸಂವಿಧಾನ ಬಾಹಿರ ಹಾಗೂ ರಾಜಕೀಯ ಪ್ರೇರಿತವಾಗಿದೆ ಎಂದು ಹೇಳಿದರು.

ಎರಡೂ ಕಡೆಯೂ ಮತಾಂತರ ಆಗಿರುತ್ತದೆ. ಆದರೆ, ಮುಖ್ಯಮಂತ್ರಿಗಳು ಕ್ರೈಸ್ತ ಧರ್ಮದ ಮತಾಂತರಕ್ಕೆ ಮಾತ್ರ ಮನ್ನಣೆ ಕೊಟ್ಟಿರುವುದು ಯಾಕೆ? ಇದು ಸಮಾನತೆ ಪ್ರಶ್ನೆ ಅಲ್ಲ. ಆಸೆ ಆಮಿಷ ಒಡ್ಡಿ ಮತಾಂತರ ಮಾಡಲಾಗಿದೆ ಅವರ ಬಡತನದ ದುರುಪಯೋಗ ಹಾಗೂ ಶಿಕ್ಷಣ ಇಲ್ಲದಿರೋದನ್ನು ದುರುಪಯೋಗಪಡಿಸಿಕೊಂಡು ಮತಾಂತರ ಮಾಡಲಾಗಿದೆ. ಹಲವರು ಕ್ರೈಸ್ತಧರ್ಮದಿಂದ ವಾಪಸ್ ಬಂದಿದ್ದಾರೆ. ಈ ಮತಾಂತರದ ಬಗ್ಗೆಯೇ ಹಲವು ಅನುಮಾನಗಳಿವೆ ಎಂದು ತಿಳಿಸಿದರು.

ಅಸಮಾನತೆಗೆ ಕಾಂಗ್ರೆಸ್ ಕಾರಣ: ಮಾಜಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮಾತನಾಡಿ, ಮತಾಂತರ ಆಗಲು ಜನರಿಗೆ ಸ್ವಾತಂತ್ರ್ಯ ಇದೆ ಎನ್ನುವುದನ್ನು ಒಪ್ಪೋಣ. ಕುರುಬ ಕ್ರಿಶ್ಚಿಯನ್, ಗೌಡ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್ ಎಂದು ನಮೂದಿಸಲು ಯಾವ ಕಾನೂನಿನಲ್ಲಿ ಅವಕಾಶ ಇದೆ? ಸಮಾನತೆ ಇನ್ನೂ ಬಂದಿಲ್ಲ ಎನ್ನುವುದಾದರೆ ಹಿಂದೆ 70 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಪ್ರಶ್ನೆ ಮಾಡಬೇಕಲ್ಲವೇ? ಇದಕ್ಕೆ ಸಿದ್ದರಾಮಯ್ಯ ಅವರು ಉತ್ತರ ನೀಡಬೇಕು ಎಂದು ಆಗ್ರಹಿಸಿದರು.

ಬೇರೆ ಧರ್ಮದಲ್ಲಿ ಅಸಮಾನತೆ ಇಲ್ಲವೆ?: ಮಾಜಿ ಸಚಿವ ಸಿ.ಟಿ.ರವಿ, ಅಸಮಾನತೆ ಬರಿ ಹಿಂದೂ ಸಮಾಜದಲ್ಲಿ ಮಾತ್ರ ಇದೆಯೇ? ಉಳಿದ ಕಡೆಗಳಿಗೆ ಇಲ್ಲವೇ? ಅಸಮಾನತೆಗೆ ಹಲವು ಮುಖಗಳಿವೆ ಅಷ್ಟೆ ಯಾಕೆ ನಿಮ್ಮ ಕಾಂಗ್ರೆಸ್ ಪಕ್ಷದೊಳಗೆಯೇ ಅಸಮಾನತೆ ಇಲ್ಲವೇ ಸಿದ್ದರಾಮಯ್ಯನವರೇ ಎಂದು ಪ್ರಶ್ನಿಸಿದ್ದಾರೆ.

ಮರ ಕಡಿಯಲು ಅನುಮತಿ ನೀಡದಿದ್ದರೆ ಪ್ರಭಾವಿಗಳು ಒತ್ತಡ ಹಾಕ್ತಾರೆ; ಅನುಮತಿ ನೀಡಿದರೆ ಪರಿಸರವಾದಿಗಳಿಂದ ಆಕ್ರೋಶ...

ಮೈಗ್ರಾಪ ಸಂವಾದದಲ್ಲಿ ಅರಣ್ಯಾಧಿಕಾರಿ ಅಳಲು



ಅರಣ್ಯ ಇಲಾಖೆ ಡಿಸಿಎಫ್ ಕೆ.ಪರಮೇಶ್ ಸಮ್ಮುಖದಲ್ಲಿ 'ಮರಗಣತಿ' ಕುರಿತು ಎಂಜಿಪಿ ಸದಸ್ಯರು ಚರ್ಚೆ ನಡೆಸುತ್ತಿರುವ ದೃಶ್ಯ

ಮೈಸೂರು, ಸೆ.15(ಎಸ್‌ಪಿಎನ್)– ಮೈಸೂರು ನಗರದಲ್ಲಿ ಅನಗತ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿರುವ ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ಕನಿಷ್ಠ ಐದು ಅರ್ಜಿಗಳು ಪ್ರತಿನಿತ್ಯ ನನ್ನ ಟೇಬಲ್ ಮೇಲೆ ಇರುತ್ತದೆ ಎಂದು ಅರಣ್ಯ ಸಂರಕ್ಷಣಾಧಿಕಾರಿ ಕೆಪರಮೇಶ್ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿ, ಬೇಸರ ವ್ಯಕ್ತಪಡಿಸಿದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಅರಣ್ಯ ಇಲಾಖೆ ಡಿಸಿಎಫ್ ಕೆ.ಪರಮೇಶ್ ಸಮ್ಮುಖದಲ್ಲಿ ನಡೆದ 'ಮರಗಣತಿ' ಕುರಿತು ನಡೆದ ಸಂವಾದ ಸಭೆಯಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ಒಂದು ದಿನಕ್ಕೆ 100ರಿಂದ 150 ಮರಗಳ ತೆರವುಗೊಳಿಸಲು ಅನುಮತಿ ಕೋರಿ ಅರ್ಜಿಗಳನ್ನು ಸಾರ್ವಜನಿಕರು ಸಲ್ಲಿಸುತ್ತಾರೆ. ಮತ್ತೊಂದೆಡೆ ಮರಗಳನ್ನು ಕಡಿಯಲು ಅನುಮತಿ ವಿರೋಧಿಸಿ ಎಂಜಿಪಿ ಸೇರಿದಂತೆ ಇತರೆ ಪರಿಸರವಾದಿಗಳು ತಕರಾರು ಅರ್ಜಿ ನೀಡುತ್ತಿದ್ದಾರೆ ಎಂದು ತಮ್ಮ ಸಂಕಷ್ಟ ಪರಿಸ್ಥಿತಿಯನ್ನು ಸಭೆಗೆ ತಿಳಿಸಿದರು.

ಮರಗಳನ್ನು ಕಡಿಯಲು ಅನುಮತಿ ನೀಡದಿದ್ದರೆ, ನಮ್ಮ ಪ್ರಭಾವಿಗಳಿಂದ ಒತ್ತಡ, ಅನುಮತಿ ನೀಡಿದರೆ, ಪರಿಸರವಾದಿಗಳ ಆಕ್ರೋಶ ಎದುರಿಸಬೇಕಾಗಿದೆ. ಒಮ್ಮೊಮ್ಮೆ ಸಿಎಂ ಕಚೇರಿ, ಸಚಿವರು, ಶಾಸಕರಿಂದಲೂ ಒತ್ತಡ ಬರುತ್ತದೆ. ಇವೆರಡರ ಮಧ್ಯೆ ಅವಶ್ಯಕತೆ ತಕ್ಕಂತೆ ಕಡಿಮೆ ಪ್ರಮಾಣದಲ್ಲಿ ಮರಗಳನ್ನು ಕಡಿಯಲು ಅನುಮತಿ ನೀಡುವುದು ಅನಿವಾರ್ಯತೆ ಇದೆ ಎಂದು ತಮ್ಮ ಅಳಲು ತೋಡಿಕೊಂಡರು.

ಮಾಜಿ ಶಾಸಕರಿಂದ ಧಮ್ಕಿ: ಎಂಜಿಪಿ ಸದಸ್ಯ ಬಾನು ಪ್ರಶಾಂತ್ ಮಾತನಾಡಿ, ಸರಸ್ವತಿಪುರಂ ದೇ.ಜವರೇಗೌಡ ಪಾರ್ಕ್ ಪಕ್ಕದಲ್ಲಿ ಮಾಜಿ ಶಾಸಕರೊಬ್ಬರ ಮನೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಮನೆಗೆ ಎದುರಾಗಿರುವ ಮರಗಳನ್ನು ಅರಣ್ಯ ಇಲಾಖೆ ಮುಖಾಂತರವೇ ಅನುಮತಿ ಪಡೆದು ಕತ್ತರಿಸಿ, ವಿಲೇವಾರಿ ಮಾಡಿದ್ದಾರೆ. ಇದನ್ನು ನಾನು ಪ್ರಶ್ನಿಸಿದಾಗ, ಆ ಮಾಜಿ ಶಾಸಕರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಧಮ್ಕಿ ಹಾಕಿದ್ದಾರೆ. ಇದರ ಬಗ್ಗೆ ಅರಣ್ಯ ಇಲಾಖೆ ಏಕೆ ಕ್ರಮ ವಹಿಸಿಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅರಣ್ಯಾಧಿಕಾರಿಗಳು, ಈ ಸಮಸ್ಯೆ ಬಗ್ಗೆ ಗಮನಹರಿಸುತ್ತೇನೆ ಎಂದರು.

ಪರಿಸರವಾದಿ ಡಾ.ಸ್ಮಿತಾ ಹೆಗಡೆ ಮಾತನಾಡಿ, ಮಂಗಳೂರು ನಗರದಲ್ಲಿ ವಿವಿಧ ಪರಿಸರವಾದಿ ಸಂಘಟನೆಗಳ ಸದಸ್ಯರೊಂದಿಗೆ ಒಟ್ಟುಗೂಡಿ, ಮರಗಣತಿ ನಡೆಸಲಾಗಿದೆ. ನಾವು ನಡೆಸಿದ ಮರಗಣತಿ ವರದಿಯನ್ನು ಅಲ್ಲಿನ ಸ್ಥಳೀಯ ಸಂಸ್ಥೆಗೆ ನೀಡಿ, ಎಲ್ಲೆಲ್ಲಿ ಮರಗಳನ್ನು ಕಡಿಯಲಾಗಿದೆ. ಮರ ಕಡಿದ ಜಾಗದಲ್ಲಿ ತಾಪಮಾನ ಎಷ್ಟಿದೆ?. ಹೆಚ್ಚು ಮರಗಳಿರುವ ಜಾಗದಲ್ಲಿ ಆಕ್ಸಿಜನ್ ಉತ್ಪತ್ತಿ, ತಾಪಮಾನ ಎಲ್ಲಾ ಅಂಶಗಳನ್ನು ಒಟ್ಟುಗೂಡಿಸಿ ವರದಿ ನೀಡಲಾಗಿದೆ. ಇದರಿಂದ ಯಾವ ಯಾವ ಜಾಗದಲ್ಲಿ ಮರಗಳು ಕಡಿಮೆ ಇವೆ. ಆ ಜಾಗದಲ್ಲಿ ಮರ ನೆಡುವ ಕಾರ್ಯಕ್ಕೆ ಅಲ್ಲಿನ ಸ್ಥಳೀಯ ಆಡಳಿತ ಚಾಲನೆ ನೀಡಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಂಗಳೂರಿನಲ್ಲಿ ಮರಗಣತಿ ನಡೆಸುವಾಗ ಒಂದೊಂದು ಜಾಗದಲ್ಲಿ ಒಂದೊಂದು ರೀತಿ ತಾಪಮಾನ ದಾಖಲಾಗುತ್ತಿದೆ. ಮಂಗಳೂರು ವಿಮಾನ ನಿಲ್ದಾಣದ ಬಳಿ ಮರಗಳ ಸಂಖ್ಯೆ ಕಡಿಮೆ ಇರುವುದರಿಂದ ತಾಪಮಾನದಲ್ಲಿ ಏರುಪೇರಾಗಿರುವ ಅಂಶಗಳನ್ನು ಸ್ಥಳೀಯ ಸಂಸ್ಥೆಗೆ ಗೊತ್ತಾಗಿ ಇದೀಗ ಆ ಜಾಗದಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಿರುವ ಅಂಶವನ್ನು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಡಿ.ವಿ.ದಯಾನಂದ ಸಾಗರ್, ಶೋಭ ಸಾಂಬಶಿವನ್, ಟಿ.ಎಂ. ಪ್ರಮೋದ್ ಕುಮಾರ್, ರೇಣು ಅಗ್ರವಾಲ್, ಯಶ್‌ಜೈನ್, ಎಂ.ಅಭಿಲಾಸ್, ಸಿ.ಶಶಾಂಕ್‌ನಾಯಕ್, ಎಸ್.ಕೀರ್ತನಾ, ವಿ.ತೇಜಸ್ವಿ, ಗಾಯಿತ್ರಿ ಕೃಪಾಕರ್, ಎಸ್.ವಿ.ಶಂಕರ್, ಡಾ.ಯು.ಆರ್.ರಕ್ಷಿತ್, ಕೆ.ಜಿ.ಶಶಿಧರ್, ಎನ್.ಮನೀತ್, ಎ.ದುರ್ಗಾ ಪ್ರಸಾದ್, ಡಾ.ಎಸ್.ಶಂಕರ ಭಟ್, ರವಿಬಳೆ, ರಘುನಂದನ್, ಎಂ.ಎಸ್. ಸುಬ್ರಹ್ಮಣ್ಯ ಸೇರಿದಂತೆ ಇತರರಿದ್ದರು.

ಮೈಸೂರಲ್ಲಿ ಮರಗಣತಿಗೆ ಎಂಜಿಪಿ ಜೊತೆ ವಿವಿಧ ಸಂಘಟನೆಗಳ ಒಪ್ಪಂದ



ಅರಣ್ಯ ಇಲಾಖೆ ಡಿಸಿಎಫ್ ಕೆ.ಪರಮೇಶ್ ಸಮ್ಮುಖದಲ್ಲಿ 'ಮರಗಣತಿ' ಕುರಿತು ವಿವಿಧ ಸಂಘಟನೆಗಳೊಂದಿಗೆ ಮಾಡಿಕೊಂಡ ಒಪ್ಪಂದ ಪತ್ರವನ್ನು ಎಂಜಿಪಿ ಸದಸ್ಯರು ಪ್ರದರ್ಶಿಸುತ್ತಿರುವ ದೃಶ್ಯ

ಮೈಸೂರು ಸೆ.15(ಎಸ್‌ಪಿಎನ್)– ಮಂಗಳೂರು ನಗರಪಾಲಿಕೆಯಲ್ಲಿ ಪರಿಸರ ತಜ್ಞೆ ಡಾ.ಸ್ಮಿತಾ ಹೆಗಡೆ ನೇತೃತ್ವದ ಸಂಘಟನೆಯು ನಡೆಸಿರುವ 'ಮರಗಣತಿ' (ಟ್ರಿ ಸೆನ್ಸಸ್) ಯಶಸ್ವಿಯಾಗಿದ್ದು, ಅದೇ ಮಾದರಿಯಲ್ಲಿ ಮೈಸೂರಿನಲ್ಲಿ ನಡೆಸಲು ಮೈಸೂರು ಗ್ರಾಹಕರ ಪರಿಷತ್‌ನೊಂದಿಗೆ ವಿವಿಧ ಸಂಘಟನೆಗಳ ಮುಖ್ಯಸ್ಥರು ಒಪ್ಪಂದಕ್ಕೆ ಭಾನುವಾರ ಸಹಿ ಹಾಕಿದರು.

ಎಂಜಿಪಿಯ ಮಹತ್ವದ ಒಪ್ಪಂದಕ್ಕೆ ಅರಣ್ಯ ಇಲಾಖೆ ಮೈಸೂರು ಜಿಲ್ಲೆಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ್ ಸಮ್ಮುಖದಲ್ಲಿ ಸೆಂಟರ್ ಫಾರ್ ಅಡ್ವಾನ್ಸ್ ಲರ್ನಿಂಗ್ ಸಂಸ್ಥೆಯ ಮುಖ್ಯಸ್ಥೆ ಡಾ.ಸ್ಮಿತಾ ಹೆಗಡೆ, ವಿದ್ಯಾವರ್ಧಕ ಕಾಲೇಜು ಆಫ್ ಇಂಜಿನಿಯರಿಂಗ್‌ನ ಎಂ.ಎನ್. ಜೈಗಣೇಶ್, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಡಾ.ಪ್ರಮೋದ್, ಎಂಜಿಪಿಯ ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ ಹಾಗು ಸಂಚಾಲಕ ಸಂಜಯ್ ದತ್ತಾತ್ರಿ ಹಾಗೂ ಇತರೆ ಸದಸ್ಯರ ಉಪಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಅ.10ರಿಂದ ಚಾಲನೆ: ಪರಿಸರವಾದಿ ಡಾ.ಸ್ಮಿತಾ ಹೆಗಡೆ ನೇತೃತ್ವದಲ್ಲಿ 'ಮರಗಣತಿ' ನಡೆಸಲು ಎಂಜಿಪಿಯೊಂದಿಗೆ 200ಕ್ಕೂ ಹೆಚ್ಚು ಸ್ವಯಂಸೇವಕರು ಮುಂದೆ ಬಂದಿದ್ದಾರೆ. ಇವರ ಜೊತೆಗೆ ಇತರ ಜೋಡಿಸಿಕೊಂಡು ಅ.10ರಿಂದ ಮರಗಣತಿ ಕಾರ್ಯಕ್ಕೆ ಚಾಲನೆ ನೀಡಿ. ಆರು ತಿಂಗಳಲ್ಲಿ ಮುಗಿಸಲು ನಿರ್ಧರಿಸಲಾಗಿದೆ ಎಂದು ಭಾಮೀ ವಿ.ಶೆಣೈ ಸಭೆಗೆ ತಿಳಿಸಿದರು.

ಮರಗಣತಿ ವರದಿಯನ್ನು ಸ್ಥಳೀಯ ಆಡಳಿತ ಹಾಗೂ ಅರಣ್ಯ ಇಲಾಖೆಗೂ ಒಂದು ಪ್ರತಿ ನೀಡಲಾಗುವುದು. ಇದಕ್ಕೆ ಅರಣ್ಯ ಇಲಾಖೆಯ ಸಹಕಾರವೂ ಅತೀ ಮುಖ್ಯ ಎಂದು ಕೆಪರಮೇಶ್‌ರಲ್ಲಿ ಮನವಿ ಮಾಡಿದರಲ್ಲದೆ, ಹೆಚ್ಚಿನ ಮಾಹಿತಿ ಪಡೆಯುವವರು ಸಂಚಾಲಕ ಸಂಜಯ್ ದತ್ತಾತ್ರಿ ಅವರ ಮೊ: 97910–39363 ಅನ್ನು ಸಂಪರ್ಕಿಸಬಹುದು.



ಶ್ರೀ ಚೊಟ್ಟಂಗಡ ರಿಕ್ಕಿ ಸೋಮಣ್ಣ

ಮಾದ ಕಾರ್ಯ ಆಹ್ವಾನ ಪತ್ರಿಕೆ

ಶ್ರೀಮತಿ ಚೊಟ್ಟಂಗಡ ಪಾರ್ವತಿ ನಂಜಪ್ಪ ಮಾಡುವ ವಿಜ್ಞಾಪನೆಗಳು ದಿನಾಂಕ : 12.09.2025ರ ಶುಕ್ರವಾರ ನನ್ನ ಮಗ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಬಂಧವಾದ ಅವರ ತಿಥಿ ಕರ್ಮಾಂತರವನ್ನು ದಿನಾಂಕ: 20.09.2025ರ ಶನಿವಾರದಂದು ಬೆಳಿಗ್ಗೆ 11.30ಕ್ಕೆ 'ದಿ ರೂಸ್ಟ್ ಹೋಟೆಲ್' ಹುಣಸೂರು ರಸ್ತೆ, ಮೈಸೂರು ಇಲ್ಲಿ ನಡೆಸಲು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ

ಇಂತಿ ದುಃಖತಪ್ತರು
ಶ್ರೀಮತಿ ಚೊಟ್ಟಂಗಡ ಪಾರ್ವತಿ ನಂಜಪ್ಪ ಮತ್ತು ಕುಟುಂಬಸ್ಥರು

ಮನೆ ನಂ. 6, ಎ ಬ್ಲಾಕ್, 1ನೇ ಹಂತ, ಜೆ.ಪಿ. ನಗರ, ಮೈಸೂರು–570008

5ನೇ ವರ್ಷದ ಸವಿನೆನಪು



N. ಹನುಮಯ್ಯ
ನಿವೃತ್ತ ಸಹಾಯಕ ಸಬ್ ಇನ್ಸ್‌ಪೆಕ್ಟರ್
ಜನನ: 24–04–1953, ಮರಣ: 16–09–2020
ಪತ್ನಿ: ಕಮಲಮ್ಮ ಮತ್ತು ಕುಟುಂಬವರ್ಗದವರು

ಬೇಕಾಗಿದ್ದಾರೆ

Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-25000/-
Ph.7406 369 369

DRIVERS WANTED

Full time Driving Positions Available
* Minimum 5 year experience in Driving
* Drivers must have clear License
* Must be responsible.
Have good Driving & Communication Skills.

Contact: 9606031376, 7204271614

SURAKSHA COLLEGE OF NURSING

SVS GROUP OF INSTITUTIONS
Plot No 70 N, Hootagalli Industrial Area, Hootagalli, Mysore-570018

URGENT STAFF REQUIREMENT
- Admission counsellor
- Telecallers
- Social Media Managers

Attractive Package will be offered

Contact : 9035755155/9886666005

WANTED

STAFF REQUIREMENT AT NANJANGUD & MYSORE INDUSTRY

1.	Lorry Drivers with valid Licence	10 Nos.
2.	Fork lift drivers with valid Licence	10 Nos.
3.	Electricians with valid wireman licence	5 Nos.
4.	IBR welder with valid Licence	2 Nos.
5.	Welders (Arc & Argon)	10 Nos.
6.	Vehicle Maintenance Field officers - 2 years experience and above	2 Nos.
7.	Manpower handling Field Officers - 2 years experience and above	2 Nos.
8.	Delivery persons-at Field (Male or Female)	5 Nos.
9.	Accountatnt - 2 years experience and above	5 Nos.

Contact : 8296172693

11ನೇ ದಿನದ ಪುಣ್ಯ ಕಾರ್ಯ



ಶ್ರೀ ದಯಾನಂದ

ಇವರು ದಿನಾಂಕ 06–09–2025 ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ 17–09–2025 ಬುಧವಾರ ಬೆಳಗ್ಗೆ 11.30 ರಿಂದ 12–30 ರವರೆಗೆ ಭೂಶಾಂತಿ, 1.30ಕ್ಕೆ ಭೋಜನ ಕಾರ್ಯಕ್ರಮವನ್ನು ಪಿ. ಹೊಸಹಳ್ಳಿ ಗ್ರಾಮದ ಹತ್ತಿರ ನಮ್ಮ ಜಮೀನಿನಲ್ಲಿ ಏರ್ಪಡಿಸಲಾಗುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
–ಕುಟುಂಬವರ್ಗದವರು

ವೃದ್ಧಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

03, ಪೂರಬ್ ಪ್ಲಾಜ, 1ನೇ ಮಹಡಿ, ಬುದ್ಧ ಮಾರ್ಗ, ಸಿದ್ಧಾರ್ಥನಗರ, ಟಿ. ನರಸೀಪುರ ಮುಖ್ಯ ರಸ್ತೆ, ಮೈಸೂರು – 570 011
(ನೋ. ಸಂಖ್ಯೆ: ಡಿ.ಆರ್.ಎಂ/ಸಿ–3/ಆರ್.ಜಿ.ಎನ್/42499/2012–13 ದಿನಾಂಕ: 10–05–2012)

ಸಂ.: ವೃ.ಗ್ರ.ನಿ.ಸ.ಸಂ.ನಿ./ಮೈ ದಿನಾಂಕ: 15–09–2025

ವೃದ್ಧಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ 2024–2025 ನೇ ಸಾಲಿನ 13 ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯರೇ,

ವೃದ್ಧಿ ಗೃಹ ನಿರ್ಮಾಣ ಸಹಕಾರ ಸಂಘದ 2024–2025 ನೇ ಸಾಲಿನ 13ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 19–09–2025 ರ ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ ಅಧ್ಯಕ್ಷರಾದ ಬಿ.ಸಿ. ಲಕ್ಷ್ಮಿ ನಾರಾಯಣ್ ರವರ ಅಧ್ಯಕ್ಷತೆಯಲ್ಲಿ ಶ್ರೀ ಚಾಮುಂಡೇಶ್ವರಿ ಕನ್ವೆನ್‌ಷನ್ ಹಾಲ್, ಹೆಚ್.ಡಿ ದೇವೇಗೌಡ ಸರ್ಕಲ್ ಹತ್ತಿರ, ಬನ್ನೂರು ಮುಖ್ಯ ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ಸಂಘದ ಎಲ್ಲಾ ಸದಸ್ಯರು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿಸಲಾಗಿದೆ. ಈಗಾಗಲೇ ಆಹ್ವಾನ ಪತ್ರಿಕೆಯನ್ನು ಅಂಚೆ ಮುಖಾಂತರ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ತಿಳಿದು ಸಭೆಗೆ ಆಗಮಿಸಬೇಕೆಂದು ಕೋರಲಾಗಿದೆ.

ದಿನಾಂಕ: 19–09–2025
ಸ್ಥಳ: ಮೈಸೂರು
ಬಸ್ ಇಳಿಯುವ ಸ್ಥಳ: ದೇವೇಗೌಡ ಸರ್ಕಲ್ ಹತ್ತಿರ, ಬನ್ನೂರು ಮುಖ್ಯ ರಸ್ತೆ.

ಅಧ್ಯಕ್ಷರು: 9035239302
ಉಪಾಧ್ಯಕ್ಷರು ಮತ್ತು ಆಡಳಿತ ಮಂಡಲಿ
ಸಹಿ/– ಉಪಾಧ್ಯಕ್ಷರು

SURAKSHA COLLEGE OF NURSING

SVS GROUP OF INSTITUTIONS
Plot No 70 N, Hootagalli Industrial Area, Hootagalli, Mysore-570018

LIMITED SEATS AVAILABLE AT AFFORDABLE FEES
- GNM • B.Sc.Nursing
- Post B.Sc.Nursing, M.Sc Nursing

Contact : 9035755155/9886666005

9ನೇ ವರ್ಷದ ಸವಿನೆನಪು



ಕಾರ್ತಿಕ್

ಮರೆಯಲಾಗದ ಮಧುರ ನೆನಪುಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ನಿಮ್ಮ
ತಂದೆ: ಕುಮಾರ್
ತಾಯಿ: ಸುಧಾ,
ತಮ್ಮ: ಮೋಹನ್
ಹಾಗೂ ಕುಟುಂಬ ವರ್ಗದವರು
ತೊಣಚಿಕೊಪ್ಪಲ್ ಗ್ರಾಮ

PROPERTIES FOR SALE

Ready for Registration
Prime Locations
30x40
Near Vivekananda Circle
43X93
East Facing Ashokapuram
Railway Station 100Mtr
Near Bedarakanappa Temple.
(Brokers Excuse)
9008111454

IMMEDIATELY HIRING

"SENIOR ACCOUNTANT"
Female Candidate
(0-5 Years Experience)
Collection Team
(0-3 Years Experience)
9606217801

Cauvery Institute of Law

Virajpet-571218
Final Call For Spot Admission
LLB
3 Years Course
(Qualification any Degree)
Approved by the
BAR COUNCIL OF INDIA
NO AGE LIMIT
For Details: 8792839176

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ 10,000 (24 CT)
Mob: 9108146123

G9 projects

Designing your Dreams
Vee2 Developers
MUDA APPROVED
Khata Ready
SHOURYA LAYOUT
ADJOINING VIJAYANAGAR 4TH STAGE
20X30 Site
₹ 27 LAKHS ONLY
8088-707-707

Ministry of Culture
Government of India

Commemorating 150 Years of SARDAR PATEL 2024-2026



ಹೈದರಾಬಾದ್ ವಿಮೋಚನಾ ದಿನ

78ನೇ ಆಚರಣೆ

ವಿವಿಧತೆಯಲ್ಲಿ ಏಕತೆಯ ಭಾರತದ ಸ್ಫೂರ್ತಿಯನ್ನು ಸಂಕೇತಿಸುವ ಐತಿಹಾಸಿಕ ಮೈಲಿಗಲ್ಲು

ಸೆಪ್ಟೆಂಬರ್ 17, 2025 ಬೆಳಿಗ್ಗೆ 9.00 ಗಂಟೆಗೆ
ಸ್ಥಳ: ಪರೇಡ್ ಮೈದಾನ, ಸಿಕಂದರಾಬಾದ್, ತೆಲಂಗಾಣ



"ಹೈದರಾಬಾದ್ ವಿಮೋಚನಾ ದಿನವು ಕೇವಲ ಬರೀ ಒಂದು ದಿನಾಂಕವಲ್ಲ; ಇದು ರಾಷ್ಟ್ರೀಯ ಏಕತೆಗೆ ಸ್ಫೂರ್ತಿಯಾಗಿದೆ."
–ನರೇಂದ್ರ ಮೋದಿ
ಪ್ರಧಾನ ಮಂತ್ರಿ

ಸಾಂಸ್ಕೃತಿಕ ಮುಖ್ಯಾಂಶಗಳು



ತೆಲಂಗಾಣ, ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ 800+ ಬುಡಕಟ್ಟು ಮತ್ತು ಜಾನಪದ ನೃತ್ಯಗಾರರು



ಲಂಬಾಡಿ, ಡಪ್ಪು, ಬತುಕಮ್ಮ ಮತ್ತು ಧೋಲ್ ಪಾಠಕ್ ಸೇರಿದಂತೆ 10+ ಜಾನಪದ ನೃತ್ಯ ಪ್ರಕಾರಗಳು



ಸಿಆರ್‌ಪಿಎಫ್ & ಸಿಐಎಸ್‌ಎಫ್ ಪರೇಡ್



ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ಮುಖ್ಯ ಅತಿಥಿ

ಶ್ರೀ ರಾಜನಾಥ್ ಸಿಂಗ್
ಗೌರವಾನ್ವಿತ ರಕ್ಷಣಾ ಸಚಿವರು
ಭಾರತ ಸರ್ಕಾರ

ಘನ ಉಪಸ್ಥಿತಿ

ಶ್ರೀ ಗಜೇಂದ್ರ ಸಿಂಗ್ ಶೇಖಾವತ್
ಗೌರವಾನ್ವಿತ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರು
ಭಾರತ ಸರ್ಕಾರ

ಶ್ರೀ ಜಿ. ಕಿಶನ್ ರೆಡ್ಡಿ
ಗೌರವಾನ್ವಿತ ಕಲ್ಲಿದ್ದಲು ಮತ್ತು ಗಣಿ ಸಚಿವರು
ಭಾರತ ಸರ್ಕಾರ

ಶ್ರೀ ಬಂಡಿ ಸಂಜಯ್ ಕುಮಾರ್
ಗೌರವಾನ್ವಿತ ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವರು
ಭಾರತ ಸರ್ಕಾರ

CBC 09101/13/0018/2526

ಎಲ್ಲರಿಗೂ ಪ್ರವೇಶ ಉಚಿತ !